ಶ್ರೀ ಸಿದ್ದರಾಮಯ್ಯ: ಸದನದಲ್ಲಿ C.M. ರವರು, Home Minister ರವರು Officers ಯಾರೂ ಇಲ್ಲ.

ಶ್ರೀ ಆರ್. ರೋಷನ್ ಬೇಗ್: DGP ಯವರು ಇಲ್ಲ, Home Secretary ಯವರು ಇಲ್ಲ. Where is the Home Secretary, Where is the DGP?

ಅಧ್ಯಕ್ಷರು: ಕರೆಸೋಣ.

ಶ್ರೀ ಸಿದ್ದರಾಮಯ್ಯ: ನೀವು ಪ್ರಾರಂಭ ಮಾಡಿ ಎಂದು ಹೇಳಿದರೆ ನಾನು ಪ್ರಾರಂಭಿಸುತ್ತೇನೆ.

ಅಧ್ಯಕ್ಷರು: ಅವರನ್ನು ಕರೆಸುತ್ತೇನೆ. ಅವರು ಬರುತ್ತಾರೆ. ತಾವು ಮಾತನಾಡಲು start ಮಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮತ್ತೇಕೆ ಚರ್ಚೆ?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ತಾವು ಮತನಾಡಬಹುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಏನು ಮಾಡಿದರೂ ನಿಮ್ಮನ್ನು Minister ಮಾಡುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಈ ವಿಚಾರ ಆವತ್ತೇ ಮುಗಿದಿದೆ. ಅಲ್ಲಿ ಶಾಂತ ವಾತಾವರಣ ಇದೆ.

ಶ್ರೀ ಸಿದ್ದರಾಮಯ್ಯ: ನಾನು ಏನು ಹೇಳುತ್ತೇನೆ ಅದನ್ನು ಕೇಳಿದ ಬಳಿಕ ತಾವು ಮಾತನಾಡಿ. ಎಲ್ಲವನ್ನೂ ಕೇಳಿ walkout ಮಾಡಿ.

ಶ್ರೀ ಆರ್. ರೋಷನ್ ಬೇಗ್: ಇಲ್ಲಿ Officials ಇರಬೇಕು.

ಅಧ್ಯಕ್ಷರು: ಬರುತ್ತಾರೆ.

ಶ್ರೀ ಆರ್. ರೋಷನ್ ಬೇಗ್: Home Department ನಿಂದ ಯಾರಿದ್ದಾರೆ?

ಅಧ್ಯಕ್ಷರು: Home Department ಅಧಿಕಾರಿಗಳನ್ನು ಕರೆಸಿ, Home Minister ರವರನ್ನು ಕರೆಸಿ.

ಶ್ರೀ ಸಿದ್ದರಾಮಯ್ಯ: ಸದನದಲ್ಲಿ Chief Whip ಯಾವಾಗಲೂ ಇರುವುದಿಲ್ಲ. ಅವರು ಎಲ್ಲಿ ಹೋಗುತ್ತಾರೆ?

ಅಧ್ಯಕ್ಷರು: ಇಲ್ಲಿ ಅವರೇ ಜಾಸ್ತಿ ಇರುತ್ತಾರೆ.

7. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ಮೈಸೂರು ನಗರದಲ್ಲಿ ನಡೆದ ಕೋಮು ಗಲಭೆ ಮತ್ತು ಪೊಲೀಸ್ ಕಾರ್ಯಾಚರಣೆಯಿಂದಾಗಿ ಅಮಾಯಕರು ಸಾವಿಗೀಡಾಗಿರುವ ವಿಚಾರ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಶಂಕರಲಿಂಗೇಗೌಡರೆ, ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನೀವೇನಾದರೂ ಮಾತನಾಡುವುದಿದ್ದರೆ ನಂತರ ಮಾತನಾಡಿ. ಮಧ್ಯದಲ್ಲಿ ಮಾತನಾಡುವುದು ಬೇಡ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಈ ತಿಂಗಳ 9ನೇ ತಾರೀಕು ಮೈಸೂರಿನಲ್ಲಿ ಇತ್ತೀಚೆಗೆ ನಡೆದಿರತಕ್ಕ ಗಲಭೆ ಬಗ್ಗೆ ನಿಲುವಳಿ ಸೂಚನೆ ಮೂಲಕ ಇಲ್ಲಿ ಪ್ರಸ್ತಾಪ ಮಾಡಿದ್ದೆ. ತಾವು ನಾನು preliminary submission ಮಾಡಲಿಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದ್ದಿರಿ. ಅದು ಬಹಳ ತುರ್ತಾದ, ಜರೂರಾದ, ಬಹಳ ಪ್ರಾಮುಖ್ಯವಾದ ಮತ್ತು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಷಯವಾಗಿದ್ದರಿಂದ ನಾನು ಪ್ರಸ್ತಾಪ ಮಾಡಿದಾಗ ತಾವು ಅದನ್ನು Rule 60 ರಿಂದ Rule 69ಕ್ಕೆ convert ಮಾಡಿ Rule 69 ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೋಸ್ಕರ ನಿಮಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಮೈಸೂರಿನಲ್ಲಿ ಜುಲೈ 2, 3 ನೇ ತಾರೀಖು ನಡೆದ ಘಟನೆ ಅತ್ಯಂತ ದುರದೃಷ್ಟಕರ ಎಂದು ಹೇಳಬಯಸುತ್ತೇನೆ. ತಮಗೆಲ್ಲ ಗೊತ್ತಿರುವ ಹಾಗೆ, ಮೈಸೂರು ನಗರ ಒಂದು ಸಾಂಸ್ಕೃತಿಕ ನಗರ. ಮೈಸೂರಿನ ಜನರು ಶಾಂತಿಪ್ರಿಯರು ಮತ್ತು ಎಲ್ಲಾ ಧರ್ಮದ, ಎಲ್ಲಾ ವರ್ಗದ ಜನರು ಸಹಬಾಳ್ವೆ ಬಯಸುವವರು. ಮೈಸೂರಿನಲ್ಲಿ ಕೋಮು ಗಲಭೆ ನಡೆದಿರುವುದು ಬಹಳ ವಿರಳ. 1986ನೇ ಇಸವಿಯಲ್ಲಿ ನಡೆದ ಒಂದು ಸಣ್ಣ ಘಟನೆ ಬಿಟ್ಟರೆ 1992ರಲ್ಲಿ ಬಾಬ್ರಿ ಮಸೀದಿ ಧ್ವಂಸ ಮಾಡಿ, ಅದರ consequential incidents ಬಿಟ್ಟರೆ ಮೈಸೂರಿನಲ್ಲಿ ಇನ್ಯಾವ ಘಟನೆಗಳೂ ಮತ್ತು ಕೋಮು ಗಲಭೆಗಳು ಇಲ್ಲಿಯವರೆಗೆ ನಡೆದಿರಲಿಲ್ಲ. ಮೈಸೂರಿನಲ್ಲಿ ಏಪ್ರಿಲ್ 2 ಮತ್ತು 3ರಂದು ಎರಡು ಘಟನೆಗಳು ನಡೆದಿವೆ. ಆಮೇಲೆ ಜುಲೈ 2, 3 ರಂದು ಘಟನೆ ನಡೆದಿದ್ದು ಇವತ್ತಿಗೂ ಕೂಡ ಮೈಸೂರು ನಗರದಲ್ಲಿ curfew ಇದೆ, ನಾಳೆಯೂ curfew ಇದೆ. ನಾನು 9ನೇ ತಾರೀಖು ವಿಷಯ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು, curfew ಇಲ್ಲ, ನೀವು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ, ತಪ್ಪು ಮಾಹಿತಿ ಕೊಡುತ್ತೀದ್ದೀರಿ ಎಂದು ಹೇಳಿದರು. ಆವತ್ತೂ curfew ಇತ್ತು, 144 section ಜಾರಿಯಲ್ಲಿತ್ತು. ಇವತ್ತೂ ಜಾರಿಯಲ್ಲಿದೆ. ಆದರೆ, ಇವತ್ತು ಜನರು ಮೈಸೂರು ನಗರದಲ್ಲಿ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಜನರು ಕಾನೂನಿನ ವಿಶ್ವಾಸ ಕಳೆದುಕೊಳ್ಳುವ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಈ ವರ್ಷದ ಏಪ್ರಿಲ್ 2ರಂದು ನಡೆದ ಘಟನೆ ಕ್ಷುಲ್ಲಕ ವಿಚಾರಕ್ಕೆ ನಡೆದ ಒಂದು ಸಣ್ಣ ಘಟನೆಯಾಗಿದೆ. ಯುಗಾದಿ ಹಬ್ಬದ ಸಮಯದಲ್ಲಿ ಹಬ್ಬದ ಎರಡನೇ ದಿನ ಸಾಮಾನ್ಯವಾಗಿ ನಮ್ಮ ಕಡೆ ಇಸ್ಪೀಟ್ ಆಟ

ಆಡುತ್ತಾರೆ. ಹಾಗೆಯೇ, ಇಲ್ಲಿ ಇಸ್ಪೀಟ್ ಆಟ ಆಡುವಾಗ ದುಡ್ಡು ಕಳೆದುಕೊಂಡವರು ಮತ್ತು ಗೆದ್ದವರ ಮಧ್ಯೆ ಜಗಳವಾಗುತ್ತದಷ್ಟೆ. ಅದರಲ್ಲಿ ಗೆದ್ದವರು ದುಡ್ಡು ಕೊಡಿ ಎಂದು ಸೋತವರಿಗೆ demand ಮಾಡುತ್ತಾರೆ. ಆಗ ಸೋತವರು ದುಡ್ಡು ಕೊಡಲು ಆಗದೇ ಏಟು ತಿಂದರು. Unfortunately they are Muslim boys. ಆಗ ಅವರಿಗೆ ಹೊಡೆಯುತ್ತಾರೆ. ಅವರು ಹೋಗಿ Police station ನಲ್ಲಿ complaint ಕೊಡುತ್ತಾರೆ. ಇವೆಲ್ಲ ಯಾವಾಗಲೂ ನಡೆಯುವುದು ಉದಯಗಿರಿ police stationನಲ್ಲಿಯೇ. ಈ ಎರಡೂ incident ನಡೆದಿರುವುದು ಕೂಡ ಉದಯಗಿರಿ police station ವ್ಯಾಪ್ತಿಯಲ್ಲಿ. ಈ ಉದಯಗಿರಿ Police station ವ್ಯಾಪ್ತಿಯಲ್ಲಿ ಬಹಳ thick population ಇದೆ. ಅಲ್ಲಿ ಹೆಚ್ಚಾಗಿ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು, ಬಡವರು, ದಿನಾ ಕೂಲಿ ಮಾಡಿ ಬದುಕುವ ಜನರು ವಾಸವಾಗಿದ್ದಾರೆ. ಶಾಂತಿನಗರ, ಗೌಸಿಯಾನಗರ, ಉದಯಗಿರಿ, ಕ್ಯಾತಮಾರನಹಳ್ಳಿ ಈ ಭಾಗಗಳಲ್ಲಿ ವಾಸ ಮಾಡುವ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಜನರಾಗಿದ್ದಾರೆ. ಅಂದು ಯುಗಾದಿ ಹಬ್ಬದ ಎರಡನೇ ದಿವಸ ಅಂದರೆ ಏಪ್ರಿಲ್ 1, 2ನೇ ತಾರೀಖು ಗಲಾಟೆ ನಡೆದ ಮೇಲೆ ಆ ಗಲಾಟೆ ಸಂಬಂಧ Udayagiri Police Station ನಲ್ಲಿ complaint ಏನು ಕೊಟ್ಟಿದ್ದರು ಅಂದು ಪೊಲೀಸ್‌ನವರು ಸರಿಯಾದ ರೀತಿಯಲ್ಲಿ ಅದನ್ನು ಹತ್ತಿಕ್ಕಿದ್ದರೆ, ಬಿಗಿಯಾದ ಕ್ರಮ ತೆಗೆದುಕೊಂಡಿದ್ದರೆ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಜುಲೈನಲ್ಲಿ ನಡೆದ ಘಟನೆ ಆಗುತ್ತಿರಲಿಲ್ಲ. ಜೊತೆಗೆ, ಆ ಗಲಭೆಯಲ್ಲಿ ಶುದ್ಧ ಸುಳ್ಳನ್ನು ಸೃಷ್ಟಿ ಮಾಡಿ ಕೆಲವರು ಉರಿಯುವ ಬೆಂಕಿಗೆ ತುಪ್ಪ ಹಾಕುವುದನ್ನು ಮಾಡಿ, ಉಪ್ಪು ಹಾಕುವುದನ್ನು ಮಾಡಿ ಇನ್ನಷ್ಟು ಹೆಚ್ಚು ಉದ್ವಿಗ್ನವಾಗಲಿಕ್ಕೆ ಕಾರಣಕರ್ತರಾದರು. ನಾನೂ ಕೂಡ ಏಪ್ರಿಲ್ 1, 2ರಂದು ನಡೆದ ಘಟನೆ ನಂತರ ಮೈಸೂರಿನ ಆ ಸ್ಥಳಕ್ಕೆ ಭೇಟಿ ಕೊಡೋಣವೆಂದು ಹೋಗಿದ್ದೆ. ಪೊಲೀಸ್‌ನವರು, ನೀವು ಅಲ್ಲಿಗೆ ಬರಬೇಡಿ, ಪರಿಸ್ಥಿತಿ ಉದ್ವಿಗ್ನವಾಗಿದೆ, ಇನ್ನೂ ಶಾಂತ ಪರಿಸ್ಥಿತಿ ನೆಲೆಸಿಲ್ಲ ಎಂದು ಹೇಳಿದ್ದರಿಂದ ನಾನು ಹೋಗಲಿಲ್ಲ. ಅದಕ್ಕಿಂತ ಹಿಂದೆ ಜಿಲ್ಲಾ ಮಂತ್ರಿಗಳಾದ ಕುಮಾರಿ ಶೋಭಾ ಕರಂದ್ಲಾಜೆಯವರು ಆವತ್ತು ಅಲ್ಲಿ ವಿಸಿಟ್ ಮಾಡಿ, ಇಲ್ಲಿ ಸರಿಯಾದ ರೀತಿಯಲ್ಲಿ ನಡೆದಿಲ್ಲ, ಯಾರ್ಯಾರದೋ ಕೈವಾಡಗಳಿವೆ, ಯಾರ್ಯಾರೋ instigate ಮಾಡಿದ್ದಾರೆ, ಇಲ್ಲದಿದ್ದರೆ ಈ ಮಟ್ಟಕ್ಕೆ ಇದು ಹೋಗುತ್ತಿರಲಿಲ್ಲ ಎಂದು ಆವತ್ತೇ ಎರಡನೇ ತಾರೀಖು she made a statement. It is appeared in the press. Judicial enquiry ಆಗಬೇಕೆಂದು ಹೇಳಿದ್ದು ಪತ್ರಿಕೆಯಲ್ಲೂ ಬಂದಿದೆ ಮತ್ತು ಅವರೂ ಕೂಡ ಒಂದು statement ಮಾಡಿದ್ದಾರೆ. ಈ ಗಲಾಟೆಯಾದ ಮೇಲೆ ಏಪ್ರಿಲ್ 3ನೇ ತಾರಿಖು ಎಳನೀರು ಮಾರುವ ವೆಂಕಟೇಶ ಎನ್ನುವ ವ್ಯಕ್ತಿ ರಾಜೀವ ನಗರದಲ್ಲಿ ಕೊಲೆಯಾಗುತ್ತಾನೆ. ರಾಜೀವನಗರಕ್ಕೂ ಉದಯಗಿರಿಗೂ ಬಹಳ ದೂರ ಇದೆ. ಆ ಕೊಲೆ ವೈಯಕ್ತಿಕ

ದ್ವೇಷದಿಂದ ಆಗಿದೆ. ಆ ಗಲಭೆಗೂ ಈ ಕೊಲೆಗೂ ಅರ್ಥಾತ್ ಸಂಬಂಧವಿಲ್ಲ. ಈಗಾಗಲೇ ಬೇರೆ ಅಪರಾಧಿಗಳನ್ನು arrest ಮಾಡಿದ್ದಾರೆ. Charge sheet ಹಾಕಿದ್ದಾರೆಯೋ, ಇಲ್ಲವೋ ಗೊತ್ತಿಲ್ಲ. ಅದು ಬೇರೆ ಎಂದು investigation ನಲ್ಲಿ ಗೊತ್ತಾಗಿದೆ. ಆ incident ಗೂ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆಗೂ ಸಂಬಂಧವಿಲ್ಲವೆಂದು ಈಗಾಗಲೇ ಪೊಲೀಸರು ತೀರ್ಮಾನಕ್ಕೆ ಬಂದಿದ್ದಾರೆ. ಆ ಬಗ್ಗೆ ಬೇರೆ charge sheet ಹಾಕುತ್ತಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಅಲ್ಲಿ ಆ ಘಟನೆ ಆದಮೇಲೆ ಮತ್ತೆ ಅಲ್ಲಿ ಒಬ್ಬ ಸತ್ತುಹೋದ, ವೆಂಕಟೇಶ ಎನ್ನುವವನ ಕೊಲೆ ಆಯಿತು ಎಂದು ಮತ್ತೆ ಅದರ reaction ಏನಾಗುತ್ತದೆ ಎಂದರೆ, ಒಬ್ಬ ವಾಸಿಂಖಾನ್ ಎನ್ನುವವನ ಕೊಲೆಯಾಗುತ್ತದೆ, that is on 4th April. ಆ ದಿವಸ ಗಲಾಟೆಯಾಗಿ ಸುಮಾರು 10–15 ಜನ ಗಾಯಳುಗಳಾಗುತ್ತಾರೆ. ಸುಮಾರು ಮನೆಗಳಿಗೆ, ವಾಹನಗಳಿಗೆ ಜಖಂ ಆಗುತ್ತದೆ. ಬಹಳ ಜನಗಳಿಗೆ ನಷ್ಟ ತೊಂದರೆಗಳಾಗುತ್ತವೆ. ಗಾಯಾಳುಗಳು ಆಸ್ಪತ್ರೆಗಳಿಗೆ ಹೋಗಿ inpatientಗಳಾಗಿ ಬಹಳ ದಿವಸಗಳಿದ್ದು ಔಷಧಿಗಳನ್ನು ಪಡೆಯುತ್ತಾರೆ. ಈ incidentನಲ್ಲಿ ಪೊಲೀಸ್‌ನವರು, prima facie ಬಹಳ ಸ್ಪಷ್ಟವಾಗಿ ಕಾಣುತ್ತದೆ, ಇವರು ಬಿಗಿಯಾದಂಥ ಕ್ರಮ ತೆಗೆದುಕೊಳ್ಳಲಿಲ್ಲ. 1ನೇ ತಾರೀಖು ತೆಗೆದುಕೊಳ್ಳಲಿಲ್ಲ, 2ನೇ ತಾರೀಖು ತೆಗೆದುಕೊಳ್ಳಲಿಲ್ಲ, 3ನೇ ತಾರೀಖು ತೆಗೆದುಕೊಳ್ಳಲಿಲ್ಲ, ಯಾವತ್ತೂ ತೆಗೆದುಕೊಳ್ಳಲಿಲ್ಲ. ಒಂದು ಸಣ್ಣ ವಿಚಾರ, ಇಸ್ಪೀಟು ಆಟ ಜೂಟಾಟ ಈ ಮಟ್ಟಕ್ಕೆ ಹೋಗಲಿಕ್ಕೆ ಕಾರಣವಾಯಿತು ಉದಯಗಿರಿ ಪೊಲೀಸ್‌ನವರಿಗೆ ಇದು ಎಂಥ ಏರಿಯಾ ಎಂದು ಗೊತ್ತಿದೆ. ಅಲ್ಲಿ ಯಾವ ವರ್ಗದ ಜನ ವಾಸಿಸುತ್ತಿದಾರೆಂದು ಗೊತ್ತಿದೆ. ಇದಾದ ಮೇಲಾದರೂ ಕೂಡ ಅಲ್ಲಿ ಪೊಲೀಸ್‌ನವರು ಎಚ್ಚರಿಕೆ ವಹಿಸಬೇಕಾಗಿತ್ತು. ಒಂದು ವರ್ಗದ ಸುಮಾರು 87 ಜನರನ್ನು ಅರೆಸ್ಟ್ ಮಾಡುತ್ತಾರೆ. ಇನ್ನೊಂದು ಕಡೆ 8 ಜನರನ್ನು ಅರೆಸ್ಟ್ ಮಾಡುತ್ತಾರೆ. 87 ಜನರನ್ನು ಏನು ಅರೆಸ್ಟ್ ಮಾಡಿದ್ದರಲ್ಲ ಇವರ ಮೇಲೆ non bailable offence case ಹಾಕಿ bail ಸಿಕ್ಕದಿರುವ ಹಾಗೆ ಮಾಡುತ್ತಾರೆ. ಇನ್ನೊಂದು ಕಡೆ 8 ಜನರನ್ನು ಅರೆಸ್ಟ್ ಮಾಡಿ ಕೇಸ್ ಹಾಕಿ FIR ಹಾಕಿ ಅವರಿಗೆ bailable offence case ಹಾಕುತ್ತಾರೆ ಹೀಗಾಗಿ 8 ಜನರು, they got bail within a week. ಇನ್ನೊಂದು ಗುಂಪಿನ ಸುಮಾರು 87 ಜನ ಸುಮಾರು ಎರಡೂವರೆ ತಿಂಗಳು ಜೈಲ್‌ನಲ್ಲಿರುತ್ತಾರೆ. ಇದು ಮತ್ತೆ ಅಸಮಾಧಾನವಾಗಲಿಕ್ಕೆ ಕಾರಣವಾಯಿತು. ಆವತ್ತೇ ಪೊಲೀಸ್‌ನವರು ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದರೆ, ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡಿದ್ದರೆ, ಅವರು ಯಾವ ಗುಂಪಿಗಾದರೂ ಸೇರಿರಲಿ, ಯಾವ ಧರ್ಮಕ್ಕಾದರೂ ಸೇರಿರಲಿ, ಯಾರಿಗಾದರೂ ಸೇರಿರಲಿ, ಆವತ್ತೇ ಕ್ರಮ ತೆಗೆದುಕೊಂಡಿದ್ದರೆ ಬಹುಶಃ ಅಲ್ಲಿಗೆ ಅದು ಶಾಂತವಾಗುತ್ತಿತ್ತು. ಪೊಲೀಸ್‌ನವರು ಆ

ಭಾಗದ ಎಲ್ಲಾ ಜನರುಗಳನ್ನು, ಆಯಾಯಾ ಧರ್ಮದ ಯಜಮಾನರುಗಳನ್ನು, ಗುರುಗಳನ್ನು, ರಾಜಕೀಯ ಮುಖಂಡರುಗಳನ್ನು, ಜನಪ್ರತಿನಿಧಿಗಳನ್ನು, ಕರೆದು ಶಾಂತಿ ಸಭೆಗಳನ್ನು ಮೇಲಿಂದ ಮೇಲೆ ಮಾಡಿ ಜನರಿಗೆ ಕರೆದು ತಿಳುವಳಿಕೆ ಕೊಡುವಂಥ ಕೆಲಸ ಮಾಡಿದ್ದರೆ, ಅವರೆಲ್ಲಾ ಸೇರಿಕೊಂಡು ಜನರಲ್ಲಿ ಮನವಿ ಮಾಡಿದ್ದರೆ, ಬದಲಾವಣೆಯಾಗುತ್ತಿತ್ತು, ಬಹುಶಃ ಮುಂದೆ ಇಂಥ ಘಟನೆ ನಡೆಯುತ್ತಿರಲಿಲ್ಲ. ಇದಾದ ಮೇಲೆ, ಅದು ಹಾಗೆಯೇ ಬೂದಿ ಮುಚ್ಚಿದ ಕೆಂಡದ ತರಹ ಇರುತ್ತದೆ. ಇದು ಇದೆ ಎನ್ನುವುದು ಪೊಲೀಸ್‌ನವರಿಗೆ ಗೊತ್ತಿತ್ತು ಎಂದು ನಾನು ಅಂದುಕೊಂಡಿದ್ದೇನೆ. ಈ ತರಹ ಅಸಮಾಧಾನ, ಅಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡ, ಇನ್ನೂ ಕೂಡ ಅಸಮಾಧಾನದ ಹೊಗೆಯಾಡುತ್ತಿರುವುದು, ಇವೆಲ್ಲವೂ ಪೊಲೀಸ್‌ನವರಿಗೆ ಗೊತ್ತಿತ್ತು. ಉದಯಗಿರಿ ಏರಿಯಾದಲ್ಲಿ ಹಲಿಮಾ ಸಾದಿಯಾ ಎಜ್ಯುಕೇಷನಲ್ ಟ್ರಸ್ಟ್‌ನವರು, ಖಾಲಿದ್ ಅಹಮದ್ ಎನ್ನುವವರಿಂದ, Door No: ½, 6th cross road, ಕ್ಯಾತಮಾರನಹಳ್ಳಿ, ಇಲ್ಲಿ ಒಂದು ಜಾಗ ಖರೀದಿಸುತ್ತಾರೆ. Alima Sadiya Educational Institutions and Maszid-e-Siddique Akbar Trust ಇವರು ಅವರ ಹತ್ತಿರ ಒಂದು ಜಾಗ ಖರೀದಿಸಿ ಅಲ್ಲಿ Educational Institutions ಮತ್ತು ಮಸೀದಿ ಕಟ್ಟಲಿಕ್ಕೆ ಹೊರಡುತ್ತಾರೆ. ಅದಕ್ಕೆ ಬೇಕಾದ ಪ್ಲಾನ್ ಎಲ್ಲಾ ತೆಗೆದುಕೊಳ್ಳುತ್ತಾರೆ. ಇವರಿಗೆ 22–11–2008 ರಲ್ಲಿ ಪ್ಲಾನ್ ಸ್ಯಾಂಕ್ಷನ್ಡ್ ಆಗುತ್ತದೆ. ಕಾರ್ಪೋರೇಷನ್‌ನಿಂದ ಬೇಕಾದಂಥ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಅಲ್ಲಿ ಮಸೀದಿ ಕಟ್ಟಲಿಕ್ಕೆ ಹೋಗುತ್ತಾರೆ. ಆಮೇಲೆ 30–03–2009 ರಲ್ಲಿ ಆ ಭಾಗದಲ್ಲಿರುವ ಹುಲಿಯಮ್ಮ ದೇವಸ್ಥಾನದ ಸಂಸ್ಥೆಯವರು, ಇಲ್ಲಿ ಮಸೀದಿ ಕಟ್ಟುವುದು ಬೇಡ, ಮಸೀದಿ ಕಟ್ಟುವುದರಿಂದ ಇಲ್ಲಿ ಕೋಮು ಸಾಮರಸ್ಯ ಹಾಳಾಗುತ್ತದೆ. ಕೋಮು ಗಲಭೆಗಳಾಗುವ ಸಾಧ್ಯತೆಗಳಿವೆ. ಆದುದರಿಂದ ಇಲ್ಲಿ ಅದನ್ನು ಕಟ್ಟಲಿಕ್ಕೆ ಬಿಡಬಾರದು ಎಂದು ಡಿ.ಸಿ.ಗೆ ಅವರು ಪತ್ರ ಕೊಡುತ್ತಾರೆ. ಆಮೇಲೆ ಮೈಸೂರು ಕಾರ್ಪೋರೇಷನ್‌ನವರು ಅವರಿಗೆ 24–04–2009, ಆಗ ಚುನಾವಣೆ ಬೇರೆ ಇರುತ್ತದೆ, ಕಾರಣ ಏನು ತಿಳಿಸುತ್ತಾರೆಂದರೆ, ನೀವು ಕೊಟ್ಟಿರತಕ್ಕಂಥ ಪ್ಲಾನ್ ಬದಲಾಯಿಸಿಕೊಂಡಿದ್ದೀರಿ, ನೀವು ಪ್ಲಾನ್‌ಗೆ ಅನುಗುಣವಾಗಿ ಕಟ್ಟುತ್ತಿಲ್ಲ, ಅದಕೋಸ್ಕರವಾಗಿ ನಿಮಗೆ ನೋಟಿಸ್ ಕೊಡುತ್ತಿದ್ದೇವೆಂದು ನೋಟೀಸ್ ಕೊಡುತ್ತಾರೆ. ಆ ನೋಟೀಸ್ ಕೊಟ್ಟು ಅಲ್ಲಿ ಕಟ್ಟಡ ಕಟ್ಟುವುದನ್ನು stay ಮಾಡಿ ಬಿಡುತ್ತಾರೆ. Against this corporation order, this Alima Sadiya Educational Trust filed an appeal before the District court, Mysore. ಅಲ್ಲಿ ಹೋಗಿ ಅದನ್ನು stay ಮಾಡಬೇಕೆಂದು ಕೇಳುತ್ತಾರೆ. ಕೋರ್ಟಿನವರು 'status quo may be maintained' ಎಂದು order ಕೊಡುತ್ತಾರೆ. Looking in to the documents, ಎಲ್ಲಾ ಸರಿಯಿದೆ ಎಂದು ಕೋರ್ಟಿನವರು ಒಪ್ಪಿಕೊಂಡು,

ಹುಲಿಯಮ್ಮ ದೇವಸ್ಥಾನ ಸಂಸ್ಥೆಯವರೇನು dispute ಮಾಡಿದ್ದರು, ಅದಕ್ಕೆ ಮಾನ್ಯತೆ ಕೊಟ್ಟಿಲ್ಲ. ಕಾನೂನು ಪ್ರಕಾರ ಇದೆ, 'status quo may be maintained' ಎಂದು ಹೇಳಿದ್ದಾರೆ. ಇದಾದ ನಂತರ ಲೋಕಸಭಾ ಚುನಾವಣೆ ಬಂತು, ಕಾರ್ಪೊರೇಷನ್ ಚುನಾವಣೆ ಬಂತು ಹೀಗಾಗಿ ಲೈಸನ್ಸ್ ತೆಗೆದುಕೊಳ್ಳಬೇಕೆಂದು ಅವರು ಕಟ್ಟಡದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಬಿಡುತ್ತಾರೆ. ಆಮೇಲೆ modified plan ಅನ್ನು ಕೊಡುತ್ತಾರೆ. ಮತ್ತೆ ಕಾರ್ಪೊರೇಷನ್‌ಗೆ ಹೋಗುತ್ತಾರೆ. ಅಲ್ಲಿ ಪ್ಲಾನಿಂಗ್‌ನವರು ಅಪ್ರೂವಲ್ ಮಾಡಿ ಕೊಡುತ್ತಾರೆ. 26-06-2009ರಲ್ಲಿ ಮತ್ತೆ modified plan was approved. The competent authority has approved the modified plan. ನಂತರ ಇವರು ಒಂದನೇ ತಾರೀಖಿನಿಂದ ಕೆಲಸ ಶುರುಮಾಡುತ್ತಾರೆ. ಸ್ಕೂಲ್ ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತಾರೆ. ಅದು ಬಹಳ ವರ್ಷ ಹಳೆಯದು. ಇದು ಪೊಲೀಸ್‌ನವರಿಗೆಲ್ಲಾ ಗೊತ್ತಿದೆ. ಅವರು ಅಬ್ಜಕ್ಷನ್ ಹಾಕಿದ್ದು, ಅವರು ಕೋರ್ಟಿಗೆ ಹೋಗಿದ್ದು, ಅವರ ಗಮನಕ್ಕೆಲ್ಲಾ ತಂದಿದ್ದಾರೆ, modified plan ತೆಗೆದುಕೊಂಡಿರುವುದು, ಕಾರ್ಪೊರೇಷನ್‌ನವರು ಇವರಿಗೆ ಒಪ್ಪಿಗೆ ಕೊಟ್ಟಿರುವುದು, ಇವೆಲ್ಲಾ ಇವೆ. ಅಲ್ಲಿ ಹಿಂದೆ ಏಪ್ರಿಲ್‌ನಲ್ಲಿ ಗಲಾಟೆಯಾದ ಮೇಲೆ ಯಾವಾಗಲೂ ಕೂಡ ಪೊಲೀಸ್ ವ್ಯಾನ್‌ಗಳು ಇರುತ್ತಿದ್ದವು. ಎನ್.ಅರ್.ಮೊಹಲ್ಲಾ, ಉದಯಗಿರಿ, ಕ್ಯಾತಮಾರನಹಳ್ಳಿ, ಇಲ್ಲಿ ಯಾವಾಗಲೂ ವಾಹನಗಳು ಇರುತ್ತಿದ್ದವು.

ಏಪ್ರಿಲ್ 1ನೇ ತಾರೀಖಿನಿಂದ ಪೊಲೀಸ್‌ನವರು ಅಲ್ಲಿಯೇ ಇದ್ದರು. ಆದರೆ, ಜುಲೈ 1ನೇ ತಾರೀಖಿನ ರಾತ್ರಿಯಿಂದ ಪೊಲೀಸ್‌ನವರನ್ನು ಮತ್ತು ಅಲ್ಲಿದ್ದಂಥ ಗರುಡವನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಅಂದರೆ, ಅವತ್ತಿನ ರಾತ್ರಿಯಿಂದ ಪೊಲೀಸ್‌ನವರು ಅಲ್ಲಿರಲಿಲ್ಲ. ಆದರೆ, ಅವತ್ತೆ ಅಲ್ಲಿ ಯಾರೋ ಕಿಡಿಗೇಡಿಗಳು ಒಂದು ಹಂದಿಯನ್ನು ಕಡಿದು ಅದರ ರುಂಡ ಮತ್ತು ಮುಂಡವನ್ನು ಪ್ರಾರ್ಥನಾ ಮಂದಿರದ ಜಾಗದಲ್ಲಿ ಹಾಕಿದ್ದಾರೆ. ಇದನ್ನು ಎಷ್ಟು ಹೊತ್ತಿಗೆ ಮಾಡಿದ್ದಾರೆಂದು ಗೊತ್ತಿಲ್ಲ. ಒಂದು ವೇಳೆ ಪೊಲೀಸ್‌ನವರು ಅಲ್ಲಿಯೇ ಇಲ್ಲದಿದ್ದರೆ ಇದು ಆಗುತ್ತಿರಲಿಲ್ಲ. ಅಲ್ಲಿ ಇನ್ನೂ ಕಾವು ಆರಿರಲಿಲ್ಲ. ಎರಡು ತಿಂಗಳ ಹಿಂದೆ ಅಲ್ಲಿ ಕೋಮು ಗಲಭೆಯಾಗಿದೆ. ಆ ಜಾಗದಲ್ಲಿ ಕಟ್ಟಡ ಕಟ್ಟುವುದಕ್ಕೆ ಕೆಲವರು ವಿರೋಧ ಮಾಡಿದ್ದಾರೆ. ಇದೆಲ್ಲಾ ಆದಮೇಲೆ ಕೂಡ ಪೊಲೀಸ್‌ನವರು ಏನು ಮಾಡುತ್ತಿದ್ದಾರೆಂದು ಯಾರಿಗಾದರೂ ಕೂಡ ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಅವರ ನೆಗ್ಲಿಜೆನ್ಸ್ ಮತ್ತು ಫೇಲ್ಯೂರ್ ಇಲ್ಲಿ ತಿಳಿಯುತ್ತದೆ. ಮೊದಲಿನಿಂದಲೂ ಅಲ್ಲಿ ಪೊಲೀಸ್‌ನವರ ಗರುಡ ಮತ್ತು ಕಾನ್‌ಸ್ಟೇಬಲ್ ಅಲ್ಲಿ ಇರುತ್ತಿದ್ದರು. ಅಲ್ಲಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಗರುಡ ಇಲ್ಲದಿದ್ದರೆ ಅಲ್ಲಿ ಹಂದಿ ಕತ್ತರಿಸಿ ತಂದು ಹಾಕತಕ್ಕಂಥ ಧೈರ್ಯ ಯಾರು ಮಾಡುತ್ತಿರಲಿಲ್ಲ. ಅಲ್ಲಿ ಪೊಲೀಸ್‌ನವರು ಯಾರು ಇಲ್ಲದೆ ಇರುವುದರಿಂದ ಧೈರ್ಯವಾಗಿ ಕೆಲವು ಕಿಡಿಗೇಡಿಗಳು ಹಂದಿಯನ್ನು ಕತ್ತರಿಸಿ

ತಂದು ಅಲ್ಲಿ ಹಾಕಿದ್ದಾರೆ. ಹಂದಿಯನ್ನು ಶ್ರೀರಂಗಪಟ್ಟದಿಂದ ಒಂದೂವರೆ ಸಾವಿರ ರೂಪಾಯಿ ಕೊಟ್ಟು ಇಲ್ಲಿಗೆ ತೆಗೆದುಕೊಂಡು ಬಂದು ಕತ್ತರಿಸಿ ಹಾಕಿದ್ದಾರೆ. ಇದು ಆಗುವುದಕ್ಕೆ ಅಲ್ಲಿ ಪ್ರಚೋದನೆ ಕೂಡ ಇದೆ. ಮಿಸ್ಟರ್ ಮುತಾಲಿಕ್‌ರವರು ದಿನಾಂಕ 5.06.2009ರಂದು ಅಂದರೆ, ಈ ಘಟನೆ ಆದ ಮೇಲೆ ಎರಡು ಸಾರಿ ಅಲ್ಲಿಗೆ ಅವರು ಹೋಗಿದ್ದಾರೆ. ಮೊದಲನೇ ಸಾರಿ ಘಟನೆ ನಡೆದಾಗ ಇವರು ಅಲ್ಲಿಗೆ ಹೋದಾಗ, he was not allowed to enter. ಮೊದಲನೇ ಸಾರಿ ಅವರನ್ನು ಅರೆಸ್ಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಎರಡನೇ ಸಾರಿ ಹೋದಾಗ ಅವರು ಆ ಜಾಗಕ್ಕೆ ಹೋಗಿದ್ದಾರೆ. ಹಿಂದೆ ಘಟನೆ ನಡೆದಂಥ ಸಂದರ್ಭದಲ್ಲಿ ದೇವಸ್ಥಾನಗಳಿಗೆ ಡ್ಯಾಮೇಜ್ ಆಗಿದೆ ಎಂದು ಪ್ರಚಾರ ಆಗಿತ್ತು. ನನ್ನ ಹತ್ತಿರ ಇರತಕ್ಕಂಥ ಮಾಹಿತಿ ಪ್ರಕಾರ ಅಲ್ಲಿಗೆ ಅವರು ಹೋಗಿ he instigated. It is he who instigated. ಅವರ ಇನ್‌ಸ್ಟಿಗೇಷನ್‌ನಿಂದ ಇವರು ಧೈರ್ಯಮಾಡಿಕೊಂಡು ಅಲ್ಲಿಗೆ ಹೋಗಿದ್ದಾರೆ. May be his followers, ಅಂದರೆ, ಶ್ರೀರಾಮ ಸೇನೆಯವರು ಇರಬಹುದು ಅಥವಾ ಭಜರಂಗದಳದವರು ಇರಬಹುದು ಅಥವಾ ಇನ್ನ್ಯಾರೋ ಸಂಘ ಪರಿವಾರದವರು ಇರಬಹುದು. ಯಾರೆಂಬುದು ಗೊತ್ತಿಲ್ಲ.

ಅಧ್ಯಕ್ಷರು:– ಸದನದ ಸದಸ್ಯ ಅಲ್ಲದ ಒಬ್ಬ ವ್ಯಕ್ತಿಯ ಬಗ್ಗೆ ನಾವು ನೇರವಾಗಿ ಏನಾದರೂ ಹೇಳುವಾಗ ಅ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ. ಸಂಘ ಸಂಸ್ಥೆಗಳ ಹೆಸರನ್ನು ರೆಫರೆನ್ಸ್ ಮಾಡಿದಾಗಲೂ ಕೂಡ..

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರು ಅಲ್ಲಿಗೆ ಹೋಗಿರುವ ಫ್ಯಾಕ್ಟ್ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಬೇರೆ ಏನು ಹೇಳುತ್ತಿಲ್ಲ. I leave it to the Government to take any action. It is a fact. He has gone there. He has instigated ಎಂದು ಎಲ್ಲರೂ ಸಹ ಮಾತನಾಡುತ್ತಿದ್ದಾರೆ.

ಕುಮಾರಿ ಶೋಭಾ ಕರಂದ್ಲಾಜೆ:– ಪ್ರಮೋದ್ ಮುತ್ತಾಲಿಕ್‌ರವರು ಭಜರಂಗದಳದವರೆಂದು ಹೇಳಿರತಕ್ಕಂಥದ್ದು ತಪ್ಪು ಮಾಹಿತಿ.

ಶ್ರೀ ಸಿದ್ದರಾಮಯ್ಯ:– ಅವರು ಶ್ರೀರಾಮ ಸೇನೆಯವರೆಂದು ನಾನು ಹೇಳಿದ್ದೇನೆ.

ಕುಮಾರಿ ಶೋಭಾ ಕರಂದ್ಲಾಜೆ:– ತಾವು ಸಂಘಪರಿವಾರದವರ ಹೆಸರನ್ನು ಸಹ ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ:– ಅವರು ಅದರ ಜೊತೆಯಲ್ಲಿ ಇಲ್ಲವೇ?

ಕುಮಾರಿ ಶೋಭಾ ಕರಂದ್ಲಾಜೆ:– ಅದರ ಜೊತೆ ಅವರು ಇಲ್ಲ.

ಶ್ರೀ ಸಿದ್ದರಾಮಯ್ಯ:– ಹಾಗಾದರೆ ಗೊತ್ತಿಲ್ಲ. ಅವರನ್ನು ಅದರಿಂದ ತೆಗೆದು ಹಾಕಿದ್ದರೆ ಪರವಾಗಿಲ್ಲ. ಹಿಂದೆ ಮಾನ್ಯ ಯಡಿಯೂರಪ್ಪನವರು ಅವರಿಗೆ ಶಹಭಾಷ್‌ಗಿರಿಯನ್ನು ಕೊಟ್ಟಿದ್ದರು. ಶ್ರೀರಾಮಸೇನೆಯವರು ಯಾರು ಎಂಬುದು

ಗೊತ್ತಿಲ್ಲ. ಅವರು ಅಲ್ಲಿಂದ ಹೋದ ಮೇಲೆ ಇದು ನಡೆಯುವುದಕ್ಕೆ ಕಾರಣವಾಯಿತು. ನನ್ನ ಪ್ರಕಾರ ಮೊದಲನೆಯದಾಗಿ ಅವರು ಅಲ್ಲಿ ಮಾಡಿರುವ ಇನ್‌ಸ್ಟಿಗೇಷನ್, ಎರಡನೆಯದಾಗಿ ಅಲ್ಲಿಂದ ಪೊಲೀಸ್‌ನವರನ್ನು ತೆಗೆದು ಹಾಕಿದ್ದರಿಂದ ಈ ಘಟನೆಯಾಗಿದೆ. ಇಲ್ಲದೆ ಇದ್ದರೆ ಅಲ್ಲಿ ಯಾರು ಕೂಡ ಹಂದಿಯನ್ನು ಕತ್ತರಿಸಿ ಹಾಕುವುದಕ್ಕೆ ಹೋಗುತ್ತಿರಲಿಲ್ಲ. ಅಲ್ಲಿ ಇಬ್ಬರು ಇದನ್ನು ಮಾಡಿದ್ದಾರೆಂದು ನಮ್ಮ ಹತ್ತಿರ ಮಾಹಿತಿ ಇದೆ. ಬಹುಶಃ ಯಾರು ಮಾಡಿದ್ದಾರೆಂದು ಪೊಲೀಸ್‌ನವರಿಗೂ ಸಹ ಗೊತ್ತಾಗಿದೆ. ಆದರೆ, ಅವರುಗಳನ್ನು ಇವತ್ತಿನವರೆಗೂ ಅರೆಸ್ಟ್ ಮಾಡಿಲ್ಲ ಮತ್ತೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿಲ್ಲ. ಆ ಇಬ್ಬರು ಯಾರು ಎಂಬುದರ ಬಗ್ಗೆ ನಾನು ಸರ್ಕಾರದವರಲ್ಲಿ ಡಿಮ್ಯಾಂಡ್ ಮಾಡುತ್ತೇನೆ. Who are those persons ಎಂಬುದು ಗೊತ್ತಾಗಬೇಕು. By whom they are instigated? ಇದು ನಮಗೆ ಗೊತ್ತಾಗಬೇಕು. ಇವರು ಇಲ್ಲದೇ ಹೋಗಿದ್ದರೆ, ಜುಲೈನಲ್ಲಿ ಆದಂಥ ಘಟನೆ ಆಗುತ್ತಿರಲಿಲ್ಲ. ಮತ್ತೆ ನಿರಾಪರಾಧಿಗಳಾದ ಮೂರು ಜನ ಸಾಯುತ್ತಿರಲಿಲ್ಲ. ಈಗ ಮೂರು ಜನ ಸತ್ತಿದ್ದಾರೆ. ಇದರಲ್ಲಿ 14 ವರ್ಷದ ಮುಬಾರಕ್ ಮತ್ತು 22 ವರ್ಷದ ಜುನ್ಯೆದಿ ಪಾಷ ಮತ್ತು ಆಂಧ್ರಪ್ರದೇಶದ 46 ವರ್ಷದ ತಿರುಪತಿ ಎಂಬ ವ್ಯಕ್ತಿ ಸತ್ತಿದ್ದಾರೆ. ತಿರುಪತಿ ಎಂಬ ವ್ಯಕ್ತಿ ಗಾರೆ ಕೆಲಸವನ್ನು ಮತ್ತು ಮುಬಾರಕ್ ಎಂಬುವವನ್ನು ಲಾರಿ ಡ್ರೈವರ್ ಕೆಲಸವನ್ನು ಹಾಗೂ ಜುನ್ಯೆದಿ ಪಾಷ ಎಂಬುವವನ್ನು ಮೆಕಾನಿಕ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದನು. ದಾರಿಯಲ್ಲಿ ಹೋಗುತ್ತಿದ್ದ ಈ ಮೂರು ಜನ ಅಮಾಯಕ ಬಡವರ ಕೊಲೆಯಾಗಿದೆ. ಅಲ್ಲಿನ ಜನರು ನೀಡುತ್ತಿರುವ ಮಾಹಿತಿ ಪ್ರಕಾರ ಮತ್ತು ಫೈರಿಂಗ್ ಆದೇಶ ಮಾಡಿದ ಮೇಲೆ ಫೈರ್ ಆಗಿ ಮುಬರಕ್ ಸತ್ತು ಹೋಗಿರುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಫೋಟೋವನ್ನು ನೋಡಿದ್ದೇನೆ. ಆದರೆ, ಇವರ ಮೇಲೆ ಚೂರಿ ಹಾಕಿದ್ದಾರೆಂದು ಒಂದು ವರ್ಷನ್ ಪತ್ರಿಕೆಯಲ್ಲಿ ಬಂದಿದೆ. ಗೋಲಿಬಾರ್ ಮಾಡಿದ ಗುಂಡು ಹೊಟ್ಟೆಯಿಂದ ನುಗ್ಗಿ ಹಿಂದೆಗಡೆಯಿಂದ ಹೋಗಿದೆ ಎಂದು ಇನ್ನೊಂದು ವರ್ಷನ್ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ two versions ಇದೆ. But the district authority has denied. ಅಲ್ಲಿ ಗೋಲಿಬಾರ್ ಮಾಡಿಲ್ಲ. ಆದ್ದರಿಂದ, ಯಾರೂ ಕೂಡ ಗೋಲಿಬಾರ್‌ನಿಂದ ಸತ್ತಿಲ್ಲವೆಂದು ಹೇಳುತ್ತಿದ್ದಾರೆ. ಈ ಘಟನೆ ಹಂದಿ ಮಾಂಸ ಅಲ್ಲಿ ಹಾಕಿದ ಮೇಲೆ ಅಂದರೆ 2ನೇ ತಾರೀಖು ನಡೆದಿದೆ. ಅಲ್ಲಿ ಹಂದಿ ಮಾಂಸ ಹಾಕಿದ ಮೇಲೆ ಬೆಳಿಗ್ಗೆ ಜನರೆಲ್ಲರೂ ಸೇರಿಕೊಳ್ಳುತ್ತಾರೆ. ಅಲ್ಲಿನ ಸ್ಥಳಿಯ ಶಾಸಕರಾಗಿರುವ ಮಾನ್ಯ ತನ್ವೀರ್‌ಸೇಠ್‌ರವರು ಬೆಳಿಗ್ಗೆ ಪೊಲೀಸ್ ಕಮಿಷನರ್‌ರವರಿಗೆ ಫೋನ್ ಮಾಡುತ್ತಾರೆ. ಆದರೆ, ಅವರು ಇವರ ಫೋನ್‌ಗೆ ಸಿಗುವುದಿಲ್ಲ. ಮತ್ತೆ ಡಿಸಿಪಿ ಗೆ ದೂರವಾಣಿ ಮಾಡುತ್ತಾರೆ. ಆನಂತರ ಅವರು ಬೆಳಿಗ್ಗೆ 8,30 ಅಥವಾ 9.00 ಗಂಟೆಗೆ ಉದಯಗಿರಿ ಪೊಲೀಸ್ ಸ್ಟೇಷನ್‌ಗೆ ಹೋಗುತ್ತಾರೆ. ಮಾನ್ಯ ಶಾಸಕರು ಬೆಳಿಗ್ಗೆ ಸುಮಾರು 7 ಗಂಟೆಗೆ ಫೋನ್ ಮಾಡಿ he called up

the DCP and immediate ಆಗಿ 144 ಸೆಕ್ಷನ್ ಜಾರಿ ಮಾಡಿ ಎಂದು ಹೇಳಿರುತ್ತಾರೆ. ಇಲ್ಲಿ ಈಗಾಗಲೇ ಗಲಭೆ ಪ್ರಾರಂಭವಾಗಿದೆ. ಆದ್ದರಿಂದ ಮತ್ತೆ aggravate ಆಗುವುದು ಬೇಡ. ಈಗ 144 ಸೆಕ್ಷನ್ ಜಾರಿ ಮಾಡಿ ಎಂದು ಹೇಳುತ್ತಾರೆ. ಆದರೆ, ಅವರು ತಕ್ಷಣ 144 ಸೆಕ್ಷನ್ ಹಾಕಲಿಲ್ಲ. ಬೆಳಿಗ್ಗೆ 10.00 ಗಂಟೆಗೆ 144 ಸೆಕ್ಷನ್ ಜಾರಿ ಮಾಡುತ್ತಾರೆ. ಬೆಳಿಗ್ಗೆ 6 ರಿಂದ 10 ಗಂಟೆಯವರೆಗಿನ ಅವಧಿ ಈ ನಾಲ್ಕು ಗಂಟೆಯ ಅವಧಿಯಲ್ಲಿ ಅಲ್ಲಿ ಸಾಕಷ್ಟು ಪೊಲೀಸ್ ಬಂದೋಬಸ್ತ್ ಇರಲಿಲ್ಲ. ಅಲ್ಲಿ ಪೊಲೀಸ್‌ನವರು ಇಲ್ಲದೇ ಇರುವುದರಿಂದ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈ ಒಂದು ಕಾರಣದಿಂದ ಅಲ್ಲಿ ಮೂರು ಜನ ಸಾಯುತ್ತಾರೆ. ಇದರಲ್ಲಿ ಇಬ್ಬರು ದಾರಿಯಲ್ಲಿ ತೆಗೆದುಕೊಂಡು ಹೋಗುವಾಗ ಸಾಯುತ್ತಾರೆ. ಸಯ್ಯದ್ ಜುನೈದಿ ಪಾಷ ಸ್ಥಳದಲ್ಲಿಯೇ ಸತ್ತು ಹೋಗಿರುತ್ತಾನೆ. ಈ ಒಂದು ಘಟನೆಯಿಂದ ಅಮಾಯಕ ಮೂರು ಜನರ ಜೀವಗಳು ಅಲ್ಲಿ ಉರುಳುವುದಕ್ಕೆ ಸಾಧ್ಯವಾಯಿತು. ಪೊಲೀಸರ Negligence ನಿಂದ, ಅವರ inaction ದಿಂದ ಹಿಂದೆ ನಡೆದಂಥ ಘಟನೆಯಲ್ಲಿ ಅವರು impartial rovers ಆಗಿ ನಡೆದುಕೊಳ್ಳದಿರುವುದರಿಂದ ಈ ಎಲ್ಲಾ ಕಾರಣಗಳಿಂದ ಇವತ್ತು 2ನೇ ತಾರೀಖು ಈ ಘಟನೆ ಆಗುವುದಕ್ಕೆ ಸಾಧ್ಯವಾಯಿತು. ನಾನು 3ನೇ ತಾರೀಖು ಮೈಸೂರಿಗೆ ಹೋದೆ, ಡಿ.ಸಿ.ಯವರು ನನಗೆ ಅಲ್ಲಿಂದ ಬೆಂಗಳೂರಿಗೆ ಪತ್ರವನ್ನು ಬರೆದರು, "ನೀವು ಪ್ರವಾಸವನ್ನು ಇಟ್ಟುಕೊಂಡಿದ್ದೀರಿ ಮೈಸೂರಿನ ಘಟನೆ ನಡೆದಂಥ ಜಾಗಕ್ಕೆ ನೀವು ಬರುತ್ತೀರಿ, ನೀವು ಬರುವುದು ಬೇಡ" ಎಂದು ಹೇಳಿ ನಮ್ಮ ಆಫೀಸಿಗೆ ಪತ್ರವನ್ನು ಕಳುಹಿಸಿದ್ದರು. ಅದಕ್ಕಾಗಿ ನಾನು ಅಲ್ಲಿಗೆ ಹೋಗಲಿಲ್ಲ. ನಾನು ಉಳಿದುಕೊಳ್ಳತಕ್ಕಂಥ ನಮ್ಮ ಮನೆಗೆ ಹೋದೆ. ಆಸ್ಪತ್ರೆಯಲ್ಲಿ injured ಆದವರು ಯಾರ್ಯಾರು ಅಪೋಲೋ ಆಸ್ಪತ್ರೆಯಲ್ಲಿ ಇದ್ದರು, ವಿಕ್ರಮ ಹಾಸ್ಪಿಟಲ್‌ನಲ್ಲಿ ಇದ್ದರು, BBI Hospital ನಲ್ಲಿದ್ದವರನ್ನು ನೋಡಿಕೊಂಡು ಬಂದೆ. 3ನೇ ತಾರೀಖು ಒಬ್ಬ ಗಿರಿಧರ್ ಎನ್ನುವವರ ಮೇಲೆ ಅಟ್ಯಾಕ್ ಆಗಿದೆ. ಅದು Not in udayagiri police station limit. ಬೇರೆ ಜಾಗದಲ್ಲಿ ಗಿರಿಧರ್ ಎನ್ನುವವನಿಗೆ ಅಟ್ಯಾಕ್ ಮಾಡುತ್ತಾರೆ. ಮುಸುಕುಧಾರಿ ಒಬ್ಬರು ಇರುತ್ತಾರೆ, ಅವರ ಜೊತೆಯಲ್ಲಿ ಒಬ್ಬ ಮುಸ್ಲಿಮ್ ಹುಡುಗ ಇರುತ್ತಾನೆ. ಗಿರಿಧರ್ ಎನ್ನುವವನು ಬಿ.ಜೆ.ಪಿ. ಯುವಮೋರ್ಚ ಅಧ್ಯಕ್ಷ. ಅವನನ್ನು ನಾನು ಹೋಗಿ ನೋಡಿದೆ. Serious injuries ಆಗಿತ್ತು. ಬ್ಲೀಡಿಂಗ್ ಆಗುತ್ತಾ ಇತ್ತು. ಅವನು ಸತ್ತೆ ಹೋಗುತ್ತಾನೆ ಎನ್ನುವಂಥ ಒಂದು ವಾತಾವರಣ ಮತ್ತು ಅವತ್ತಿನ ಪರಿಸ್ಥಿತಿ ಹಾಗೆ ಇತ್ತು. Luckily he is recovering. ನಾನು ಕೂಡ ಹುಷಾರಾಗಲಿ ಎಂದು ಹಾರೈಸಿ ಬಂದೆ. ಮೂರು ಜನರ ಮರ್ಡರ್ ಆಯಿತು. 3–4ನೇ ತಾರೀಖು Home Minister ಮೈಸೂರಿಗೆ ಬರುತ್ತಾರೆ. ಅವರು ಕೂಡ injuries ಆದವರನ್ನು Hospital ನಲ್ಲಿ ನೋಡುತ್ತಾರೆ.

ಅಷ್ಟರೊಳಗಾಗಿ ಜಿಲ್ಲಾ administration ದವರು ಅವರಿಗೆ ಒಂದು ಲಕ್ಷ ರೂ.ಗಳ ಪರಿಹಾರವನ್ನು ಕೊಡುತ್ತೇವೆಂದು ಹೇಳಿ announce ಮಾಡುತ್ತಾರೆ. 3 ಜನ ಸತ್ತವರ ಜೊತೆಯಲ್ಲಿ 22 ಜನ ಸೀರಿಯಸ್ಸಾಗಿ injure ಆಗಿ ಆಸ್ಪತ್ರೆಯಲ್ಲಿ in patient ಆಗಿ treatment ನಲ್ಲಿದ್ದಾರೆ. ಅದರಲ್ಲಿ 5–6 ಜನರಿಗೆ ಬಹಳ ಸೀರಿಯಸ್ಸಾಗಿತ್ತು But somehow luckily they all survived ತೊದರೆಯೇನಾಗಲಿಲ್ಲ. ಆಮೇಲೆ ಇವತ್ತಿನವರೆಗೂ ಆ ಮೂರು ಜನರನ್ನು ಯಾರು ಕೊಂದರು ಎನ್ನುವುದು ಪೊಲೀಸರಿಗೆ ಪತ್ತೆ ಹಚ್ಚುವುದಕ್ಕಾಗಲಿಲ್ಲ. ಆ ಮೂರು ಜನ ಯಾರು ಎನ್ನುವುದು ಗೊತ್ತಿಲ್ಲ. ಸುಮ್ಮನೆ ಹೋಗಿ ಒಂದು ಕಡೆ 88 ಜನ ಇನ್ನೊಂದು ಕಡೆ 40 ಜನರನ್ನು ಅರೆಸ್ಟ್ ಮಾಡಿಬಿಟ್ಟಿದ್ದಾರೆ. ಅವರ ಮೇಲೆ ಕೇಸ್‌ಗಳನ್ನು ಹಾಕಿಬಿಟ್ಟಿದ್ದಾರೆ. ಈ ಮೂರು ಜನರನ್ನು ಯಾರು ಕೊಲೆ ಮಾಡಿದರು ಎನ್ನುವುದು ಗೊತ್ತಾಗಲಿಲ್ಲ. ಮತ್ತೆ ಗಿರಿಧರ್‌ಗೆ ಯಾರು ಹೊಡೆದರು ಎನ್ನುವುದು ಗೊತ್ತಾಗಿಲ್ಲ. ಇವತ್ತಿನವರೆಗೆ ವಾಸಿಮ್‌ಖಾನ್‌ನನ್ನು ಕೊಲೆ ಮಾಡಿದವರು ಯಾರು ಎನ್ನುವುದು ಗೊತ್ತಾಗಲಿಲ್ಲ. ನಿಜವಾಗಿ ಯಾರು ಅಪರಾಧಿಗಳು ಇದ್ದಾರೆ, ವಾಸಿಮಖಾನ್ ಕೊಲೆ ಮಾಡಿದವರು ಯಾರು? ಗಿರಿಧರ್‌ನನ್ನು ಹೊಡೆದವರು ಯಾರು? ವೆಂಕಟೇಶನನ್ನು ಕೊಲೆ ಮಾಡಿದವರು ಯಾರು? ಇವರನ್ನು ಪತ್ತೆ ಹಚ್ಚಿ ಅವರ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸುವುದನ್ನು ಮಾಡಿದ್ದರೆ, ಪರಿಸ್ಥಿತಿಯನ್ನು ನಿಯಂತ್ರಿಸಬಹುದಿತ್ತು. ಒಂದು ಕಡೆ 80 ಜನ ಇನ್ನೊಂದು ಕಡೆ 40 ಜನರನ್ನು ಅರೆಸ್ಟ್ ಮಾಡಿ, ಗಿರಿಧರನನ್ನು ಮಾನ್ಯ ಗೃಹ ಸಚಿವರು ನೋಡುವುದಕ್ಕೆ ಹೋದಾಗ ಕೆಲವು ಜನ ಶ್ರೀರಾಮಸೇನೆ ಕಾರ್ಯಕರ್ತರು ಸೇರಿಕೊಂಡು ಘೇರಾವ್ ಮಾಡುತ್ತಾರೆ. ಪಾಪ್ಯೂಲರ್ ಫ್ರಂಟ್ ಆಫ್ ಇಂಡಿಯಾದವರನ್ನು ಅರೆಸ್ಟ್ ಮಾಡಬೇಕೆಂದು ಹೇಳಿ ಅವರು ಗಲಾಟೆ ಮಾಡುತ್ತಾರೆ. ಮಾನ್ಯ ಗೃಹ ಸಚಿವರು ಆಸ್ಪತ್ರೆಗೆ ಹೋದರೇ ಹೊರತು, ಸತ್ತವರ ಮನೆಗೆ ಹೋಗಲಿಲ್ಲ, ಅವರಿಗೆ ಇನ್ನಷ್ಟು ಪರಿಹಾರವನ್ನು ಕೊಡಬೇಕು, ಬೇರೆಯವರಿಗೆ ಏನು ಮಾಡಬೇಕು. ಇವರು ಸಾಂತ್ವನ ಹೇಳುವುದಕ್ಕೆ ಕೂಡ ಹೋಗಲಿಲ್ಲ. ಬೆಳಗ್ಗೆ ಹೋಗಿ ಸಾಯಂಕಾಲ ಅವರು ವಾಪಸ್ಸು ಬಂದು ಬಿಡುತ್ತಾರೆ. ಅವತ್ತು ಆ ಗಿರಿಧರನಿಗೆ ಏಟು ಬಿದ್ದ ಮೇಲೆ ಹಿಂದು ಜಾಗರಣಾ ಸಮಿತಿಯವರು ಬಂದ್‌ಗೆ ಕರೆ ಕೊಡುತ್ತಾರೆ. 5ನೇ ತಾರೀಖು ಮೈಸೂರು ಬಂದ್, 50 ಜನರು ಮೋಟಾರ್ ಬೈಕ್ ಮೇಲೆ ಹೋಗಿ ಬಲಾತ್ಕಾರವಾಗಿ ಅಂಗಡಿಗಳನ್ನು ಮುಚ್ಚಿಸುತ್ತಾರೆ. I was there in Mysore ಎಲ್ಲಾ ಬಂದ್ ಮಾಡಿಸಿ ಬಿಡುತ್ತಾರೆ. ನಾನು ಡಿ.ಸಿ.ಯವರಿಗೆ ಫೋನ್ ಮಾಡಿ ಮೈಸೂರು ಬಂದ್ ಮಾಡುವುದಕ್ಕೆ ಬಿಡಬೇಡಿ, ಇದು ಇನ್ನಷ್ಟು ಉಲ್ಬಣವಾಗುತ್ತದೆ. ಯಾರಿಗೂ ಬಂದ್ ಮಾಡುವುದಕ್ಕೆ ಬಿಡಬೇಡಿ, ಅಂಗಡಿಗಳನ್ನು ಬಲಾತ್ಕಾರವಾಗಿ ಮುಚ್ಚಿಸುವುದಕ್ಕೆ ಬಿಡಬೇಡಿ ಎಂದು ಹೇಳಿದಾಗ ಪೊಲೀಸನವರು ನಾವು ಬಂದ್ ಮಾಡುವುದಕ್ಕೆ ಯಾರಿಗೂ allow ಮಾಡಿಲ್ಲ, ನಾವು ಯಾರಿಗೂ

ಪರ್ಮಿಷನ್ ಕೊಟ್ಟಿಲ್ಲ, ಬಂದ್ ಮಾಡುವುದಕ್ಕೂ ಬಿಡುವುದಿಲ್ಲವೆಂದು ಹೇಳಿದರು. ಮೈಸೂರಿನ ಮಧ್ಯಭಾಗದಲ್ಲಿಯ ಕೆ.ಆರ್.ಸರ್ಕಲ್‌ನಲ್ಲಿ ದೊಡ್ಡ ಒಂದು ಸಭೆಯನ್ನು ಮಾಡಿ ಮುಚ್ಚಿಸುತ್ತಾರೆ. ಪೊಲೀಸನವರು ಕೂಡ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. 144 section ಜಾರಿಯಲ್ಲಿರುತ್ತದೆ. Though it is a violation of Section 144ಯಾರ ಮೇಲೆ ಯಾವ ಒಂದು ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. all right, assuming for the argument sake ಬಹಳ ಒಳ್ಳೆಯ ಉದ್ದೇಶದಿಂದ ಕ್ರಮ ತೆಗೆದುಕೊಳ್ಳದೇ ಬಿಟ್ಟಿರಬಹುದೆಂದು ಇಟ್ಟುಕೊಳ್ಳೋಣ, ಆದರೆ next day 6ನೇ ತಾರೀಖು Popular Front of India ಅವರು ಪ್ರೆಸ್‌ಗೆ ಭೇಟಿ ಮಾಡುವುದಕ್ಕೆ ಹೋದಾಗ 15 ಜನರನ್ನು ಅರೆಸ್ಟ್ ಮಾಡಿ ಬಿಡುತ್ತಾರೆ. 7ನೇ ತಾರೀಖು ಅವರ ಆಫೀಸನ್ನು search ಮಾಡಿ ಬೀಗಿ ಹಾಕಿ ಬಿಡುತ್ತಾರೆ. ಆಮೇಲೆ ಅವರು ಫೋನ್ ಮಾಡಿ ಪ್ರೆಸ್ ಮಾಡಿದ ಮೇಲೆ ಬಂದು ಭೇಟಿ ಮಾಡುತ್ತೇವೆಂದು ಹೇಳುತ್ತಾರೆ. ಆ ತರಹ ಎಲ್ಲಾ ಮಾಡುತ್ತಾರೆ. ಆಮೇಲೆ Popular Front of India ಖಲೀಮ ಎನ್ನುವವನು ಜಿಲ್ಲೆಯಲ್ಲಿ ಅಧ್ಯಕ್ಷನಾಗಿರುತ್ತಾನೆ. ಅವರು ಇದನೆಲ್ಲಾ ಮಾಡಿದ ಮೇಲೆ ಅವರ ಕಛೇರಿಗೆ ನುಗ್ಗಿ ಪೊಲೀಸನವರು ಬೀಗ ಹಾಕಿದ ಮೇಲೆ, ಅವರು 9ನೇ ತಾರೀಖು ಜೈಲ್‌ಭರೋ ಕಾರ್ಯಕ್ರಮಕ್ಕೆ ಕರೆ ಕೊಡುತ್ತಾರೆ. ನಾನು ಯಾರ ಪರವಾಗಿ ವಕಾಲತ್ತು ಹಾಕುವುದಿಲ್ಲ. ನಾನು Popular Front of India ದ ಪರವಾಗಿ ವಕಾಲತ್ತು ಹಾಕುವುದಿಲ್ಲ. ಹಿಂದೂ ಸಂಘಟನೆ ಅಥವಾ ಶ್ರೀರಾಮಸೇನೆಯ ಪರವಾಗಿಯೂ ವಲಕಾಲತ್ತು ಹಾಕುವುದಿಲ್ಲ. ಅವರನ್ನು ನೀವು 144 section ಇದ್ದಾಗಲೂ ಬಿಟ್ಟಮೇಲೆ ಇವರು ಹಿಂದಿನ ರಾತ್ರಿ ಜೈಲುಬರೋ ಕಾರ್ಯಕ್ರಮ ಮಾಡುತ್ತೇವೆಂದು ಹೇಳಿದ ಮೇಲೆ ಇವರ intelligence ಏನು ಮಾಡುತ್ತಿತ್ತು. ಹೊರಗಡೆಯಿಂದ ಜನ ಬಂದಿದ್ದಾರೆ. ಮಂಡ್ಯದಿಂದ ಬಂದಿದ್ದಾರೆ, ಮಂಗಳೂರಿನಿಂದ ಬಂದಿದ್ದಾರೆ, ಕೊಡಗಿನಿಂದ, ಬೆಂಗಳೂರಿನಿಂದ ಬಂದಿದ್ದಾರೆ ಎಂದ ಮೇಲೆ ಇವರೆಲ್ಲರೂ ಮೈಸೂರಿಗೆ ಬರುತ್ತಿದ್ದರಲ್ಲಾ ಎನ್ನುವ ವಿಷಯ ಪೊಲೀಸರಿಗೆ ಗೊತ್ತಾಗಲಿಲ್ಲವೇ? ಇವರಿಗೆ ರಾತ್ರಿಯೇ ಗೊತ್ತಿತ್ತು. 9ನೇ ತಾರೀಖು 144 section ಜಾರಿಯಲ್ಲಿದೆ. Violation ಆಗುತ್ತದೆ, ಜೈಲುಭರೋ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಸುಮಾರು 2–3 ಸಾವಿರ ಜನ ಬರುತ್ತಾರೆ. ಇವರಿಗೆ ಅದರ ಮಾಹಿತಿ ಇರಬೇಕಾಗಿತ್ತಲ್ಲವೆ? Intelligence is totally dead ಏಕೆ ಹೀಗಾಗಿದೆ ಎಂದರೆ, ಯಾರೂ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಏನೂ ಮಾಡುವುದಿಲ್ಲ, ಅದಕ್ಕೆ ನಾವು ಏನಾದರೂ ಹೇಳಿದರೆ, ಸರ್ಕಾರದಲ್ಲಿರುವ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಈಶ್ವರಪ್ಪನವರಿಗೆ ಕೋಪ ಬಂದು ಬಿಡುತ್ತದೆ. ಪೊಲೀಸನವರನ್ನು ಪದೇ ಪದೇ ಟ್ರಾನ್ಸಫರ್ ಮಾಡಿ ಮಾಡಿ ಬಹಳ insecure

ಆಗಿಬಿಟ್ಟಿದ್ದಾರೆ. Nobody is ready to take the responsibility ಎಂದರೆ ಕೋಪ ಬಂದು ಬಿಡುತ್ತದೆ. 3 ತಿಂಗಳು 6 ತಿಂಗಳಿಗೆ ಒಬ್ಬರಂತೆ ಪೊಲೀಸರನ್ನು ವರ್ಗಾವಣೆ ಮಾಡಿದ್ದೀರಿ, ಮೈಸೂರಿನಲ್ಲಿ ಒಬ್ಬರೂ ಕೂಡ ಒಂದು ವರ್ಷ ಅಲ್ಲಿ ಇಲ್ಲ. ಯಾವ ಆಫೀಸರ್ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಹೋಗುತ್ತಾರೆ. All the officers are insecure, nobody is ready to take the responsibility. Intelligence is not doing its job properly. Intelligence ಗೆ ಎಂಥವನ್ನು ಹಾಕುತ್ತೀರಿ ಎಂದರೆ, ಯಾರು ಪಾಪ ಅಬ್ಬೆಪಾರಿಗಳು ಇರುತ್ತಾರೆ, ಅವರನ್ನು ತೆಗೆದುಕೊಂಡು ಹೋಗಿ ಹಾಕುತ್ತಾರೆ. ಯಾರಿಗೆ influence ಇರುವುದಿಲ್ಲ, ಅವರನ್ನು ಕೇಳುವವರು ಹೇಳುವವರು ಯಾರು ಇರುವುದಿಲ್ಲ, ಅಂಥವರನ್ನು ತೆಗೆದುಕೊಂಡು ಹೋಗಿ ಹಾಕುತ್ತಾರೆ.

Intelligence post ಎನ್ನುವುದು Punishment post. ಅವರು ಹೇಗೆ ಕೆಲಸವನ್ನು ಮಾಡುತ್ತಾರೆ. ನೀವು ಈ ಜಾಗದಿಂದ ತೆಗೆದುಹಾಕುತ್ತೀರಾ ತೆಗೆದುಹಾಕಿ ಎಂದು ಹೇಳುತ್ತಾರೆ. ಬೇರೆ ಕಡೆಗೆ ಹೋದರೆ Law & Order. Intelligence Department 4ನೇ ತಾರಿಖಿನಿಂದ ಜುಲೈ 7ನೇ ತಾರಿಖಿನವರೆಗೆ ಎನು ಮಾಡುತ್ತಿದ್ದರು?. ಅಲ್ಲಿ ಪೊಲೀಸ್‌ನವರನ್ನು ವರ್ಗಾವಣೆ ಮಾಡಿರುವುದು, ಮುತಾಲಿಕ್ ಅಲ್ಲಿಗೆ ಹೋಗಿ ಭಾಷಣವನ್ನು ಮಾಡಿರುವುದು ಇವೆಲ್ಲವೂ ಕೂಡ contributing factors. ಇಲ್ಲದೆ ಹೋದರೆ ಮೈಸೂರು ನಗರದಲ್ಲಿ ಇಷ್ಟೊಂದು ಗಲಾಟೆ ಯಾವಾಗಲೂ ಕೂಡ ಈ ರೀತಿ ನಡೆದಿರಲಿಲ್ಲ ಮಾನ್ಯ ಅರ್ಚಾಯರವರೆ, ಮೈಸೂರಿನ ಜನರು ಯಾವಾಗಲೂ ಶಾಂತಿಪ್ರಿಯರಾಗಿದ್ದಾರೆ. ರಾಜ ಮಹಾರಾಜರ ಕಾಲದಿಂದ ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟೊಟಿಗೆ ಇದ್ದಾರೆ. You don't Know ಮಂಡಿ ಮೊಹಲ್ಲಾದಲ್ಲಿ ಶ್ರೀ ಟಾಕೀಸ್‌ನ ಭಾಗದಲ್ಲಿ ಹೋದರೆ ಒಂದು ಮನೆ ಮುಸಲ್ಮಾನರ ಮನೆ, ಒಂದು ಹಿಂದೂಗಳ ಮನೆ ಇದೆ. ಅವರು ಯಾವತ್ತು ಕೂಡ ಜಗಳವಾಡಿರುವುದಿಲ್ಲ. ಅವರುಗಳು ಅಣ್ಣತಮ್ಮಂದಿರ ತರಹ ಇದ್ದರು. ಹಿಂದೂ ಮುಸಲ್ಮಾನರು ಎನ್ನುವ ಭಾವನೆ ಅವರಲ್ಲಿ ಯಾವತ್ತೋ ಇರಲಿಲ್ಲ. ಮೈಸೂರಿನಲ್ಲಿ ಯಾವಾಗಲೂ ಕೂಡ ಕುಸ್ತಿಗಳು ನಡೆಯುತ್ತಿರುತ್ತದೆ. ಅಂತಹ ಒಂದು ಪರಿಸ್ಥಿತಿ ಇದ್ದ ಕಡೆಯಲ್ಲಿ ಇಂತಹ ಒಂದು ಘಟನೆ ನಡೆದಿರುವುದು ಬಹಳ ನೋವಿನ ಸಂಗತಿಯಾಗಿದೆ, ಇದು ದುರದೃಷ್ಟಕರವಾದ ಘಟನೆಯಾಗಿದೆ ಇದು ಆಗಬಾರದಾಗಿತ್ತು. ಆಗಿದೆ, ನಾನು ಅದಕ್ಕೆ suggest ಮಾಡುವುದೇನೆಂದರೆ Chief Ministerರವರು ಇಲ್ಲಿಯೇ ಇದ್ದಾರೆ. Intelligence Departmentಗೆ ಬೇರೆ recruit ಮಾಡಿ, ದಯಮಾಡಿ.Intelligence Department ಅನ್ನು ಬೇರೆ wing ಮಾಡಿಕೊಂಡು ಅದಕ್ಕೆ ಬೇರೆ separate ಆಗಿ recruit ಮಾಡಿ. ಅಲ್ಲಿ ಯಾರೊಬ್ಬರು ಕೂಡ ಸರಿಯಾಗಿ ಕೆಲಸವನ್ನು

ಮಾಡುವುದಿಲ್ಲ. ಅವರಿಂದ ಏನು information ಸಿಗುವುದಿಲ್ಲ, It has totally failed. ನೀವು intelligence Department ಅನ್ನು ಸರಿಯಾಗಿ ಇಟ್ಟಿದ್ದರೆ popular Front Of Indiaದವರು ಒಳಗಡೆ ಬಂದು ಅಲ್ಲಿ ಧರಣಿ ಮಾಡುತ್ತಿದ್ರಾ? ಜೈಲ್ ಭರೋ ಕಾರ್ಯಕ್ರಮವನ್ನು ಮಾಡುತ್ತಿದ್ರಾ? ಎಲ್ಲಾ ಟೋಲ್‌ಗೇಟ್ ಬಳಿ ಪೊಲೀಸ್‌ನವರು ಇಟ್ಟಿದ್ದೀರಿ. ಅದರೂ ಅವರು ಹೇಗೆ ಬಂದರು. ಏನು ನಡೆದುಕೊಂಡು ಬಂದರಾ? ರಾತ್ರೋರಾತ್ರಿ, Electionನಲ್ಲಿ ತಿರುಗಾಡುತ್ತಿದ್ದವರನ್ನು ಹಿಡಿಯುತ್ತಿದ್ದರು. ಈ ಅವರಿಗೆ ಗೊತ್ತಾಗಲಿಲ್ಲವೆ? IS it not a failure on the part of the intelligence and the police? It is a clear case where intelligence has totally failed. Prima facie you can make out there is inaction on the part of police. There is negligence on the part of police. ಇದು ಒಂದು. ಈ ರೀತಿ ಇರುವಾಗ ಯಾರು ಹಂದಿಯನ್ನು ಹಾಕಿದರು ಗೊತ್ತಿಲ್ಲ. 3 ಜನರನ್ನು ಕೊಲೆ ಮಾಡಿದವರು ಯಾರೆಂದು ಗೊತ್ತಿಲ್ಲ. ಗಿರಿಧರ್‌ಗೆ ಯಾರು ಹೊಡೆದವರು ಗೊತ್ತಿಲ್ಲ. Instigate ಯಾರು ಮಾಡಿದರೆಂದು ಗೊತ್ತಿಲ್ಲ. ನನಗೆ ಗೊತ್ತಿರುವ informationನ್ನು ಹೇಳಿದ್ದೇನೆ. ಮಾನ್ಯ ಸದಾನಂದಗೌಡರು ಅಲ್ಲಿಗೆ ಹೋಗಿದ್ದರು. ಅವರು ಈ ಮನೆಯ ಸದಸ್ಯರಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ಮಾತ್ರ ನಾನು ಹೇಳುತ್ತೇನೆ. ಅವರು ಹೋಗಿ ಹೇಳಿದರು "ನಾನು Home Ministerರವರ ಜೊತೆಯಲ್ಲಿ ಮಾತನಾಡುತ್ತೇನೆ". ಈ Popular Front of India ಸಂಘಟನೆಯನ್ನು ban ಮಾಡುವುದರ ಬಗ್ಗೆ ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆಂದು ಅವರು ಅಲ್ಲಿಗೆ ಹೋಗಿ ಹೇಳುತ್ತಾರೆ. ಎಕೆಂದರೆ, they are responsible for this incident. That is why we all wanted to know, ಇದಕ್ಕೆ ಯಾರು ಕಾರಣರು? Whether Popular Front of India or Sri Rama Sena or inaction of police. ಇದು ಹೇಗೆ ಗೊತಾಗುವುದು? 2ನೇ ತಾರಿಖು incident ಆಯಿತು. 13 ನೇ ತಾರಿಖು ನಾವು ಈಗ ಇದ್ದೇವೆ. 13ನೇ ತಾರಿಖು ಇವತ್ತು ಆದರೂ ಕೂಡ ಪತ್ತೆ ಹಚ್ಚುವುದಕ್ಕಾಗಲಿಲ್ಲ. 3ನೇ ತಾರಿಖು ಗಿರಿಧರನಿಗೆ ಏಟು ಬಿತ್ತು, ಅದನ್ನು ಮಾಡಿದವರು ಯಾರು ಎಂದು ಗೊತ್ತಿಲ್ಲ. Outside the Udayagiri Police Station limit ಯಾರೋ ಮುಖಮುಚ್ಚಿಕೊಂಡು ಹೋಗಿ ಮಾಡುತ್ತಾರೆ, Popular Front of Indiaದವರು ಮಾಡಿದ್ದರೆ ಮುಖವನ್ನು ಏತಕ್ಕಾಗಿ ಮುಚ್ಚಿಕೊಂಡು ಹೋಗುತ್ತಿದ್ದರು? ಬಹಿರಂಗವಾಗಿ ಜೈಲು ಭರೋ ಮಾಡುವುದಕ್ಕೆ ಕುಳಿತಿದ್ದರಲ್ಲಾ? It is still a mystery. ಏನೋ ಯಾರೋ ಇರಬೇಕು, ನನಗೆ ಗೊತ್ತಿಲ್ಲ. I don't Know If it is Popular Front of India ದವರು ಇದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ, ರಾಮಸೇನೆಯವರು ಇದ್ದರೆ ಅವರ ಮೇಲೆ

ಕ್ರಮವನ್ನು ತೆಗೆದುಕೊಳ್ಳಿ. ಇನ್ಯಾರೋ ಇದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. But we want stern action, we want peace. ಅದು ಆಗಬೇಕಲ್ಲವೇ? ಈ ಬಗ್ಗೆ ಎಲ್ಲವೂ ಗೊತ್ತಾಗಬೇಕಾದರೆ ನಮ್ಮ ಜಿಲ್ಲಾ ಮಂತ್ರಿಗಳು ಅವರು ಹೋಗಿ ಮೊದಲನೇ incident ಏಪ್ರಿಲ್‌ನಲ್ಲಿ ಆದಾಗ ಒಂದು ಸಾರಿ Judicial Enquiry ಆಗಬೇಕೆಂದು ಹೇಳಿದ್ದಾರೆ. ಇನ್ನೊಂದು ಸಾರಿ **ಅಮೇರಿಕಾದಿಂದ ಬಂದು ಅಲ್ಲಿಗೆ ಹೋಗಿ ಹೇಳಿದ್ದಾರೆ. ಇದರಲ್ಲಿ ಏನೋ conspiracy ಇದೆ. We want** to Know conspiracy ಯಾರು ಕಾರಣ? Who are the conspirators? Conspiracy ಮಾಡಿದವರು ಯಾರು? ಈ incidentಗಳಿಗೆ ಯಾರು conspiracy ಮಾಡಿದರು? ಇದು ಗೊತ್ತಾಗಬೇಕಲ್ಲವೇ? ಸತ್ಯವು ಗೊತ್ತಾಗಬೇಕು. ಇದರ ಹಿಂದಗಡೆ ಯಾರು ಇದ್ದಾರೆ, ಅದು ಗೊತ್ತಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಮತ್ತೆ ಯಾರು ಇಂತಹ ಕೆಲಸವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆನರಿಗೆ ವಿಶ್ವಾಸ ಮತ್ತು ನಂಬಿಕೆ ಬರುತ್ತದೆ. ಕಾನೂನಿನ ಬಗ್ಗೆ ಗೌರವ ಬರುತ್ತದೆ. ಸರ್ಕಾರದ ಬಗ್ಗೆ ಗೌರವ ಬರುತ್ತದೆ. ಇಲ್ಲದೆ ಹೋದರೆ ನಂಬಿಕೆಯೂ ಉಳಿಯುವುದಿಲ್ಲ. ಇದನ್ನು ನಾವು ಹೇಳಿದರೆ, It is a total failure. ಕನ್ನಡದಲ್ಲಿ ವಿಫಲರಾಗಿದ್ದೀರೆಂದು ಹೇಳಿದರೆ ಕೋಪ ಬರುತ್ತದೆ. Is it not a failure? ಇದರ ಹಿಂದುಗಡೆ ಏನೇನು ಇದೆ ಎಂದು ಸಂಶಯಕ್ಕೆ ಎಷ್ಟೊಂದು ಆಸ್ಪದವಾಗುತ್ತದೆ. ಈ ಸಂಶಯಗಳಿಗೆ ತೆರೆಯನ್ನು ಎಳೆದು ಯಾರು ತಪ್ಪಿತಸ್ಥರು ಯಾರು ಇದಕ್ಕೆ ಕಾರಣ ಇದರ ಹಿಂದೆ ಯಾರ ಕೈವಾಡವಿತ್ತು. Whether it is a Popular front of India or Sri Rama Sena or anybody else, ಇದು ಗೊತ್ತಾಗಬೇಕಲ್ಲ? ಅದಕ್ಕೆ, I demand Judicial Enquiry into the whole incident from April to July incidents. ಏಕೆಂದರೆ ಇವತ್ತೂ ಕೂಡ ಕರ್ಫ್ಯೂ ಇದೆ. ನಿನ್ನೆಯೂ ಕೂಡ ಕರ್ಫ್ಯೂ ಇತ್ತು ನಾನು ಆ ದಿನ 9ನೇ ತಾರೀಖು ಕರ್ಫ್ಯೂ ಇದೆ ಎಂದು ಹೇಳಿದಾಗ ಕರ್ಫ್ಯೂ ಇಲ್ಲ. You are misleading the House ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ಕರ್ಫ್ಯೂ ಇಲ್ಲದೇ ಹೋದರೆ ಮೈಸೂರು-ಬೆಂಗಳೂರು ರೋಡಿನಲ್ಲಿ fountainನಲ್ಲಿ ಏತಕ್ಕಾಗಿ ಕುಳಿತ್ತಿದ್ದರು? ಅಲ್ಲಿ ಎಲ್ಲಿ ಕರ್ಫ್ಯೂ ಇತ್ತು? ಉದಯಗಿರಿಗೂ ಅದಕ್ಕು ಎಷ್ಟು ದೂರ ಇದೆ. ಕರ್ಫ್ಯೂ ಇಲ್ಲದೆ ಹೋಗಿದ್ದರೆ ಅವರು ಹೇಗೆ violation ಮಾಡಿದರು? ನಾನು ಯಾರ ಪರವಾಗಿ ಹೇಳುವುದಿಲ್ಲ. ನಾನು ನಿಷ್ಪಕ್ಷಪಾತವಾದಂತಹ ತನಿಖೆಯು ಆಗಬೇಕು ಎಂದು ಒತ್ತಾಯಿಸುತ್ತೇನೆ. ಪೋಲಿಸ್‌ನವರು ಸಮರ್ಥರಿದ್ದಾರೆಂದು ಮಾನ್ಯ Home Ministerರವರು ಅಲ್ಲಿಗೆ ಹೋಗಿ ಹೇಳಿದ್ದಾರೆ. ಅವರು ಸಮರ್ಥರು ಇಲ್ಲದೇ ಇರುವ ಕಾರಣಕ್ಕಾಗಿಯೇ ಅಲ್ಲಿ ಹೀಗೆ ಆಗಿರುವುದು. ಮಾನ್ಯ ಆಚಾರ್ಯರವರೆ ನಾನು ಹೇಳಿದಾಗ ನೀವು ಸದನದಲ್ಲಿ ಇರಲಿಲ್ಲ. 1ನೇ ತಾರೀಖು

ರಾತ್ರಿಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಅಲ್ಲಿ ಪೊಲೀಸ್‌ನವರು ಇರಲಿಲ್ಲ. Knowing full well some people are disputing for that piece of land. Websiteನಲ್ಲಿ ಏನೋ ಬಂದಿದೆ, ಬೇರೆಯವರಿಗೆ ಸೇರಿರುವಂತಹ ಜಾಗದಲ್ಲಿ, ಹಿಂದೂಗಳಿಗೆ ಸೇರಿರುವಂತಹ ಜಾಗ ಅಲ್ಲಿ ಮುಸಲ್ಮಾನರು ಕಟ್ಟಿ ಬಿಡುತ್ತಿದ್ದಾರೆ ಎಂಬ ಸುದ್ದಿ ಇದೆ. It is not correct. They purchased this piece of land from one Khalid. ಹುಲಿಗೆಮ್ಮ ದೇವಸ್ಥಾನದವರು ಏನು ಹೇಳಿದ್ದಾರೆಂದರೆ, "ಇದು ನಮಗೆ ಹತ್ತಿರವಾಗಿದೆ, ಇಲ್ಲಿ ಮಸೀದಿಯನ್ನು ಕಟ್ಟಬೇಡಿ, ಕೋಮುಗಲಭೆ ಆಗುತ್ತದೆ ಎಂದು ಹೇಳಿದ್ದಾರೆಯೇ ಹೊರತು, we are the owners of that particular land" ಎಂದು ಅವರು ಹೇಳಿಲ್ಲ. They have never said it. ನಮ್ಮ ಜಾಗದಲ್ಲಿ ನೀವು ಕಟ್ಟುತ್ತೀದ್ದೀರಿ ಎಂದು ಹೇಳಿಲ್ಲ. ಅವರು owner ಆಗಿದ್ದರೆ they would have gone to the Court and got the Injunction Order. ಅವರಿಗೇನು title ಇಲ್ಲ, possession ಇಲ್ಲ, some Khalid was in possession , he sold the property to this Alim Sadia Institution Trust and they started constructing the building. ಪೊಲೀಸರು ಹೀಗೆಲ್ಲ ಇದ್ದ ಮೇಲೆ ಆಗಲಾದರೂ ಎಚ್ಚರವಹಿಸಬೇಕಾಗಿತ್ತಲ್ಲವೇ? ಅವರು ಡಿ.ಸಿ.ಗೆ , ಮುನಿಸಿಪಲ್ ಕಮಿಷನರ್ , ಪೊಲೀಸ್ ಕಮಿಷನರ್‌ಗೆ ಎಲ್ಲಿರಗೂ ಅರ್ಜಿ ಕೊಟ್ಟಿದಾರೆ.They have taken all precautionary measures, and have given protection. The Police would have given protection for the modified plan which was approved by the competent authority and they were allowed to construct legally, ಅಲ್ಲಿ ಪೊಲೀಸ್ ರಕ್ಷಣೆ ಕೊಡಬೇಕಾಗಿತ್ತು, ಪೊಲಿಸ್‌ರವರನ್ನು ಇಡಬೇಕಾಗಿತ್ತು, ಇಲ್ಲಿ ಕೋಮು ಗಲಭೆ ಆಗಬಾರದು, ನಿರಪರಾಧಿಗಳು ಸಾಯಬಾರದು, ಅವರ ಆಸ್ತಿಪಾಸ್ತಿಗಳು ನಷ್ಟವಾಗಬಾರದು. ಅಲ್ಲಿ ಪೊಲೀಸರು ಇದ್ದಿದ್ದರೆ ಈ ರೀತಿ ಆಗಲಿಕ್ಕೆ ಸಾಧ್ಯವಿರುತ್ತಿರಲಿಲ್ಲ. ಈ ಕಾರಣಗಳಿಂದ ಇವತ್ತು ಪಾಪ ಅಲ್ಲಿ ಮೂರು ಜನ ಅಮಾಯಕರು ಸತ್ತರು, ಮೈಸೂರಿನಲ್ಲಿ ಕೆಟ್ಟ ವಾತಾವರಣ ನಿರ್ಮಾಣವಾಗಿದೆ. ಈಗ ದಸರಾ ಬರುತ್ತಿದೆ. ದಸರಾ ನೋಡಲಿಕ್ಕೆ ಲಕ್ಷಾಂತರ ಜನ ಬರುತ್ತಾರೆ. ಅಲ್ಲಿ economic activities ಸ್ಥಗಿತವಾಗುತ್ತದೆ. ಬಹಳಷ್ಟು ಜನ ದಸರಾದ ಮೇಲೆ ಬದುಕುವವರಿದ್ದಾರೆ. ದಸರಾ ನಡೆಯುವಾಗ ಇಡೀ ಒಂದು ವರ್ಷಕ್ಕಾಗುವಷ್ಟು ಸಂಪಾದನೆ ಮಾಡಿ ಅನೇಕ ಜನ ಅಂಗಡಿಯವರು, ಹೋಟೆಲ್‌ನವರು, ಬೇರೆ ಬೇರೆ ಜನರೆಲ್ಲ ಜೀವನ ಮಾಡುವವರಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಬೆಳೆಯಲಿಕ್ಕೆ ಬಿಟ್ಟಿದ್ದಾರೆ. 2,3 ಮತ್ತು 4ನೇ ತಾರೀಖು normality ಬಂದು ಬಿಟ್ಟಿತ್ತು. ಸೆಕ್ಷನ್ 144 ಜಾರಿಯಲ್ಲಿರುವಾಗ ಹಿಂದೂ ಜಾಗರಣ ವೇದಿಕೆ, ಶ್ರೀರಾಮಸೇನೆಯವರನ್ನು ಮೈಸೂರಿನಲ್ಲಿ ಬಂದ್ ಕರೆಯಲಿಕ್ಕೆ ಅವಕಾಶ ಮಾಡಿಕೊಟ್ಟು, ಅಲ್ಲಿ ಬಲಾತ್ಕಾರವಾಗಿ

ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿ ಬಂದ್ ಕರೆ ಮಾಡಲಿಕ್ಕೆ allow ಮಾಡಿದರು ಸೆಕ್ಷನ್ 144 ಜಾರಿಯಲ್ಲಿರುವಾಗ ಇದನ್ಯಾಕೆ allow ಮಾಡಿದರು? ಈ ರೀತಿ ಮಾಡಬೇಡಿ ಇದರಿಂದ ಇನ್ನಷ್ಟು ಪರಿಸ್ಥಿತಿ ಕೆಟ್ಟು ಹೋಗುತ್ತದೆಂದು ಅವರನ್ನು ಕರೆದು ಹೇಳಬಹುದಾಗಿತ್ತು. ಹೀಗಾಗಿ ಪರಿಸ್ಥಿತ್ತಿ ಈ ರೀತಿ ಆಗಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಇದು ಕೇವಲ police failure ಅಲ್ಲ, ಇದು ಸರ್ಕಾರದ ವೈಫಲ್ಯ, ಗೃಹಸಚಿವರ ವೈಫಲ್ಯ ಕೂಡ ಎಂದು ನೇರವಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಅಲ್ಲಿ ಜನರು ಇನೂ ಆತಂಕದಲ್ಲಿ ಬದುಕುತ್ತಿದಾರೆ, ಪರಸ್ಪರ ಅಪನಂಬಿಕೆಗಳು ಪ್ರಾರಂಭವಾಗಿಬಿಡುತ್ತದೆ. ಅದಕ್ಕೆ ಇವತ್ತು ಈ ಬಗ್ಗೆ ಹೊರಬೀಳಬೇಕಾದಂಥ ಅಗತ್ಯ ಇದೆ. The truth should come out. Who are the people who were behind this incident? Who instigated this incident ? Why it has happened? Why the police jeep was removed? Why protection was not given? ಇವೆಲ್ಲದಕ್ಕೂ ಕೂಡ ಉತ್ತರ ಸಿಗಬೇಕಾದರೆ ಪೊಲೀಸಿನವರು enquiry ಮಾಡುವುದರಿಂದ ಆಗುವುದಿಲ್ಲ, ಏಕೆಂದರೆ ಇಷ್ಟು ದಿನಗಳಾಯಿತು, ಅವರ್ಯಾರು ಎಂದೇ ಗೊತ್ತಾಗಲಿಲ್ಲ. ಏಪ್ರಿಲ್ 4ನೇ ತಾರೀಖು ವಾಸಿಮ್‌ಖಾನ್ ಸತ್ತ, ಇವತ್ತಿನವರೆಗೂ ಯಾರು ಮಾಡಿದರು ಎನ್ನುವುದು ಗೊತ್ತಾಗಲಿಲ್ಲ. ಬಹಳ ಜನ ನನಗೆ ಬಂದು ಹೇಳುತ್ತಾರೆ, ಅಪರಾಧಿಗಳು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ, ನಿರಪರಾಧಿಗಳು ಜೈಲಿಗೆ ಹೋಗಿದ್ದಾರೆ. 200 ಜನ Popular front of India ದವರನ್ನುಅರೆಸ್ಟ್ ಮಾಡಿದ್ದಾರೆ , ಓಕೆ ನೀವೆಷ್ಟು ಜನರನ್ನಾದರೂ ಅರೆಸ್ಟ್ ಮಾಡಿಕೊಳ್ಳಿ we do not mind, we do not come in your way, but innocents ಜೈಲಿಗೆ ಹೋಗಿ ನರಳುತ್ತಾರಲ್ಲ? ತಪ್ಪು ಮಾಡಿದವರು ಮೈಸೂರು ಕಡೆ ತಿರುಗಾಡಿದರೆ ಜನರ ಮನಸ್ಸಿಗೆ ಏನಾಗುತ್ತದೆ? ಇದು ಬೆಂಕಿ ಹತ್ತಲಿಕ್ಕೆ, ಇನ್ನಷ್ಟು ಅಸಮಾಧಾನ, ಅಸಂತೋಷವಾಗಲಿಕ್ಕೆ ಮತ್ತಷ್ಟು ಪರಿಸ್ಥಿತಿ ಉದ್ವೇಗವಾಗಲಿಕ್ಕೆ ಕಾರಣವಾಗುತ್ತದೆ. So, totally my submission is judicial enquiry ಆಗಲೇಬೇಕು ಅಥವಾ ಸಿ.ಬಿ.ಐ.enquiry ಆದರೂ ನನ್ನದೇನೂ ಅಭ್ಯಂತರವಿಲ್ಲ. ರಾಜ್ಯಸರ್ಕಾರ ಸಿ.ಬಿ.ಐ. enquiry ಮಾಡೋಣವೆಂದರೆ I welcome it. Judicial enquiry ಮಾಡುತ್ತೇವೆಂದರೆ ಅದಕ್ಕೂ welcome ಮಾಡುತ್ತೇನೆ. Judicial enquiry ಅಂದರೆ that is a minimum decision. I expect that the Government should announce this. Judicial enquiry ಆಗಬೇಕು. ಮಾನ್ಯ ಆಚಾರ್ಯರವರು ಗೃಹ ಸಚಿವರಾಗಿ ಒಂದು ವರ್ಷವಾದ ಮೇಲೆ ಸಾಕಷ್ಟು ಕೋಮು ಗಲಭೆಗಳು ಆಗಿಬಿಟ್ಟಿವೆ. ಮತ್ತೆ ಇನ್ನೂ ಮುಂದೆ ಪದೇ ಪದೇ ಈ ರೀತಿ ಆದರೆ ಹೇಗೆ? ನಮ್ಮ ಕರ್ನಾಟಕ ರಾಜ್ಯ ಬಹಳ ಶಾಂತಿಪ್ರಿಯವಾದ ರಾಜ್ಯ. ಕರ್ನಾಟಕ ಮತ್ತೆ ಇನ್ನೊಂದು ಗುಜರಾತ್ ಆಗಬರದು. ಆದ್ದರಿಂದ ದಯಮಾಡಿ ನಾನು ನಿಮ್ಮ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ

ಬಯಸುತ್ತಿದ್ದೇನೆ, ಇದಕ್ಕೆ judicial enquiry ಮಾಡಿ ತಪ್ಪತಸ್ಥರನ್ನು ಪತ್ತೆ ಹಚ್ಚಿ ಯಾರ್ಯಾರು ಇದರ ಹಿಂದೆ ಇದ್ದಾರೆ? ಯಾರ್ಯಾರು ಇದನ್ನು instigate ಮಾಡಿದ್ದಾರೆ? ಯಾರೂ ಇದಕ್ಕೆ ಪ್ರಚೋದನೆ ಮಾಡಿದ್ದಾರೆ? ಮತ್ತೆ ಸತ್ತವರಿಗೆ, ನೊಂದವರಿಗೆ, ಆಸ್ತಿ ಕಳೆದುಕೊಂಡಿರುವವರಿಗೆ ಪರಿಹಾರ ಕೊಡಬೇಕು? ಒಟ್ಟಾರೆ ಈ ವಾತಾವರಣವನ್ನು ತಿಳಿಗೊಳಿಸುವಂಥ ಕೆಲಸ ಮಾಡಬೇಕು. Once again I demand the Government. ಸರ್ಕಾರದವರು ಇದನ್ನು prestige ಎಂದು ಮಾಡಿಕೊಳ್ಳದೇನೆ, ತಾವು ಇದನ್ನು ಪೊಲೀಸಿನವರ ಕೈಯಲ್ಲಿ enquiry ಮಾಡಿಸದೇ ಇದ್ದರೆ ನಿಮಗೂ ಇದರಿಂದ ಒಳ್ಳೆಯದೆ. ಇದರ ಹಿಂದೆ ಯಾರಿದ್ದಾರೆಂದು ಗೊತಾಗುತ್ತದೆ, ಇದರ ಹಿಂದೆ Popular front of India ದವರು ಮಾಡಿದ್ದಾರೆಂದು ನೀವು ಹೇಳುತ್ತೀದ್ದೀರಲ್ಲಾ. ಗೊತ್ತಾಗಲಿ, ಅವರೇ ಮಾಡಿದ್ದಾರೆಯೇ, ಯಾರು ಮಾಡಿದ್ದಾರೆಂದು? ಯಾರು ಮಾಡಿದ್ದಾರೆಂದು ಸಿಕ್ಕಿಹಾಕಿಕೊಳ್ಳಲಿ. ತಪ್ಪು ಮಾಡಿದವರು ಇವರಾದರೇನು? ಅವರಾದರೇನು? ಕಾನೂನಿಗಿಂತ ದೊಡ್ಡವರ್‍ಯಾರು ಇಲ್ಲ. ಆ ಕಾರಣದಿಂದ ಇದನ್ನು prestige ಮಾಡಿಕೊಳ್ಳದೇನೇ judicial enquiry ಮಾಡಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೇ, ಈ ವಿಚಾರದಲ್ಲಿ ಎರಡು ನಿಮಿಷ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು, ಜಯಚಂದ್ರರವರು, ನೀವು ಲಿಸ್ಟ್ ಕೊಟ್ಟಿರುವ ಪ್ರಕಾರ ಇದರಲ್ಲಿ 15 ಜನ ಇದ್ದಾರೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಅಧ್ಯಕ್ಷರೇ, ಈಗ 5 ಜನ ಮಾತನಾಡುತ್ತಾರೆ.

ಅಧ್ಯಕ್ಷರು: Time limit ಮಾಡಿಕೊಂಡು, ಸಂಜೆಯೊಳಗೆ ಸರ್ಕಾರದಿಂದ ಉತ್ತರ ಬಂದ ನಂತರ ಈ ವಿಷಯವನ್ನು ಮುಕ್ತಗೊಳಿಸೋಣ. Time limit ಹಾಕಿಕೊಡು ನಾವು ಚರ್ಚೆ ಮಾಡೋಣ.

ಜಯಚಂದ್ರರವರು ಮಾತನಾಡಿದ ನಂತರ ಬಾಲಕೃಷ್ಣರವರೇ ನೀವು ಮಾತನಾಡಿ.

ಶ್ರೀ ಟಿ.ಬಿ.ಜಯಚಂದ್ರ(ಶಿರಾ): ಮಾನ್ಯಅಧ್ಯಕ್ಷರೇ ಮೈಸೂರಿನ ಇತ್ತಿಚೆಗೆ ನಡೆದಂಥ ಕೋಮು ಗಲಭೆಯ ಹಿನ್ನೆಲೆಯಲ್ಲಿ ನಾವು ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಒಂದು ಪೂರಕವಾಗಿ ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಒಂದು ವಿಚಾರ ಇಲ್ಲಿದೆ. ಮೈಸೂರಿನಲ್ಲಿ ನಡೆದಂಥ ಘಟನೆಯನ್ನು ವಿವರವಾಗಿ ಯಾವ ರೀತಿಯಾಗಿ ಆಯಿತು ಎನ್ನುವುದನ್ನು ಆ ಭಾಗದಿಂದ ಬಂದಿರತಕ್ಕ

ಸಿದ್ದರಾಮಯ್ಯನವರು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ಈ ಸಂದಭದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು. ಒಂದು ವರ್ಷದಲ್ಲಿ ಎಷ್ಟು ಕೋಮು ಗಲಭೆಗಳು ನಡೆದವು ಎನ್ನತಕ್ಕಂಥ ವಿಚಾರವನ್ನು ನಾವು ನೋಡಬೇಕು. ಏಕೆಂದರೆ ಇನೂ ನೀವೂ ನಾಲ್ಕು ವರ್ಷ ಅಧಿಕಾರದಲ್ಲಿರುತ್ತೀರಿ, ಅದೆ ರೀತಿ ಮರುಕಳಿಸಿ ಇನೂ ಜಾಸ್ತಿಯಾಗುತ್ತದೋ, ಕಡಿಮೆಯಾಗುತ್ತದೋ ಗೊತ್ತಿಲ್ಲ . ಎಲ್ಲೊ ಒಂದು ಕಡೆ ಕೋಮು ಗಲಭೆ ಆಗುವುದರಿಂದ ಆ ಘಟನೆಗಳು ನಡೆದಂಥ ಪ್ರದೇಶ ಮತ್ತು ರಾಜ್ಯದ ಮೇಲೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಆ ಜನರನ್ನು ನೋಡುವಂಥ ದೃಷ್ಟಿಕೋನ ಯಾವ ರೀತಿ ಬದಲಾವಣೆಯಾಗುತ್ತದೆಂಬದನ್ನೂ ಕೂಡ ಸರ್ಕಾರ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕೋಮುಗಲಭೆ ಯಾವ ರೀತಿಯಾಗಿ ಆಗುತ್ತದೆ, ಯಾವುದಕ್ಕೆ ಆಗಲಿ ಒಂದು ರೀತಿಯಾಗಿ ಪ್ರಚೋದನೆ ಬೇಕು. ಮಂಗಳೂರಿನಲ್ಲಿ ಆಗಿರತಕ್ಕಂಥ ಗಲಭೆ ಇರಬಹುದು, ಬೆಂಗಳೂರಿನಲ್ಲಿ ಆಗಿರುವಂಥ ವಿಚಾರವಿರಬಹುದು, ಮೈಸೂರಿನಲ್ಲಿ ಆದಂತಹ ಗಲಭೆ ಇರಬಹುದು, ಇದಕ್ಕೇನೋ ಒಂದು ಪ್ರಚೋದನೆ ಇದ್ದೇ ಇರುತ್ತದೆ. ಆ ಪ್ರಚೋದನೆ ಯಾವ ರೀತಿಯಾಗಿರುತ್ತದೆಂದು ಹೇಳುವುದಾದರೆ ಬಹುತೇಕ ಸಮಸ್ಯೆಗಳು ಉದ್ಭವವಾಗುವುದು ಎಲ್ಲೊ ಒಂದು ವಿನಾ ಕಾರಣವಾಗಿರುವಂಥ ವಿಚಾರವಾಗಿರುತ್ತದೆ. ಮೈಸೂರಿನಲ್ಲಿ ನಡೆದದ್ದಾರೂ ಏನೂ? ಯುಗಾದಿ ಹಬ್ಬದ ದಿವಸ ಎಲ್ಲರು ಖುಷಿಯಿಂದ ಇಸ್ಪೀಟು ಆಡುತ್ತಾರೆ, ಗೆಲ್ಲುತ್ತಾರೆ, ಸೋಲುತ್ತಾರೆ. ಸೋತವನು ದ್ವೇಷ ಸಾಧಿಸುತ್ತಾನೆ, ಗೆದ್ದವನ್ನು ಸಂತೋಷ ಪಡುತ್ತಾನೆ, ಇವೆಲ್ಲಾ ಸರ್ವೇಸಾಮಾನ್ಯವಾಗಿ ಪ್ರತಿಯೊಂದು ಊರಿನಲ್ಲಿಯೂ ಇರುವಂಥದ್ದು ಪ್ರತಿಯೊಂದು ಸಂದರ್ಭದಲ್ಲಿ ಆಗತಕ್ಕಂಥದ್ದು.

ಅದು ಆದ ಮೇಲೆ ಆ ಸಂದರ್ಭದಲ್ಲಿ ಇದು ಮುಖ್ಯವಾದ ಘಟನೆ ನಡೆದಿರತಕ್ಕಂಥದ್ದು, ಕೋಮುಗಲಭೆ ಆಗಿರತಕ್ಕಂಥದ್ದು, ಆಗ ಗಲಭೆಯಾದಾಗ ಇದಕ್ಕೆ ಪ್ರಚೋದನೆ ಏನು ಎಂದರ, 87 ಜನ ಮುಸ್ಲಿಂ ಕೋಮಿಗೆ ಸೇರಿದಂಥವರನ್ನು ಅರೆಸ್ಟ್ ಮ್ಹಡುತ್ತಾರೆ. ಎಂಟು ಜನ ಹಿಂದುಗಳನ್ನು ಅರೆಸ್ಟ್ ಮಾಡುತ್ತಾರೆ. Communal tension ಆಗುವಂಥ ಸಂದರ್ಭದಲ್ಲಿ ಒಂದೇ ರೀತಿಯಾದಂಥ ಗಲಭೆಗಳು, ಭಾಗಿಯಾರತಕ್ಕಂಥವರು ಸ್ವಲ್ಪ ಹೆಚ್ಚು ಕಡಿಮೆ ಇರಬಹುದು , ನೀವು ಅವರನ್ನು ಅರೆಸ್ಟ್ ಮಾಡಿ ಪೊಲೀಸ್ ಸ್ಟೇಷನ್‌ಗೆ ಕೋರ್ಟ್‌ಗೆ ಕಳುಹಿಸುತ್ತೀರಿ. ಅಲ್ಪಸಂಖ್ಯಾತರಿಗೆ ಜಾಮೀನು ಸಿಗುವುದಿಲ್ಲ. ತಮಗೆ ಬೇಕಾದವರಿಗೆ ಬೇಗ ಜಾಮಿನು ಸಿಗುತ್ತದೆ.

ಅಧ್ಯಕ್ಷರು: ಒಂದು ಯಾವುದೇ community ಹೆಸರಿನಲ್ಲಿ specific ಆಗಿ ಹೇಳಿ ಮಾತನಾಡುವುದು ಎಷ್ಟು ಸೂಕ್ತವೆಂದು ನೀವೇ ವಿಚಾರ ಮಾಡಿ. ನೀವು ಆ ಒಂದು community, ಈ ಒಂದು community ಎಂದು ಹೇಳಿ. ಆದರೆ, specificಆಗಿ

ಒಂದು community ಹೆಸರು ಹೇಳುವುದರಿಂದ ಒಳ್ಳೆಯ signal ಹೋಗುವುದಿಲ್ಲ. ಇದನ್ನು ನೀವೇ ಅರ್ಥ ಮಾಡಿಕೊಳ್ಳಿ. ನಾನು ಇನ್ನು ಹೆಚ್ಚಿಗೆ ಹೇಳುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ): ಅರೆಸ್ಟ್ ಮಾಡಬೇಕಾದಾಗ ಸೆಕ್ಷನ್ಸ್ ಇರುತ್ತವೆ. ಸೆಕ್ಷನ್ಸ್ ಅನ್ನು ತಾರತಮ್ಯ ಮಾಡತಕ್ಕಂಥವರು ಯಾರು? ಪೊಲೀಸ್‌ನವರು ಕೇಸ್ ಹಾಕತಕ್ಕಂಥದ್ದು. ಪೊಲೀಸ್‌ನವರು ಕೇಸ್ ಹಾಕಬೇಕಾದಾಗ ಅವರಿಗೆ ಒಂದು section, ಇವರಿಗೆ ಒಂದು section. ಅವರಿಗೆ 2–3 section ಎಂದು ಹಾಕುವುದಾದರೆ ಇದು ತಾರತಮ್ಯ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೇ? ಇದು ಮುಖ್ಯವಾಗಿ ಇರುವಂಥದ್ದು. ಈ ರೀತಿಯಾಗಿ ಇರುವಂಥ ವಿವಾದ, civil dispute ಹೇಗೆ ಬರುತ್ತದೆ? ಆ ಕೋಮು ಗಲಭೆ ಆದ ಮೇಲೆ ಅಲ್ಲಿ ಒಂದು ಹುಲಿಗೆಮ್ಮ ದೇವಸ್ಥಾನದಲ್ಲಿ ಒಂದು ಗಲಾಟೆಯನ್ನು ಮಾಡುತ್ತಾರೆ. ಅಲ್ಲಿ ಕಟ್ಟಿರತಕ್ಕಂಥ ಮಸೀದಿ ಅದು ಒಂದು commercial ಜಾಗ, ಆ ಒಂದು commercial ಜಾಗದಲ್ಲಿ ಕಟ್ಟಬಾರದು ಎಂದು ಇದೆ, ಆಗ ಎಷ್ಟೇ ತಕರಾರು ಇದ್ದಾಗ್ಯೂ ಕೂಡ ಕಾರ್ಪೊರೇಷನ್‌ನಿಂದ ಇವತ್ತು ಲೈಸೆನ್ಸ ಕೂಡ ಸಿಗುತ್ತದೆ, ಅದನ್ನು ಅವರ ಬೈಲಾ ಪ್ರಕಾರ ಇವತ್ತು ಅವರಿಗೆ permission ಕೊಡುತ್ತಾರೆ. ಅದನ್ನು ಕಟ್ಟುವಂಥ ಸಂದರ್ಭ ಒಂದು ಕಡೆ ಆಗಿದ್ದಾಗ, ಆಗ ಹುಲೆಗೆಮ್ಮ ದೇವಸ್ಥಾನದವರು ಒಂದು ಅರ್ಜಿ ಕೊಡುತ್ತಾರೆ. ಆ ಅರ್ಜಿಯನ್ನು ಕೊಡತಕ್ಕಂಥದ್ದನ್ನು ಒಂದೇ ಒಂದು ಶಬ್ದವನ್ನು ನೋಡಿದರೆ ಸಾಕಾಗುತ್ತದೆ. ಒಂದು ಸಾಲು ಓದುತ್ತೇನೆ. 31–03–2009ಕ್ಕೆ ಹುಲಿಗೆಮ್ಮ ದೇವಸ್ಥಾನ, ಕ್ಯಾತಮಾರನ ಹಳ್ಳಿ, ಮೈಸೂರು. ಇವರು ಜಿಲಾಧಿಕಾರಿಗಳಿಗೆ ಒಂದು ಅರ್ಜಿಯನ್ನು ಕೊಡುತ್ತಾರೆ. “ಇದು ಅರೇಬಿಕ್ ಶಾಲೆ ಎಂದು ನಾಮಫಲಕ ಅಳವಡಿಸಿ ಅಲ್ಲಿ ನಮಾಜು ಮಾಡುವುದು ಮತ್ತು ಇನ್ನಿತರ ಕಾರ್ಯಕ್ರಮಗಳಿಗೆ ಬಳಸುತ್ತಿರುವುದು ಈ ಬಡಾವಣೆಯಲ್ಲಿ ಸರಿಯಲ್ಲ. ಇದನ್ನೆಲ್ಲಾ ಗಮನಿಸಿದರೆ ದೇಶದ್ರೋಹಿಗಳ ಚಟುವಟಿಕೆ ಹತ್ತಿರ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ”. ಇದು Deputy commissionerಗೆ ಕೊಡತಕ್ಕಂಥದ್ದು. ಇದು ಹುಲಿಗೆಮ್ಮ ದೇವಸ್ಥಾನಕ್ಕೆ ಸಂಬಂಧಪಟ್ಟಿದ್ದು. ಇದಾದಮೇಲೆ ಅರ್ಜಿಯಲ್ಲಿ ಕೊನೆಯದಾಗಿ ಹೇಳುತ್ತಾರೆ, ಮಸೀದಿ ಹಾಗೂ ಮದರಸಾ ಇರುವುದರಿಂದ ಈ ಬಡಾವಣೆಯಲ್ಲಿ ಮಸೀದಿ ಮಾಡುವಂಥ ಅವಶ್ಯಕತೆ ಖಂಡಿತ ಇಲ್ಲ, ಹಾಗೆ ಏನಾದರೂ ಮಸೀದಿ ಮಾಡಲು ಮುಂದಾದರೆ ಬಹುಸಂಖ್ಯಾತರಾಗಿರುರ ಹಿಂದುಗಳಾದ ನಾವು ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ. ಇಂತಹ ಕೆಲಸಕಾರ್ಯಗಳು ಮೈಸೂರಿನ ನಗರದಲ್ಲಿ ಮುಂದುವರೆದರೆ ಇದರಿಂದ 1992ರಲ್ಲಿ ನಡೆದ ಮತೀಯ ಘರ್ಷಣೆ ಪುನರಾವರ್ತನೆ ಸಾಧ್ಯತೆಗೆ ಇಂತಹ ಚಟುವಟಿಕೆಯೇ ಕಾರಣ. ಬಹಳ ಜನ ಸಹಿ ಮಾಡಿದ್ದಾರೆ. ಇದು ಏನು ಸ್ವಾಮಿ? ಒಬ್ಬ ಜಿಲ್ಲಾ ಅಧಿಕಾರಿಗಳಿಗೆ ಇದು ಲಿಖಿತವಾಗಿ

communal violence ಆಗುತ್ತದೆ. ಎಂದು ದೇವಸ್ಥಾನದವರು ಕೊಟ್ಟಾಗ ಯಾವ ಎಚ್ಚರಿಕೆ ತೆಗೆದುಕೊಂಡಿದ್ದಿರಿ? ಯಾವ ರೀತಿಯಾದಂಥ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಅದು ಆದ ಮೇಲೆ 01/07ಕ್ಕೆ ಹಂದಿ ಮಾಂಸವನ್ನು ತೆಗೆದುಕೊಂಡು ಎಸೆದರು. ಹಂದಿ ಮಾಂಸ ತೆಗೆದುಕೊಂಡು ಹೀಗಿ ಎಸೆದ ಮೇಲೆ ಗಲಭೆ ಆಯಿತು , ಸತ್ತರು, ನೂರಾರು ಜನರನ್ನು ಅರೆಸ್ಟ್ ಮಾಡಿದರು. ನಾನು ಏಕೆ ಇದೆಲ್ಲವನ್ನೂ ಹೇಳುತ್ತಿದ್ದೇನೆ ಎಂದರೆ, ಇದು 01/04ರಲ್ಲಿ ಪ್ರಾರಂಭವಾಗಿದೆ. ಹುಲಿಗೆಮ್ಮ ದೇವಸ್ಥಾನದವರು ಅರ್ಜಿ ಕೊಟ್ಟ ಮೇಲೆ intelligenceನವರು ಏನು ಮಾಡುತ್ತಿದ್ದರು ಸ್ವಾಮಿ? ಇವತ್ತು intelligence ನೇರವಾಗಿ Home ministerರವರ ಕೈಯಲ್ಲಿದೆ. ಆ intelligence ನವರು ಏಕೆ ವರ್ತಮಾನ ಕೊಡಲಿಲ್ಲ? intelligence ನವರು ಈ ರೀತಿಯಾಗಿ ಪ್ರಚೋದನೆ ಮಾಡತಕ್ಕಂಥ ಜನರನ್ನು ಏಕೆ ಅರೆಸ್ಟ್ ಮಾಡಲಿಲ್ಲ? Preventive measuresಆಗಿ ಇವೆಲ್ಲವನ್ನೂ ಮಾಡಬಹುದಾಗಿತ್ತು, ಏಕೆ ಅದನ್ನು ಮಾಡಲಿಲ್ಲ? ಇದು ಯಾರ inefficiency ಎಂದು ಹೇಳುತ್ತೀರಿ? ಇದು ಪೊಲೀಸ್‌ನವರ inefficiency ಎನ್ನುವ ಮಾತನ್ನು ಹೇಳತಕ್ಕಂಥದ್ದು ಅಲ್ಲವೇ

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರ ಪೀಠವನ್ನು ಮಾನ್ಯ ಉಪಸಭಾಧ್ಯಕ್ಷರವರು ಅಲಂಕರಿದಸಿದರು)

ಪೊಲೀಸ್‌ರವರು efficiency ಆಗಿ ಕೆಲಸ ಮಾಡುವುದಕ್ಕೆ ಏನಾದರೂ ತೊಂದರೆಯಾಗಿದೆಯೇ? ಹೌದು, ಅದನ್ನೂ ನಾವು ಅಲ್ಲಗಳೆಯುವಂತಿಲ್ಲ. ಅವರ efficiency ಅನ್ನು prove ಮಾಡುವದಕ್ಕೆ ಸಾದ್ಯವಿಲ್ಲದೇ ಇರತಕ್ಕಂಥ ವಾತಾವರಣ ಇವತ್ತು ರಾಜ್ಯದಲ್ಲಿ ಸೃಷ್ಟಿಯಾಗಿದೆ ಒಂದು ವರ್ಷದ ಹಿಂದೆ ಒಬ್ಬರು Commissioner ಇದ್ದರು,ಅವರನ್ನು ಬದಲು ಮಾಡುತ್ತೀರಿ, ಅವರನ್ನು ಬದಲು ಮಾಡಿ 8–10 ದಿವಸಗಳಲ್ಲಿ ಈ ಘಟನೆ ನಡೆಯುತ್ತದೆ, ಹೊಸಬರು ಬರುತ್ತಾರೆ, ಆ ವಿಚಾರ ಅವರಿಗೆ ಗೊತ್ತಿರುವುದಿಲ್ಲ, ನಾನು ಒಂದು ಮಾತನ್ನು ಹೇಳುತ್ತೇನೆ. ಈ ನಮ್ಮ ಅಧಿಕಾರಿಗಳನ್ನು ಸ್ವೇಚ್ಛಾನುಸಾರವಾಗಿ ಯಾವುದೋ ಆಧಾರದ ಮೇಲೆ, ಜಾತಿ ಆಧಾರವೋ ಅಥವಾ ಇನ್ಯಾವುದೋ ಆಮಿಷದ ಆದಾರದ ಮೇಲೆ ವರ್ಗಾವಣೆ ಮಾಡುವುದು ಸರಿಯಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನಮ್ಮ ಕರ್ನಾಟಕದ ಇತಿಹಾಸದಲ್ಲಿ, ಪರಂಪರೆಯಲ್ಲಿ ಒಂದು system ಇದೆ, ಆ system ಅನ್ನು ಹಾಳು ಮಾಡತಕ್ಕಂಥ ನಿಟ್ಟಿನಲ್ಲಿ ಇವತ್ತು ವ್ಯವಸ್ಥೆ ಆದಾಗ ಇದೆಲ್ಲದಕ್ಕೂ ಕಾರನವಾಗುತ್ತದೆ. ತಾವು ಅಧಿಕಾರಕ್ಕೆ ಬಂದ ಮೇಲೆ ಇಂತಹ ವಿಚಾರಗಳು ಜಾಸ್ತಿಯಾಗುವಂಥ ಸಂದರ್ಭ ಇದ್ದಾಗ ನಾವು ಅದಕ್ಕೆ ಏನಾದರೂ ಒಂದು ತೀರ್ಮಾನ ಮಾಡಬೇಕು ಅಲ್ಲವೇ? ಅದಕ್ಕೆ ಏನಾದರೂ ಒಂದು ಇತಿಶ್ರೀ ಹಾಡುವುದಕ್ಕೆ ಒಂದು ತೀರ್ಮಾನ ಮಾಡಬೇಕಲ್ಲವೆ? ಇವತ್ತು Home Minister ಅತ್ಯಂತ ಗೌರವಾನ್ವಿತವಾದಂಥ ವ್ಯಕ್ತಿಗಳು ಮತ್ತು ನನ್ನ ಆತ್ಮೀಯ ಸ್ನೇಹಿತರು ಕೂಡ

ಆಗಿದ್ದಾರೆ. ನಾನು ಒಂದು ಹೇಳುತ್ತೇನೆ, ಇವತ್ತು ವರ್ಗಾವಣೆ ವಿಚಾರದಲ್ಲಿ ಎಷ್ಟು problem ಆಗುತ್ತಿದೆ ಎಂದರೆ, ನನಗೂ ಗೊತ್ತಿದೆ, ಇವತ್ತು ಅವರು ಹೇಳದೇ ಇದ್ದರೂ ನನಗೆ ಗೊತ್ತಾಗುತ್ತದೆ. ಆದರೆ, ಇವತ್ತು ಒಬ್ಬ ಅಧಿಕಾರಿಯನ್ನು ಒಂದು ಸ್ಥಾನಕ್ಕೆ ಹಾಕಿದರೆ ಎರಡು ವರ್ಷಗಳು ಅಲ್ಲಿಯೇ ಇರಲೇಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ Judgement ಆಗಿದೆ, ಆ ಪ್ರಕಾರ ಕಾರ್ಯಕ್ರಮಗಳನ್ನು ಮಾಡಿ. ಯಾರು ನಿಮಗೆ ಒತ್ತಡ ತರುತ್ತಾರೆ? ಅವಶ್ಯಕತೆ ಇದ್ದರೆ, ಬೇಕಾದರೆ ಬಿಲನ್ನು ಬಳಸಿಕೊಳ್ಳಿ. ಒಬ್ಬ ಅಧಿಕಾರಿ ಎರಡು ಕಾಲ ಅಲ್ಲಿಯೇ ಉಳಿಯುತ್ತೇನೆ ಎಂದು ಖಾತ್ರಿಯಾದಾಗಲೇ ಅವರು ಕಾನೂನಿನಂತೆ ಕಿಲಸ ಮಾಡಲು ಸಾಧ್ಯವಾಗುತ್ತದೆ. ಆನರಿಗೆ ರಕ್ಷಣೆ ಕೊಡತಕ್ಕಂಥದ್ದು ಆಗುತ್ತದೆ. ಅಧಿಕಾರಿಗೆ ಖಾತ್ರಿಯಿರುವುದಿಲ್ಲ, ಹೋದ ತಕ್ಷಣವೇ ಮೂರು ತಿಂಗಳೊಳಗಾಗಿ ಏಪ್ರಿಲ್-ಮೇ ಒಂದು season ಹಾಗೂ ನವೆಂಬರ್-ಡಿಸೆಂಬರ್ ಒಂದು season, ಯಾವಾಗ ವರ್ಗಾವಣೆ ಆಗುತ್ತೇನೆ ಎನ್ನುವುದು ಅವರಿಗೆ ಗೊತ್ತಿರುವುದಿಲ್ಲ, ಆಗ ಏನು ಮಾಡುತ್ತಾರೆ? ಇವತ್ತು ವರ್ಗಾವಣೆ ಆಗುತ್ತಿರುವವರು ಯಾರು? ಅದು ನಮ್ಮ ಕಾಲ, ಇದು ನಿಮ್ಮ ಕಾಲ ಎನ್ನುವ ವಿಚಾರವಿಲ್ಲ. ಇವತ್ತು ಯಾರು ಆಡಳಿತವನ್ನು ಇವತ್ತು ಪ್ರಮುಖವಾದ ಪಾತ್ರವನ್ನು ವಹಿಸುತ್ತಿದಾರೆ ಎಂದಾಗ ಅಧಿಕಾರಿಯಾಗಿರುವವರಿಗೆ ಇವತ್ತು ಎಷ್ಟು ಪ್ರಾಮಾಣಿಕವಾಗಿ ಇಂತಹ ಸಮಸ್ಯೆಗಳನ್ನು ಎದುರಿಸಕ್ಕಂಥ ಸಾಮರ್ಥ್ಯ ಬರುತ್ತದೆ, ಧೈರ್ಯ ಬರುತ್ತದೆ, ಶಕ್ತಿ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದು ಒಂದು ರಾತ್ರಿಯಿಂದ ಪ್ರಾರಂಭವಾಗಿದ್ದು 01/07ರವರೆಗೂ ಕೂಡ ಬಹುಶ: ಅಧಿಕಾರಿಗಳಿಗೂ ಕೂಡ ಇವತ್ತು ನಾನು ಗ್ಯಾರಂಟಿಯಾಗಿ ಈ ಸ್ಥಾನದಲ್ಲಿ ಉಳಿಯುತ್ತೇನೆ ಎನ್ನುವ ಖಾತ್ರಿಯಿದ್ದಿದ್ದರೆ, ಅವರು ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಿದ್ದರೆ, ಇವತ್ತು ಈ ಘಟನೆ ನಡೆಯುವುದಕ್ಕೆ ಸಾಧ್ಯವಿರಲಿಲ್ಲ. ನಾನು ಹೇಳುತ್ತೇನೆ. ಇದು Home ministerಗೆ ಗೊತ್ತಿರುವಂಥದ್ದು, ಪ್ರತಿಯೊಂದು ಸ್ಟೇಷನ್‌ನಲ್ಲೂ ಕೂಡ ಆ ಗೂಂಡಾಗಳ ಪಟ್ಟಿಯಿರುತ್ತದೆ. ಗೂಂಡಾಗಳು ಎಂದರೆ communal ಗೂಂಡಾಗಳು ಇರಬಹುದು ಅಥವಾ ಬೇರೆ ಬೇರೆ ಗೂಂಡಾಗಳಿರಬಹುದು, ಏನಾದರೂ ವಿಚಾರ ಬಂದಂಥ ಸಂದರ್ಭದಲ್ಲಿ ಆ ಗೂಂಡಾಗಳ ಮೇಲೆ ಅವರ ಚಲನವಲನದ ಬಗ್ಗೆ, ಅವರ activities ಬಗ್ಗೆ ಗಮನವಿಡಬೇಕಾಗುತ್ತದೆ. ಆ ಗಮನವಿಡುವಂಥ ಕೆಲಸವನ್ನು ಪೊಲೀಸ್ನವರು ಮಾಡಿದ್ದಾರೋ ಅಥವಾ ಇಲ್ಲವೋ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಮೈಸೂರಿನ ಕ್ಯಾತಮಾರನಹಳ್ಳಿ ಇರಬಹುದು, ಉದಯಗಿರಿ ಇರಬಹುದು ಅಥವಾ ಯಾವುದಾದರೂ areaದಲ್ಲಿ ಇರತಕ್ಕಂಥ communal ಗೂಂಡಾಗಳು ಇರಬಹುದು, ಗೂಂಡಾಗಳು ಎಷ್ಟು ಜನರಿದ್ದರು, ಎಷ್ಟು ಜನರನ್ನು ನೀವು ಅರೆಸ್ಟ್ ಮಾಡಿದ್ದೀರಿ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಆ ಪಟ್ಟಿಯಲ್ಲಿ ಯಾರ್‍ಯಾರಿದ್ದಾರೆ ಎಂದು

ದಯಮಾಡಿ ತೋರಿಸಿ. ಅವರು ಬಹುಶ: ನಾನು ಈಗ ಒಂದು ಪತ್ರಿಕೆಯಲ್ಲಿ ನೊಡಿದೆ, ಆ ಪತ್ರಿಕೆಯಲ್ಲಿ ಕುಡ್ಲು ಹಿಡಿದುಕೊಂಡು ಓಡಾಡತಕ್ಕಂಥವರು, ಮಚ್ಚು ಹಿಡಿದುಕೊಂಡು ಓಡಾಡುತ್ತಿರುವಂಥವರು ಇದ್ದಾರೆ, ಅವರ್‍ಯಾರನ್ನು ಕೂಡ ಅರೆಸ್ಟ್ ಮಾಡಿಲಿಲ್ಲವೆಂದರೆ, ಇವತ್ತು ಪೊಲೀಸ್‌ನವರು ಏಕೆ ನಿರ್ಲಿಪ್ತರಾಗಿದ್ದಾರೆ? ಅವರನ್ನು ಅರೆಸ್ಟ್ ಮಾಡುವುದಕ್ಕೆ ಏಕೆ ಧೈರ್ಯ ಬರುತ್ತಿಲ್ಲ? ಇನ್ನೊಂದು ಮುಖ್ಯವಾದಂಥ ವಿಚಾರ ಅಧ್ಯಕ್ಷರೆ, ಇವತ್ತು ಯಾರು ಪ್ರಭಾವಿಗಳು ಇರುತ್ತಾರೋ, ಇಂತಹ communal violence ಆಗಲಿ ಅಥವಾ ಯಾವುದೇ violence ಆದಂತಹ ಸಂದರ್ಭದಲ್ಲಿ ಆ ಘಟನೆಯ ಹಿಂದೆ ಕೆಲವು ಶಕ್ತಿಗಳು ಇರುತ್ತಾರೆ. ಆ ಶಕ್ತಿಗಳನ್ನು ನೀವು ನಿಯಂತ್ರಿಸದೇ ಹೋದರೆ ಅಥವಾ ಪೊಲೀಸರು ತತ್‌ಕ್ಷಣ action ತೆಗೆದುಕೊಳ್ಳದೇ ಹೋದರೆ, ಈ ಎಲ್ಲಾ ಸಮಸ್ಯೆಗೂ ಕಾರಣವಾಗುತ್ತದೆ. ತತ್‌ಕ್ಷಣವಾಗಿರುವಂತಹ action ತೆಗೆದುಕೊಳ್ಳುವ ರೀತಿಯಲ್ಲಿ ಅಧಿಕಾರಿಗಳು ಇವತ್ತು ಧೈರ್ಯವನ್ನು ತೋರಿಸದೇ ಹೋದರೆ ಕಷ್ಟವಾಗುತ್ತದೆ. ಅವರಿಗೆ ಏಕೆ ಧೈರ್ಯ ತುಂಬಲಿಲ್ಲ ಎನ್ನುವುದನ್ನು ಸರ್ಕಾರದ ಸಚಿವರಾಗಿ ನೀವು ಹೇಳಬೇಕಾಗುತ್ತದೆ. ಸರ್ಕಾರವಾಗಿ ನೀವು ಹೇಳಬೇಕಾಗುತ್ತದೆ. ಅಂತಹ ಅಧಿಕಾರಿಗಳನ್ನು ಇವತ್ತು ನೀವು ಉಳಿಸುವಂತಹ ಪ್ರಯತ್ನ ಮಾಡಿದ್ದರೆ, ಬಹುಶ: ಆಗುತ್ತಿತ್ತು ಎನ್ನುವುದು ನನ್ನ ಭಾವನೆ. ಒಬ್ಬ ಕಮೀಷನರ್ ಅವರನ್ನು ವರ್ಗಾವಣೆ ಮಾಡುತ್ತೀರಿ. ಮಾಡಿದ ಎಂಟೇ ದಿವಸದಲ್ಲಿ ಈ ಘಟನೆ ನಡೆಯುತ್ತದೆ. ಅದು ಏನು, ಇವತ್ತು ಅಲ್ಲಿ ನಿಂತಿದ್ದಂತಹ ಪೊಲೀಸ್ ವ್ಯಾನ್ ಅವತ್ತು ಮಾತ್ರ ಇರುವುದಿಲ್ಲ. ಬಹಳ ದಿವಸದಿಂದ ಇದೆ ಅವತ್ತು ಮಾತ್ರ ಇಲ್ಲ ಎಂದರೆ ಏನರ್ಥ? ಯಾರ ಒತ್ತಾಯಕ್ಕೋಸ್ಕರ ಪೊಲೀಸರು withdraw ಮಾಡಿದರು? ಪೂರ್ವ ಭಾವಿಯಾಗಿ ಇದು ಸಂಚು ಇತ್ತೇ ಇಲ್ಲವೇ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ನಿಮಗೆ ಇನ್ನೇನು ಬೇಕಾಗುತ್ತದೆ? ಇದರ ಕಡೆಗೆ ಏಕೆ ಗಮನ ಕೊಡಲಿಲ್ಲ? ಯಾವ ಪೊಲೀಸರ ಮೇಲೆನೀವು action ತೆಗೆದುಕೊಂಡಿದ್ದೀರಿ? ಪೊಲೀಸರ ಮೇಲೆ ಏಕೆ action ತೆಗೆದುಕೊಂಡಿಲ್ಲ ಎನ್ನುವ ಮಾತನ್ನೂ ಕೂಡ ನಾನು ಹೇಳುತ್ತೇನೆ. ಆದರೆ, ಒಂದು ಅಧ್ಯಕ್ಷರೆ, ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಕೂಡ ಒಂದೇ. ಅವರು ಯಾವುದೇ ಜಾತಿ, ಯಾವುದೇ ಕೋಮಿಗೆ ಸೇರಿರಲಿ, they are all equal before the eye of law. ಆದರೆ, ಯಾವುದೋ ಒಂದು ರೀತಿಯಲ್ಲಿ ಇಂತಹ ಘಟನೆಗಳು ನಡೆದಾಗ, ಪೊಲೀಸರಿಗೆ ಎಲ್ಲರೂ ಸರಿಸಮಾನವಾಗಿ ಕಾಣುವುದಿಲ್ಲ. ಒಬ್ಬೊಬ್ಬರು ಒಂದೊಂದು ದೃಷ್ಟಿಯಲ್ಲಿ ಕಾಣುತ್ತಾರೆ. ಅವರು ಹಾಕಿರುವ ಕನ್ನಡಕವೇ ಬಣ್ಣದ ಕನ್ನಡಕವನ್ನು ಹಾಕಿಕೊಂಡಿರುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣುತ್ತಾರೆ. ಅಂದಾಗ ಇವೆಲ್ಲಾ ಸಮಸ್ಯೆಗಳು ಬರುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ಗೃಹ ಸಚಿವರು ಅದರ ಕಡೆಗೆ ಗಮನಹರಿಸಬೇಕು. ಇನ್ನೊಂದು ಬಹಳ ಮುಖ್ಯವಾದುದೇನೆಂದರೆ, ಈ

ಘಟನೆ ನಡೆದಿರತಕ್ಕಂಥ ಜಾಗದಲ್ಲಿ ಅಲ್ಪಸಂಖ್ಯಾತರು ಹೆಚ್ಚು ಜನರಿದ್ದಾರೆ. ಬಡವರು ಇದ್ದಾರೆ. ಎಲ್ಲಾ ಜಾತಿಗೆ ಸೇರಿರತಕ್ಕಂಥವರು ಇದ್ದಾರೆ. ಇವತ್ತು ಹಿಂದುಳಿದ ವರ್ಗದವರೂ ಕೂಡ ಇದ್ದಾರೆ. ಅವರಿಗೆ ಯಾವತ್ತು ಒಂದು ಕಡೆ ಒಬ್ಬ ನಿರ್ದಿಷ್ಟವಾಗಿರತಕ್ಕಂಥ ಪೊಲೀಸ್ ಇವತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಹಿಂದೆ ಹೋದಂತಹ ಸಂದರ್ಭದಲ್ಲಿ, ಮಾನಸಿಕವಾಗಿ insecurity ಎನ್ನತಕ್ಕಂಥ ಭಾವನೆ ಬಂದೇ ಬರುತ್ತದೆ. ಆ insecurity ಬಂದಾಗ, ಅವನು ಸಣ್ಣ ವಿಚಾರವನ್ನೂ ಕೂಡ ದೊಡ್ಡದಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ಅದು ಸ್ವಾಭಾವಿಕ, ಮನುಷ್ಯನ ಗುಣ. ಇವತ್ತು insecurity ಬಂದಾಗ ಅವನು ಬೇರೆಯವರ ಜೊತೆ ಗುಂಪು ಕಟ್ಟುವುದಕ್ಕೆ ಪ್ರಯತ್ನಪಡುತ್ತಾನೆ. ಅದರೆ, ಪೊಲೀಸಿನವರು ಇವತ್ತು ನ್ಯಾಯುತವಾಗಿ ರಕ್ಷಣೆ ಕೊಡುತ್ತಾರೆ ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ಬಂದಿದ್ದರೆ, ಖಂಡಿತವಾಗಿಯೂ insecrity ಎನ್ನುವ sensation ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಯಾವ ರೀತಿಯಲ್ಲಿಯೂ ಅವರು ಗುಂಪು ಕಟ್ಟಿಕೊಳ್ಳುವಂಥ ಪ್ರಶ್ನೆ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ಇಷ್ಟೆಲ್ಲಾ ಆದಾಗ್ಯೂ ಕೂಡ, ಈ ಘಟನೆಗೆ ಕಾರಣಕರ್ತರಾದಂಥವರು ಯಾರೆಂದು ಪೊಲೀಸರಿಗೆ ಗೊತ್ತಿರುತ್ತದೆ. ಯಾರಾದರೂ ಒಬ್ಬ leader ಅನ್ನು arrest ಮಾಡಿದ್ದೀರಾ? ಇಂತಹ ಘಟನೆಗಳು ಆಗಬೇಕಾದರೆ ಯಾರೋ ಜನಸಾಮಾನ್ಯರು ಮಾಡುವುದಿಲ್ಲ. ಯಾರೋ ಬಹಲ ಜನ ಮುಖಂಡರು ಇದ್ದೇ ಇರುತ್ತಾರೆ. ಆ ಮುಖಂಡರುಗಳಲ್ಲಿ ಯಾರನ್ನು arrest ಮಾಡುವ ಕೆಲಸವನ್ನು ಪೊಲೀಸರು ಮಾಡಿದ್ದಾರೆಯೇ? ಅಥವಾ arrest ಮಾಡುವುದಕ್ಕೆ ಹೊರಟಿರುವವರನ್ನು ನೀವು ಬಿಡಲಿಲ್ಲವೇ ಎನ್ನುವ ಅನುಮಾನ ಕೂಡ ಬರುತ್ತದೆ. ಏಕೆಂದರೆ, ಯಾವಾಗಲೂ ಈ communal violence ಎನ್ನತಕ್ಕಂಥದ್ದು, ಒಂದು ದಿವಸಲ್ಲಿ ಆಗುವಂಥ ವಿಚಾರಗಳಲ್ಲ. ಅದು ಬಹಳ ದಿವಸದಿಂದ ನಡೆದುಕೊಂಡು ಬಂದಿರುವಂಥದ್ದು. ನಾಲ್ಕಾರು ತಿಂಗಳನ್ನು ತೆಗೆದುಕೊಂಡಿರುತ್ತದೆ, ಪ್ರಚೋದನೆಗಳು ಇರುತ್ತದೆ, ನಾನಾ ರೀತಿಯ ಚಟುವಟಿಕೆಗಳಾಗುತ್ತವೆ. ಅಲ್ಲಿ ಸ್ಥಳೀಯವಾಗಿರುವಂಥ ಪೊಲೀಸರಿಗೆ ಗೊತ್ತಾಗುತ್ತದೆ. ಬಹಳ ಮುಖ್ಯವಾಗಿರುವಂಥ ವಿಷಯವನ್ನು ಗೃಹ ಸಚಿವರ ಗಮನಕ್ಕೆ ತರುತ್ತೇನೆ. ಇವತ್ತು ಪೊಲೀಸ್ station ನಲ್ಲಿ ಏನಾಗಿದೆ ಎಂದರೆ, ದಯಮಾಡಿ ತಾವು ರಾಜ್ಯದಲ್ಲಿರತಕ್ಕಂಥ ಮಾಹಿತಿಯನ್ನು ತರಿಸಿ. ಇವತ್ತು ನಾನು ನಿಮಗೆ ಬಹಳ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಒಳ್ಳೆಯ ಡಿ.ಜಿ.ಪಿ ಕೂಡ ಇವತ್ತು ಇಲ್ಲಿದ್ದಾರೆ. ನಿಷ್ಪಕ್ಷಪಾತವಾಗಿ ಕೆಲಸ ಮಾಡತಕ್ಕಂಥ ಒಬ್ಬ ಅಧಿಕಾರಿ ಇದ್ದಾರೆ. ಪಾಪ ಅವರನ್ನೂ ಕೂಡ ರಜೆ ಹಾಕಿಸಿದ್ದೀರಿ. ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ಮಾಧ್ಯಮದಲ್ಲಿ ಬಂದಿರುವುದು, ಪ್ರಚಾರದಲ್ಲಿ ಬಂದಿರುವುದು, Transfer ಗಳಿಗೆ ನೀವು ಸಹಾಯ ಮಾಡುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ನೀವು ವರ್ಗಾವಣೆ

ಮಾಡಿದ್ದೀರಿ ಎಂದು ಪ್ರಚಾರದಲ್ಲಿದೆ. ಅದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಇವತ್ತು ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಜನಸಂಖ್ಯೆ ಬೆಳೆಯುತ್ತಿರುವಂತೆ crime rate ಕೂಡ ಜಾಸ್ತಿಯಾಗುತ್ತಿದೆ. ನಾನು ಎಲ್ಲೋ ಒಬ್ಬ ಅಧಿಕಾರಿಯ ಹತ್ತಿರ Crime rate ಕಡಿಮೆಯಾಗುತ್ತಿದೆ ಎಂದು ತಿಳಿದುಕೊಂಡೆ. ಸ್ವಾಮಿ ನಾನೂ lawyer ಆಗಿದ್ದವನು. ಅಸೆಂಬ್ಲಿಗೆ ಬಂದು ಬಹಳ ವರ್ಷಗಳಾಗಿವೆ. Cognizable offence, non-cognizable offence ಎಂದು ಇದೆ. ಇವತ್ತು ಪೋಲೀಸ್ ಸ್ಟೇಷನ್‌ನಲ್ಲಿ ಎಷ್ಟು cognizable offence ಕೇಸ್‌ಗಳನ್ನು registration ಮಾಡಿದ್ದಾರೆ, ಎಷ್ಟು non-cognizable ಅಂದರೆ, NCR ಮಾಡಿರುವಂಥದ್ದು ಎಷ್ಟಿದೆ ಎನ್ನುವುದನ್ನು ನೋಡಿ. ಅದು 1:10 ಇದೆ. ಅಂದರೆ, ನಿಮಗೆ ಅಲ್ಲಿರತಕ್ಕಂಥ ಪೋಲೀಸರ ನಿಯಂತ್ರಣ ಮಾಡತಕ್ಕಂಥ ಜನಶಕ್ತಿ ಇರುತ್ತದೆ. ಆ ಜನಶಕ್ತಿ ಇರತಕ್ಕಂಥವರು ಯೋಚನೆ ಮಾಡಿ, ಯಾರ ಮೇಲೆ ಕೇಸ್ ಹಾಕಬೇಕು, ಯಾರ ಮೇಲೆ ಕೇಸ್ ಹಾಕಬಾರದು, ಅದನ್ನು ತೀರ್ಮಾನ ಮಾಡತಕ್ಕಂಥವರು ಕೆಲವು ಮುಖಂಡರುಗಳು. ಈ ರೀತಿ ಆಗುವುದಾದರೆ, non-cognizable offence ಇವತ್ತು ಜಾಸ್ತಿ ಆಗುವಂಥ ಸಂದರ್ಭ ಇರುವಾಗ, ನೀವು ಇಲ್ಲಿ ಕೂತು ಏನೂ ಮಾಡುತ್ತೀದ್ದೀರಿ? ನಿಮ್ಮ IGP ಗಳನ್ನು ಎಲ್ಲಾ ಸ್ಟೇಷನ್‌ನಲ್ಲಿ inspection ಮಾಡಲು ಕಳುಹಿಸಿ. ಆ ರೆಕಾರ್ಡ್ಸ್‌ಗಳನ್ನು verify ಮಾಡಲಿ. Non-cognizable offencesಗೆ ಹಾಕಿರುತ್ತಾರಲ್ಲಾ ಕೇಸ್‌ಗಳು, ಸೆಕ್ಷನ್ಸ್‌ಗಳು, ಬಡವರು ಹೊದಾಗ ಬರೆದುಕೊಡುವವರು ಪೋಲೀಸರೇ. ಯಾವ ರೀತಿ complaint ಬರೆದುಕೊಡಬೇಕೆಂದು, ಬರೆದುಕೊಡಲು ಕೆಲವರು ಇರುತ್ತಾರೆ. ಅವರಿಗೆ ಹೇಳಿ NCR ಬರುವ ರೀತಿಯಲ್ಲಿ ಮಾಡುವುದು. ಈಗ ನಮ್ಮಂಥವರು, ನಿಮ್ಮಂಥವರು ಹೋಗಿ ಕೇಳಿದರೆ, ನೋಡಿ ಸಾರ್ ಅವರು complaint ಕೊಟ್ಟಿರುವುದೇ ಹಾಗೆ ಎಂದು ಹೇಳುತ್ತಾರೆ. ಅಂದರೆ, ಎಲ್ಲೋ ಒಂದು ಕಡೆಗೆ ಪೋಲೀಸ್ ಸ್ಟೇಷನ್‌ನಲ್ಲಿ ನ್ಯಾಯ ಸಿಗಲಿಲ್ಲವೆಂಬ ತೀರ್ಮಾನಕ್ಕೆ ಒಬ್ಬ ವ್ಯಕ್ತಿ ಬಂದಾಗ, ಅವನು ಬೇರೆ ಕೃತ್ಯಕ್ಕೆ ಇಳಿಯುತ್ತಾನೆ. ಯಾವ ರೀತಿ ತನ್ನ ಮನಸ್ಸನ್ನು ರಕ್ಷಣೆಗೋಸ್ಕರ ನ್ಯಾಯ ಸಿಗಲಿಲ್ಲವೆನ್ನುವ ವಿಚಾರದಲ್ಲಿ ಅವನು ತನ್ನದೇ ಆದಂತಹ ದಾರಿಯನ್ನು ನೋಡಿಕೊಳ್ಳುತ್ತಾನೆ. ಅಲ್ಲಿ law and order problem ಸೃಷ್ಟಿಯಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕೆಂಬ ಕೆಲಸವನ್ನು ತಾವು ಮಾಡಿದ್ದೀರಿ? ಪೋಲೀಸರೆಂದರೆ, ಸರ್ಕಾರದ ಪರವಾಗಿ ಕೆಲಸ ಮಾಡತಕ್ಕಂಥವರೆ. ಆದರೆ ಪೋಲೀಸರು ನಮ್ಮ agent ಎನ್ನುವ ರೀತಿಯಲ್ಲಿ ಅವರನ್ನು treat ಮಾಡುತ್ತೇವೆಲ್ಲಾ ಅದರಲ್ಲೂ ಪೋಲೀಸ್ ಇಲಾಖೆಯನ್ನು, ಅದು ಒಂದು ದೊಡ್ಡ ಮಹಾಪರಾಧ. ಈ ಎಲ್ಲಾ ದುಷ್ಕೃತ್ಯಗಳಿಗೆ ಆ ನಮ್ಮ ಮನೋಭಾವನೆ ಕಾರಣವಾಗಿರತಕ್ಕಂಥದ್ದು. ಒಬ್ಬ ಅಧಿಕಾರಿಯೂ ಪ್ರಾಮಾಣಿಕವಾಗಿ ಕೆಲಸಮಾಡಲಿಕ್ಕೆ ಸಾಧ್ಯವಿಲ್ಲ. ಅದು ಎಲ್ಲಕ್ಕಿಂತ

ಹೆಚ್ಚಾಗಿ ಮೈಸೂರಿನಲ್ಲಿ ಬಹಳ ಜನ ಆರೋಪಿಗಳು ತಲೆ ತಪ್ಪಿಸಿಕೊಂಡಿದ್ದಾರೆ. ಅವರಲ್ಲಿ ಎಷ್ಟು ಜನರನ್ನು arrest ಮಾಡಲಿಕ್ಕೆ ಪ್ರಯತ್ನಪಟ್ಟಿದ್ದೀರಿ? ಕೋರ್ಟ್‌ನಿಂದ ವಾರೆಂಟ್ ಆಗಿದೆ, ಆಗಿದ್ದರೂ ಸಹಾ ಇನ್ನೂ ಯಾರನ್ನೂ arrest ಮಾಡುವ ಪ್ರಯತ್ನ ಮಾಡಲಿಲ್ಲ. ಬಹುಶ: ನಾನು ಹೇಳಬೇಕೆಂದರೆ, ಇಂತಹ ಕೇಸ್‌ಗೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಐದು ಸಾವಿರ ಜನರು ಇದ್ದಾರೆ. ತಲೆ ಮರೆಸಿಕೊಂಡಿರತಕ್ಕಂಥವರು. ವಾರಂಟ್ ಆಗಿ ರಾಜಾರೋಷವಾಗಿ ಓಡಾಡುತ್ತಿರತಕ್ಕಂಥವರು. ಅವರನ್ನು ಮುಟ್ಟತಕ್ಕಂಥ ಸಾಮರ್ಥ್ಯ ಇವತ್ತು ನಿಮಗಿಲ್ಲ. ಮುಟ್ಟುವಂತಹ ಕೆಲಸವನ್ನು ಪೊಲೀಸರು ಮಾಡುತ್ತಿಲ್ಲವೆಂದರೆ ಏನರ್ಥ? ರಾಜಾರೋಷವಾಗಿ ಹೊರಗಡೆ ಓಡಾಡುತ್ತಿದ್ದರೆ, ಮಚ್ಚು ಹಿಡಿದುಕೊಂಡಿರುವವರು ಪತ್ರಿಕೆಗಳಲ್ಲಿ ಬಂದಿದ್ದರೂ ಇವತ್ತು ಪೊಲಿಸರು ಗುರುತಿಸಿ arrest ಮಾಡಲಿಲ್ಲವೆಂದರೆ, ನೀವು ಕಾನೂನು ಸುವ್ಯವಸ್ಥೆಯನ್ನು ಯಾವ ರೀತಿ ಕಾಪಾಡುತ್ತಿರಿ? ಅದು ಸಾಧ್ಯವೇ ಇಲ್ಲ. ದಯಮಾಡಿ ಅಧಿಕಾರಿಗಳ ಮೇಲೆ ಸ್ವಲ್ಪ ನಿಗಾ ಇರಲಿ. Frequent ಆಗಿ transfer ಮಾಡತಕ್ಕಂಥದ್ದನ್ನು ತಪ್ಪಿಸುವಂತಹ ಕೆಲಸವನ್ನು ಮಾಡಿ ಎಂದು ಈ ಸಂದರ್ಭದಲ್ಲಿ ಹೇಳಿ, ವರ್ಗಾವಣೆ ವಿಚಾರದಲ್ಲಿ ಜನರ ಮನಸ್ಸಿನಲ್ಲಿರತಕ್ಕಂಥ ವಿಚಾರವನ್ನು ಹೇಳಬೇಕಾಗುತ್ತದೆ. ಆಯಾಕಟ್ಟಿನ ಜಾಗಗಳಲ್ಲಿ ಸರ್ಕಾರ ಇಚ್ಛೆ ಮಾಡಿದಂಥವರೇ ಬರುತ್ತಾರೆಯೇ ವಿನಹಃ ಅದು ಯಾವ ಆಸೆಗೋಸ್ಕರ ಬರುತ್ತಾರೋ, ಏನು ಕಥೆಯೋ ಗೊತ್ತಿಲ್ಲ. ಯಾವ ರೀತಿ ಮಾರ್ಗಗಳನ್ನು ಹಿಡಿದುಕೊಂಡು ಬರುತ್ತಾರೋ ಗೊತ್ತಿಲ್ಲ. ಆಯಾಕಟ್ಟಿನ ಜಾಗದಲ್ಲಿ ನಿಮಗೆ ಬೇಕಾಗಿರತಕ್ಕಂಥವರನ್ನೇ ಇರತಕ್ಕಂಥದ್ದನ್ನು ಇವತ್ತು ನಾವು ನೋಡಿದ್ದೇವೆ. ನಮ್ಮ ಕಾಲದಲ್ಲಿ ಆಗಲಿಲ್ಲವೆಂದಲ್ಲ, ನಮ್ಮ ಕಾಲದಲ್ಲಿಯೂ ಇತ್ತು. ಆದರೆ, ಇಷ್ಟೊಂದು ದೊಡ್ಡಪ್ರಮಾಣದಲ್ಲಿ 2 ತಿಂಗಳಿಗೇ, 3 ತಿಂಗಳಿಗೇ ಚುನಾವಣಾ ಆಯೋಗ ಬಂತು, ಯಾರ್ಯಾರನ್ನು ವರ್ಗಾವಣೆ ಮಾಡಿತು. ಮಾಡಿದ ಮಾರನೇ ದಿವಸವೇ ಎಲ್ಲಾ ವಾಪಸ್ಸು ತರುವಂತಹ ಕೆಲಸವನ್ನು ಮಾಡಿದ್ದೀರಿ. ಇದೆಲ್ಲಾ ಏನು ತೋರಿಸುತ್ತದೆ, ಪೊಲೀಸರಿಗೆ ಏನು message ಹೋಗುತ್ತದೆ ಎಂದರೆ, ಇವತ್ತು ನಿಮಗೆ ಬೇಕಾಬಿಟ್ಟಿ, ಬೇಕಾದಂಥವರನ್ನು ಇಟ್ಟುಕೊಳ್ಳಬಹುದು, ಮಾಡಬಹುದು ಎನ್ನುವ ಅಭಿಪ್ರಾಯಕ್ಕೆ ಬಂದಾಗ, ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಿಕ್ಕೆ ಸಾಧ್ಯವೇ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಇನ್ನೊಂದು ಅಧ್ಯಕ್ಷರೆ, Intelligence Department ನೇರವಾಗಿ ಇವರ ಕೈಕೆಳಗೆ ಇರುತ್ತದೆ. ದಯಮಾಡಿ ಇವರ Intelligence Department ಕೊಟ್ಟಿರುವಂಥ ವರದಿಯನ್ನು ನೀವು ತರಿಸಿ ನೋಡೋಣ. ಇವತ್ತು ಇವರು ಯಾವ ರೀತಿಯಾಗಿ ವರದಿಯನ್ನು ಕೊಟ್ಟಿದ್ದಾರೆ ಆ ಪ್ರಕಾರ ಇವತ್ತು ಕೆಲಸ ಮಾಡಲಿಕ್ಕೆ ಆಯಿತೇ ಇಲ್ಲವೇ? ಆಕಸ್ಮಾತ್ ಮಾಡಲಿಕ್ಕೆ ಆಗಲಿಲ್ಲವೆಂದರೆ, ಏಕೆ

ಮಾಡಲಿಕ್ಕಾಗಲಿಲ್ಲ? ಇವತ್ತು ನಿಮಗೆ ಅದು PFI ಇರಬಹುದು ಅಥವಾ KFD ಇರಬಹುದು. ಮೊನ್ನೆ ನಡೆದಂತಹ ಘಟನೆಯ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಜನ ಕರ್ನಾಟಕದ ಎಲ್ಲಾ ಭಾಗದಿಂದಲೂ ಜನ ಬರುತ್ತಾರೆಂದರೆ, ನಿಮ್ಮ ಪೊಲೀಸ್ intelligence Department ಅವರು ಏನು ಮಾಡುತ್ತಿದ್ದರು? ಅವರೇನು ಬರಬೇಕಾದರೆ ನಡೆದುಕೊಂಡು ಬಂದರೆ? ನಡೆದುಕೊಂಡು ಬರಲಿಲ್ಲ ಬಸ್ಸಿನಲ್ಲೇ ಬಂದರು, vehicle ನಲ್ಲೇ ಬಂದರು. ಅಷ್ಟೊಂದು ಜನ ಗುಂಪು ಕಟ್ಟಿಕೊಂಡು

4.00 PM

ಗಲಾಟೆ ಮಾಡಬೇಕಾದಾಗ, ನಿಮ್ಮ ಪೊಲೀಸರು ಏನು ಮಾಡುತ್ತಿದ್ದರು? ಅಥವಾ ಗಲಾಟೆಯಾಗಲಿ ಎಂದು ಪೊಲೀಸರು ಸುಮ್ಮನಿದ್ದರೇ? ನೀವು ದಯಮಾಡಿ ಇದರ ಬಗ್ಗೆ ಹೇಳಬೇಕಾಗುತ್ತದೆ. ಏಕೆಂದರೆ, ಇವತ್ತು ಯಾರು ಈ ಅಪರಾಧಕ್ಕೆ ಕಾರಣರಾಗಿರುತ್ತಾರೋ, ಅವರು ನಿಮ್ಮ ಕುರ್ಚಿಗೆ ಹತ್ತಿರವಾಗಿರುತ್ತಾರೆ, ನಿಮಗೆ ಹತ್ತಿರವಾಗಿರುತ್ತಾರೆ, ಅಧಿಕಾರದ ಕುರ್ಚಿಗೆ ಹತ್ತಿರವಾಗಿರುತ್ತಾರೆ. ಆ ಕಾರಣಕ್ಕೋಸ್ಕರ ಇದು ಆಗುತ್ತದೆಂದು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಮಾನ್ಯ ಉಪಾಧ್ಯಕ್ಷರೆ, ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಭಟ್ಕಳದಲ್ಲಿ ಇಂತಹುದೇ ಒಂದು ಘಟನೆ ನಡೆಯಿತು. 1992–93ರಲ್ಲಿ ಆಗ ನಾನೂ ಶಾಸಕನಾಗಿದ್ದೆ. ಬಹುಶ: ಭಟ್ಕಳದಲ್ಲಿ ಆದ ಘಟನೆ ಕರ್ನಾಟಕದಲ್ಲಿ ಎಲ್ಲಿಯೂ ಆಗಿಲ್ಲ. ಅವತ್ತು ಎಷ್ಟು ಜನರು ಅರೆಸ್ಟ್ ಆಗಿದ್ದರು? ಸುಮಾರು 9 ತಿಂಗಳುಗಳು ಕಾಲ ಈ ರಾಜ್ಯದಲ್ಲಿ ಕರ್ಫ್ಯೂ ಇತ್ತು. ಬಹುಶ: ಇಡೀ ದೇಶದಲ್ಲಿ 9 ತಿಂಗಳುಗಲ ಕಾಲ ಎಲ್ಲಿಯೂ ಕರ್ಫ್ಯೂ ಇರಲಿಲ್ಲ. ಅಲ್ಲಿ ಸುಮಾರು 250 ಜನರ stabbing ಆಯಿತು, 30 ಜನರು ಸತ್ತು ಹೋದರು. ಇಷ್ಟೆಲ್ಲಾ ಆದಾಗ್ಯೂ ನೀವು ಜಸ್ಟೀಸ್ ಜಗನ್ನಾಥಶೆಟ್ಟಿ ಆಯೋಗವನ್ನು ರಚಿಸಿದಿರಿ. ಆಯೊಗ ರಚಿಸಿದ ನಂತರ ಅವರಿಂದ ವರದಿ ಬಂತು. ವರದಿಯನ್ನು ನೀವೇನಾದರೂ ತೆಗೆದು ನೊಡಿದಿರಾ? ವರದಿ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಅದರಲ್ಲಿ ಪೊಲೀಸರ ನಿರ್ಲಿಪ್ತತೆಯಿಂದ ಇವತ್ತು ಈ ಘಟನೆಯಾಗಿದೆ ಎಂದು ಉಲ್ಲೇಖವಾಗಿರುವಾಗ ಮತ್ತು ಇದರಲ್ಲಿ ಪೊಲೀಸರ collision ಇದೆಯೆಂಬ ಮಾತನ್ನು ಹೇಳಿದಾಗಲೂ ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೆಂದರೆ ನಾನೇನು ಹೇಳಬೇಕು?

ಒಂದು ಮುಖ್ಯವಾದುದೇನೆಂದರೆ, ಅದು ಯಾವ ರೀತಿ ಕೊನೆಯಾಯಿತು ಎಂಬುದು. ನಾನು ಏನಾದರೂ ನೇರವಾಗಿ ಪ್ರಸ್ತಾಪಿಸುವುದಕ್ಕೆ ಹೊದರೆ, ಅವರು ಈ ಮನೆಯ ಸದಸ್ಯರಲ್ಲವೆಂದು ಹೇಳುತ್ತೀರಿ. ಅವತ್ತಿನ ಸಂದರ್ಭದಲ್ಲಿ ಯಾರ್‍ಯಾರನ್ನು ಅರೆಸ್ಟ್ ಮಾಡಿದಿರಿ ಎಂಬುದನ್ನು ದಯಮಾಡಿ ಕಡತವನ್ನು ತರಿಸಿ ನೋಡಿ. ಯಾರ್‍ಯಾರು ಇದಕ್ಕೆ ಮುಖ್ಯ ಕಾರಣಕರ್ತರಾಗಿದ್ದರೋ, ಮುಖಂಡರಿದ್ದರೋ, ಅವರೆಲ್ಲರನ್ನೂ ಅರೆಸ್ಟ್ ಮಾಡಿದ ನಂತರ ಭಟ್ಕಳ ಪ್ರಕರಣ ಕೊನೆಯಾಯಿತು. ಅವತ್ತಿನಿಂದ ಇವತ್ತಿನವರೆಗೂ ಆ ಪ್ರಕರಣ ಮರುಕಳಿಸಲಿಲ್ಲ. ಅಂದಾಗ ಅಂತಹುದೇ

ಒಂದು ವಾತಾವರಣವನ್ನು ಸೃಷ್ಟಿಸಬೇಕೆಂದಾಗ ನೀವು ಇವತ್ತು ನಿರ್ದಿಷ್ಟವಾಗಿರುವ ರೀತಿಯಲ್ಲಿ prompt ಆಗಿರುವ ಕ್ರಮ ತೆಗೆದುಕೊಳ್ಳಬೇಕು. ಇಲ್ಲವೆಂದರೆ, ಇದು ಎರಡನೆಯ ಭಟ್ಕಳ ಆಗುವುದರಲ್ಲಿ ಅನುಮಾನವಿಲ್ಲ ಎಮಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇವತ್ತು ಒಂದು ಕಡೆ communal violences ಆಗುವುದಾದರೆ, ಇದರಿಂದ ರಾಜ್ಯಕ್ಕಾಗುವ ನಷ್ಟ ಎಷ್ಟಿದೆ? ರಾಜ್ಯಕ್ಕಾಗುವ ಅವಮಾನ ಎಷ್ಟಿದೆ ಎಂಬುದನ್ನು ಯೊಚಿಸಬೇಕಾಗುತ್ತದೆ. ದಯಮಾಡಿ ಈ ಸಂದರ್ಭದಲ್ಲಿ ನಾನು ಒತ್ತಾಯಿಸುವುದಿಷ್ಟೆ. ಜಸ್ಟೀಸ್ ಜಗನ್ನಾಥಶೆಟ್ಟಿ ಆಯೋಗದಲ್ಲಿ ಹೇಳಿರುವ ವಿಚಾರಗಳನ್ನು ಪ್ರಸ್ತಾಪಿಸಿ, ಇವತ್ತು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಒತ್ತಾಯಿಸುತ್ತೇನೆ. ನಮ್ಮ ಎಷ್ಟು ಪೊಲೀಸರು ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ನಾನು ಬೆಳಿಗ್ಗೆ ಪೇಪರ್ ನೋಡಿದಾಗ ಅರ್ಥವಾಯಿತು. ಒಬ್ಬ ಈ ರಾಜ್ಯದ ಮಂತ್ರಿಯಾಗಿರುವವರು, ಒಬ್ಬ ಕಾನೂನು ಸಚಿವರು, ಒಬ್ಬರು ಸುಪ್ರಿಂ ಕೋರ್ಟ್ ಜಡ್ಜ್ ಹೋದಾಗ ಒಬ್ಬ ಪೊಲೀಸ್ ಒಂದು ಒಬ್ಬ ಸಚಿವರನ್ನು ಪ್ರಶ್ನಿಸುತ್ತಾನೆಂದರೆ, ಇದು ಪ್ರಜಾಪ್ರಭುತ್ವಕ್ಕೆ ಆಗುವ ಅವಮಾನ. ಒಬ್ಬ ಪೊಲೀಸ್ ಕಾನ್ಸ್ಟೇಬಲ್ ಒಬ್ಬ ಮಂತ್ರಿಗಳ ಹತ್ತಿರ ಬಂದು ಪ್ರಶ್ನಿಸುತ್ತಾನೆಂದರೆ ಏನಿದು? ಇದನ್ನು ಇವತ್ತು ಪತ್ರಿಕೆಗಳಲ್ಲಿ ಓದಿದರೆ, ನಾವು ತಲೆತಗ್ಗಿಸಬೇಕಾಗಿರುವ ರೀತಿಯಲ್ಲಿ ಆಗುತ್ತದೆ. ಅಂದಾಗ, ನಿಮ್ಮ ಪೊಲೀಸರು ಏನು ಮಾಡುತ್ತಿದ್ದಾರೆ? ಅವರಿಗೇನಾದರೂ ಲಂಗು–ಲಗಾಮು ಇದೆಯೇ? ಆ ರೀತಿಯಾಗಿ ಇವತ್ತು ಒಬ್ಬ ಮಂತ್ರಿಗಳನ್ನು ಕ್ರಿಮಿನಲ್ ಬ್ಯಾಕ್‌ಗ್ರೌಂಡ್ ಇದೆಯೇ? ಇಲ್ಲವೇ? ಎಂದು ಕೇಳುವ ಮಟ್ಟಕ್ಕೆ ಹೋಗುತ್ತಾರೆಂದರೆ, ಇದು ಶುದ್ಧ ಅವಮಾನದ ಕೆಲಸ. ಏಕೆ ಇದೆಲ್ಲಾ ಆಗುತ್ತಿದೆ? ಇದೆಲ್ಲವೂ ಆಗುತ್ತಿರುವುದು ನಿಮ್ಮಿಂದ.

ನೀವು ಮಾಡುತ್ತಿರುವುದೇನೆಂದರೆ, ಅಲ್ಲಿರುವ ಸಿಸ್ಟಮ್ ಅನ್ನು ನೀವು ಹಾಳು ಮಾಡಿರುವ ಹಿನ್ನೆಲೆಯಲ್ಲಿ ಇದೆಲ್ಲವೂ ಆಗುತ್ತಿದೆ. ಅದನ್ನು ನೀವು ಸರಿಪಡಿಸಬೇಕಾದಾಗ ಬಹುಶ: ನೀವು ಒಂದು ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳುವುದರ ಜೊತೆಗೆ ನಿಮಗೆ ಆ tension ಆಗುವುದಕ್ಕೆ ಕಾರಣ, ಅಮಾಯಕರನ್ನು ಅರೆಸ್ಟ್ ಮಾಡುತ್ತಿದ್ದೀರಿ. ಅಮಾಯಕರು ಬಿಡುಗಡೆಯಾಗುವುದಿಲ್ಲ. ಏಕೆಂದರೆ, ಅವರಿಗೆ IPC Section ಬೇರೆಯಾಗಿರುತ್ತದೆ! ಆಗ ನಿಮಗೆ ಸ್ವಾಭಾವಿಕವಾಗಿ tension ಬರುತ್ತದೆ. ಅದು ಯಾವುದೇ ಜನಾಂಗವಾಗಿರಲಿ, ಹಿಂದೂ ಆಗಿರಲಿ, ಮುಸ್ಲಿಂ ಆಗಿರಲಿ, ಯಾರೇ ಆಗಿರಲಿ, ಈ ರೀತಿ ನಿರಪರಾಧಿಗಳನ್ನು ಅರೆಸ್ಟ್ ಮಾಡಿದಾಗ ಜನರು ಅಕ್ರೋಶಕ್ಕೊಳಗಾಗುತ್ತಾರೆ, ಅದನ್ನು ಜನರು ಬೆಂಬಲಿಸುತ್ತಾರೆ, ಅವರು ಬುದ್ಧಿಭ್ರಮಣೆಗೊಳಗಾಗುತ್ತಾರೆ. ಅವರು ಯಾವ ರೀತಿಯಲ್ಲಾದರೂ law and order situation create ಮಾಡುವುದಕ್ಕೆ

ಹೊರಡುತ್ತಾರೆ. ಅದಕ್ಕೋಸ್ಕರ ಹೇಳುತ್ತೇನೆ. ಇವತ್ತಿಗೆ ಇನ್ನು ಕೇವಲ ಎರಡು ತಿಂಗಳಿಗೆ ದಸರಾ ನಡಯುತ್ತದೆ. ದಸರಾಗೆ ಜನರು ಬರುತ್ತಾರೋ ಇಲ್ಲವೋ ಅನುಮಾನ ಎನ್ನುವ ರೀತಿಯಲ್ಲಿದೆ. ಆರ್ಥಿಕವಾಗಿ ಬೆಂಗಳೂರು ಬಿಟ್ಟರೆ ನಂತರ ಮೈಸೂರು ಎನ್ನುವಂತಹ ವಾತಾವರಣ ಇವತ್ತು ರಾಜ್ಯದಲ್ಲಿ ಇರುವಾಗ ಈ ಪ್ರಕರಣವೊಂದು ಕಪ್ಪುಚುಕ್ಕೆಯಾಗಿದೆ. ಈ ಕಪ್ಪುಚುಕ್ಕೆ ಯಾರಿಂದ ಆಗಿದೆಯೆಂದರೆ, ಪೊಲೀಸರಿಂದ. ಪೊಲೀಸರಿಂದ ಆಗಿಲ್ಲ ಎನ್ನುವುದಾದರೆ, ಸರ್ಕಾರವನ್ನು ನಿಯಂತ್ರಿಸುತ್ತಿರುವ, ಅಧಿಕಾರಿಗಳನ್ನು ನಿಯಂತ್ರಿಸುತ್ತಿರುವ ಸರ್ಕಾರದವರಾದ ನೀವು ಏನು ಮಾಡುತ್ತಿದ್ದಿರಿ? ಅಥವಾ ನೀವೇನಾದರೂ ಇದರಲ್ಲಿ ಶಾಮೀಲಾಗಿ ಯಾರನ್ನೋ favour ಮಾಡುವುದಕ್ಕೆ ಮಾಡುತ್ತಿದ್ದೀರಾ? ಅಥವಾ ಮುಂದಿನ ದಿನಗಳಲ್ಲಿ ಇಂತಹುದೇ ವಾತಾವರಣ ಸೃಷ್ಟಿಯಾದರೆ ಅದರಿಂದ ರಾಜಕೀಯವಾಗಿ ಲಾಭವಾಗುತ್ತದೆ ಎಂದೇನಾದರೂ ಯೋಚಿಸಿದ್ದೀರಾ?

ಇದನ್ನೆಲ್ಲವನ್ನೂ ನೋಡಿದಾಗ ಎಲ್ಲಿಯೋ ಒಂದು ಕಡೆ ಅದು ಸರ್ಕಾರದ ನೇರವಾಗಿ ಜನರ ಹಸ್ತಕ್ಷೇಪ ಕಾಣುತ್ತದೆ, ಪೊಲೀಸರ ನಿರ್ಲಿಪ್ತತೆ ಕಾಣುತ್ತದೆ. ಹಾಗಾಗಿ, ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಮ್ಮ ವಿರೋಧ ಪಕ್ಷದ ನಾಯಕರು ಏನು ಡಿಮ್ಯಾಂಡ್ ಮಾಡಿದ್ದಾರೆ, ನ್ಯಾಯಾಂಗ ತನಿಖೆ ಮಾಡುವುದರ ಜೊತೆಗೆ, ಬಹುಶ: ಇದರಿಂದ ಈ ರಾಜ್ಯಕ್ಕೆ ಒಂದು ಒಳ್ಳೆಯ ಸಂದೇಶ ಹೋಗಬೇಕೆನ್ನುವುದಾದರೆ, ಸಿ.ಬಿ.ಐ. ತನಿಖೆ ಮಾಡಬೇಕೆಂದು ಸಲಹೆ ಮಾಡಿದರು. ಅದು ಉತ್ತಮ ಸಲಹೆಯಾಗಿದೆ. ನನ್ನ ಸಲಹೆ ಇಷ್ಟೆ. ಮುಂದಿನ ದಿನಗಳಲ್ಲಿ communal tension ಆಗಬಾರದು. ನಮ್ಮ ಮರ್ಯಾದೆ ಹಾಳಾಗಬಾರದೆಂಬ ಉದ್ದೇಶವಿದ್ದರೆ, ಇವತ್ತು ಎಲ್ಲಿಯೋ ಪೊಲೀಸರು ಒಂದು ಕಡೆ ತಪ್ಪು ಮಾಡಿದರೆ ಸರ್ಕಾರ ನಿಜವಾಗಿಯೂ ಸಿ.ಬಿ.ಐ. ಎನ್‌ಕ್ವೇರಿ ಮಾಡಿಸಿತೆಂದು ಜನರು ಮೆಚ್ಚುವುದಾಗಿರಬಹುದು. ಆಗ ನೀವು ಯಾರು ಏನೇ ಹೇಳಿದರೂ ಕೆಲಸ ನಡೆಯುವುದಿಲ್ಲ. ಈ ರೀತಿ ಸರ್ಕಾರವು ನಿರ್ದಾಕ್ಷಿಣ್ಯವಾಗಿ ತೀರ್ಮಾನ ತೆಗೆದುಕೊಂಡಾಗ, ಅಂದರೆ, ಪ್ರಾಮಾಣಿಕವಾಗಿ ನಮ್ಮ ಹಸ್ತಕ್ಷೇಪವಿಲ್ಲ, ನಮ್ಮ ಯಾವುದೇ ಮಂತ್ರಿಗಳು ಹಸ್ತಕ್ಷೇಪ ಮಾಡಿಲ್ಲ, ಅದು ತನ್ನಷ್ಟಕ್ಕೆ ತಾನಾಗಿದೆ, ಪೊಲೀಸರು ಇವತ್ತು ತಪ್ಪು ಮಾಡಿದ್ದಾರೆ ಎನ್ನುವುದಾದರೆ Judicial Enquiry ಮಾಡಿ ನೋಡೋಣ ಅಥವಾ CBI Enquiry ಮಾಡಿ. ಏಕೆಂದರೆ, ಎಲ್ಲಿಯೋ ಒಂದು ರೀತಿ Third Party Enquiry ಆಗಬೇಕಾಗುತ್ತದೆ ಅತವಾ CoD Enquiry ಆದರೆ ಪ್ರಯೋಜನವಾಗುವುದಿಲ್ಲ. ಅಲ್ಲಿರುವವರು ಪೊಲೀಸರೇ ಆಗಿರುವುದರಿಂದ, ಅವರ ಮೇಲೆ ಮತ್ತೆ ಪ್ರಭಾವಗಳು! ಇವೆಲ್ಲವನ್ನೂ ತಪ್ಪಿಸಬೇಕೆಂದರೆ, ಒಂದು ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕೆಂದರೆ, ನಿವು ನ್ಯಾಯಾಂಗ ತನಿಖೆಗೆ ಒಪ್ಪಲೇಬೇಕು. ಅದನ್ನು ಒಪ್ಪಿದಾಗ ಜನರು ಇವತ್ತು ನಿಮ್ಮನ್ನು ನಂಬುತ್ತಾರೆ. ಮುಂದಿನ ನಾಲ್ಕು ವರ್ಷಗಳಲ್ಲಿ ನೀವು ಅಧಿಕಾರದ ಅವಧಿಯಲ್ಲಿ ಇಂತಹ

ವಿಚಾರಗಳು ಮರುಕಳಿಸದಂತಹ ವಿಶ್ವಾಸ ನಿಮಗೆ ಬರಬೇಕಾದರೆ, ಜನರಿಗೆ ಎಲ್ಲಿಯೋ ಒಂದು ಕಡೆ ಅಲ್ಪಸಂಖ್ಯಾತರು ಇರಬಹುದು, ಬಡವರು ಇರಬಹುದು ಅವರಲ್ಲಿ ವಿಶ್ವಾಸ ಬರಬೇಕಾದರೆ, ಇಂತಹ ಒಂದು ಎನ್‌ಕ್ವೇರಿ ಮಾಡಿಸಬೇಕೆಂಬ ಮಾತನ್ನು ನಾನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ(ಮಾಗಡಿ):- ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷ ನಾಯಕರು ನಿಲುವಳಿ ಸೂಚನೆ ಮುಖಾಂತರ ಮಂಡಿಸಿದ ಈ ಘಟನೆಯನ್ನು ತಾವು ನಿಯಮ 69ರಡಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಎಲ್ಲಿಯೋ ಒಂದು ಕಡೆ ಶಾಂತಿಗೆ ಹೆಸರುವಾಸಿಯಾದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೋಮು ಗಲಭೆ ಇತ್ತೀಚಿನ ದಿವಸಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮೊದಲು ಯಾವಾಗಲೂ ಇಂತಹ ಘಟನೆಗಳು ಮೈಸೂರಿನಲ್ಲಿ ನಡೆದಿರಲಿಲ್ಲ. ಇತ್ತೀಚೆಗೆ ಜಾಸ್ತಿಯಾಗುತ್ತಿದೆ ಎಂಬ ಭಾವನೆ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಶಂಕರಲಿಂಗೇಗೌಡರು ನಿನ್ನೆ ಮಾತನಾಡುತ್ತಾ, ಇದರ ಹಿಂದೆ ರಾಜಕಾರಣಿಗಳ ಕೈವಾಡವಿದೆಯೆಂದರು. "ರಾಜಕಾರಣಿಗಳು" ಎಂದು ನಾನು ನೇರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಿಯೋ ಒಂದು ಕಡೆ ಒಂದೊಂದು ಪಕ್ಷದವರು ಒಂದೊಂದು ಕೋಮನ್ನು ಗುತ್ತಿಗೆ ತೆಗೆದುಕೊಳ್ಳುವ ರೀತಿಯಲ್ಲಿ ಮಾಧ್ಯಮಗಳಲ್ಲಿ ಏನು ಬಿತ್ತರಿಸುವುದಕ್ಕೆ ಹೊರಟಿದ್ದಾರೆ, ಅದು ಕೂಡ ಇದಕ್ಕೆ ಕಾರಣವೆಂದು ನಾನು ಹೇಳುವುದಲ್ಲ, ಮೈಸೂರಿನಲ್ಲಿ ಸಾಮಾನ್ಯ ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಸನ್ಮಾನ್ಯ ಅಧ್ಯಕ್ಷರೆ, ಈ ಘಟನೆಯ ಹಿನ್ನೆಲೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಕ್ಯಾತಮಾರನಹಳ್ಳಿಯಲ್ಲಿ ಅಲಿಮಾ ಸಾದಿಯಾ ಟ್ರಸ್ಟ್‌ನವರು ಆ ಜಾಗವನ್ನು ಖರೀದಿಸಿ ಕಾರ್ಪೊರೇಷನ್‌ನಿಂದ ಒಪ್ಪಿಗೆ ಪಡೆದು ಒಮದು ಮಸೀದಿ ಮತ್ತು ಮದರಸಾವನ್ನು ಆರಂಭಿಸುವುದಕ್ಕೆ ಹೋದಾಗ ಅಲ್ಲಿದ್ದ ಹುಲಿಯಮ್ಮ ದೇವಸ್ಥಾನ ಟ್ರಸ್ಟ್ ಮತ್ತು ಕ್ಯಾತಮಾರನಹಳ್ಳಿ ಕ್ಷೇಮಾಭಿವೃದ್ಧಿ ಸಂಘದವರು ತಕರಾರು ಅರ್ಜಿಯೊಂದನ್ನು ಜಿಲ್ಲಾಧಿಕಾರಿಗಳಿಗೆ ಕೊಡುತ್ತಾರೆ. 'ಇಲ್ಲಿ ಮಸೀದಿ ಅವಶ್ಯಕತೆ ಇಲ್ಲ, ಇಲ್ಲಿ ಕೋಮು ಗಲಭೆಗಳು ಜಾಸ್ತಿಯಾಗುತ್ತವೆ ಮತ್ತು ಇಲ್ಲಿ ಮದರಸಾಗಳ ಅವಶ್ಯಕತೆಯೂ ಸಹ ಇಲ್ಲ, illegal activities ಅಲ್ಲಿ ಜಾಸ್ತಿಯಾಗುತ್ತವೆ' ಎನ್ನತಕ್ಕ ಒಂದು ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಅವತ್ತೇ ಆ ಮನವಿಯನ್ನು ತಿರಸ್ಕಾರ ಮಾಡಿದ್ದಾರೆ, ಬಹುಶ: ಈ ಘಟನೆ ಆಗುತ್ತಿರಲಿಲ್ಲವೆಂದು ನನ್ನ ಭಾವನೆ. ಏಕೆಂದರೆ, ಕಾರ್ಪೊರೇಷನ್‌ನವರು ಈಗಾಗಲೇ ಕಟ್ಟಡವನ್ನು ಕಟ್ಟಲಿಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಅನುಮತಿಯನ್ನು ಕೊಟ್ಟಿದ್ದರೂ ಕೂಡ, ಯಾವುದೋ ಒಂದು ಬಲವಂತಕ್ಕೆ ಕಟ್ಟುಬಿದ್ದು, ತಾತ್ಕಾಲಿಕವಾಗಿ ಅದನ್ನು ನಿಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಏನು ಸೂಚನೆಯನ್ನು ಕೊಟ್ಟರು, ಸಂಬಂಧಪಟ್ಟ ಕಾರ್ಪೊರೇಷನ್ ಅಧಿಕಾರಿಗಳಿಗೆ 'ಹೋಗಿ ಮತ್ತೊಮ್ಮೆ ಪರಿಶೀಲನೆ

ಮಾಡಿ' ಎಂದು ಸೂಚನೆಯನ್ನು ಕೊಟ್ಟರು, ಅವತ್ತೇ ಈ ಗಲಭೆ ಪ್ರಾರಂಭವಾಯಿತು. ಒಂದು ಕೋಮಿನ ಜನರಿಗೆ ಒಂದು ರೀತಿಯ ಭಾವನೆ ಉಂಟಾಯಿತು. ಎಲ್ಲೋ ಒಂದು ಕಡೆ ನಮಗೆ ತೊಂದರೆ ಕೊಡುತ್ತಿದ್ದಾರೆ, ಈ ಸರ್ಕಾರದಿಂದ ನಮಗೆ ನ್ಯಾಯ ಸಿಗುತ್ತಿಲ್ಲ ಎಂಬ ಭಾವನೆ ಒಂದು ಕೋಮಿನ ಜನರಿಗೆ ಬಂದಂತಹ ಸಂದರ್ಭದಲ್ಲಿ 1ನೇ ಏಪ್ರಿಲ್ ತಾರೀಖಿನಂದು ಅಂದರೆ 31ನೇ ಮಾರ್ಚ್‌ರ ರಾತ್ರಿ ಒಂದು ಘಟನೆಯಾಯಿತು. ಅಲ್ಲಿ ಆ ಘಟನೆಯಾದಂತಹ ಸಂದರ್ಭದಲ್ಲಿ 2ನೇ ತಾರೀಖು ಮೈಸೂರಿನ ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳ ಸಭೆಯೊಂದನ್ನು ನಡೆಸಿದರು. ಅವರು ಅಧಿಕಾರಿಗಳ ಸಭೆಯನ್ನು ನಡೆಸಿ, ಆ ಕೋಮು ಗಲಭೆಗೆ ಕಾರಣಕರ್ತರಾದವರಿಗೆ ನಾನು ಶಿಕ್ಷೆಯನ್ನು ಕೊಡಿಸುತ್ತೇನೆ, ಈಗ ಚುನಾವಣೆ ಇದೆ, ಲೋಕಸಭಾ ಚುನಾವಣೆ ಕಳೆದ ನಂತರ ನಾನು ನ್ಯಾಯಾಧೀಶರಿಂದ ತನಿಖೆಯನ್ನು ಮಾಡಿಸುತ್ತೇನೆ ಎನ್ನತಕ್ಕ ಮಾತನ್ನು ಮಾನ್ಯ ಉಸ್ತುವಾರಿ ಸಚಿವರು ಅಲ್ಲಿ ಹೇಳುತ್ತಾರೆ. ಬಹುಶ: ಅವತ್ತೇ, 2ನೇ ತಾರೀಖೇ ಉಸ್ತುವಾರಿ ಸಚಿವರು ಎಲ್ಲಾ ಪಕ್ಷಗಳ ರಾಜಕೀಯ ಮುಖಂಡರುಗಳನ್ನು, ಧಾರ್ಮಿಕ ಮುಖಂಡರುಗಳನ್ನು ಕರೆಸಿ, ಕಾನೂನು ಈ ರೀತಿ ಹೇಳುತ್ತದೆ, ಕಾನೂನಿನ ಪ್ರಕಾರ ನಾವು ರಕ್ಷಣೆಯನ್ನು ಕೊಡಬೇಕು, ಕಾನೂನಿನ ಪ್ರಕಾರವಾಗಿ ನಾವು ಕೆಲಸವನ್ನು ಮಾಡಬೇಕೆಂದು ಎಲ್ಲರ ಜೊತೆಯಲ್ಲಿ ಮಾತುಕತೆ ನಡೆಸಿ, ಏನಾದರೂ ಕೋಮು ಗಲಭೆಗೆ ಅಥವಾ ಬೇರೆ ಯಾವುದೋ ಕಾರಣಕ್ಕೆ ಗಲಭೆಯನ್ನು ಸೃಷ್ಟಿ ಮಾಡಿದರೆ, ಸಂಬಂಧಪಟ್ಟವರ ಮೇಲೆ ನಾವೆಲ್ಲಾ ಸೇರಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಅವತ್ತು ಉಸ್ತುವಾರಿ ಸಚಿವರು ಹೇಳಿದ್ದರೆ, ಬಹುಶ: ಈ ಘಟನೆ ಆಗುತ್ತಿರಲಿಲ್ಲವೆಂದು ನನ್ನ ಭಾವನೆ. ಅವರು ಚುನಾವಣೆಯಾದ ನಂತರ ನಾನು ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುತ್ತೇನೆ ಎಂದಿದ್ದರು. ಚುನಾವಣೆ ಮುಗಿಯಿತು. ಪಾಪ! ಅವರು ಅಮೆರಿಕಾ ಪ್ರವಾಸ ಕೈಗೊಂಡರು. ಇದನ್ನು ಬಗೆಹರಿಸಲು ಅವರಿಗೆ ಪುರಸೊತ್ತು ಇರಲಿಲ್ಲ ಮತ್ತು ಆಸಕ್ತಿಯೂ ಸಹ ಇರಲಿಲ್ಲ. ಅಮೆರಿಕಾ ಪ್ರವಾಸಕ್ಕೆ ಅವರು ಹೊದರು. ಇಂತಹ ಘಟನೆಗಳು ಮರುಕಳಿಸುತ್ತವೆ, ಅದೊಂದು ಸೂಕ್ಷ್ಮವಾದಂತಹ ಪ್ರದೇಶ, ಆದುದರಿಂದ ನಾನು ಆದಷ್ಟು ಬೇಗನೆ ಇದನ್ನು ಇತ್ಯರ್ಥ ಪಡಿಸಬೇಕೆಂಬ ಇಚ್ಛಾಶಕ್ತಿ ಸನ್ಮಾನ್ಯ ಉಸ್ತುವಾರಿ ಸಚಿವರಿಗೆ ಇರಲಿಲ್ಲ. ಬಹುಶ: ಚುನಾವಣೆಯಾದ ನಂತರವೇ ಈ ಕೆಲಸ ಮಾಡಿದ್ದರೆ, ಈ ಘಟನೆ ಸಂಭವಿಸುತ್ತಿರಲಿಲ್ಲ. ಜಿಲ್ಲಾಡಳಿತ ಆ ಪ್ಲಾನ್ ಅನ್ನು ಪುನರ್ ಪರಿಶೀಲನೆ ಮಾಡಿ, ಕೆಲವು ಮಾರ್ಪಾಟಿನಲ್ಲಿ ಆ ಬಿಲ್ಡಿಂಗ್ ಅನ್ನು ಕಟ್ಟಬೇಕೆಂದು ಮತ್ತೊಮ್ಮೆ ಅವರಿಗೆ ಅವಕಾಶವನ್ನು ಮಾಡಿಕೊಟ್ಟರು. ತದನಂತರ ಕೆಲವು ಕಿಡಿಗೇಡಿಗಳು, ಗಲಭೆಗಳನ್ನೇ ಮಾಡಬೇಕೆಂಬ ತೀರ್ಮಾನವನ್ನು ಮಾಡಿಕೊಂಡಿರತಕ್ಕಂಥ ಗುಂಪುಗಳು ಕೆಲವು ಇರುತ್ತವೆ, ಅವು ಎಲ್ಲಾ ಕಡೆಗಳಲ್ಲಿಯೂ ಇರುತ್ತವೆ, ಆ ಗುಂಪು ಯಾವುವು ಎಂಬುದು ಪೊಲೀಸ್‌ನವರಿಗೂ ಸಹ ಗೊತ್ತಿರುತ್ತದೆ, ಕೆಲವು ಕಿಡಿಗೇಡಿಗಳು ಅವರಿಗೆ ಅವಕಾಶವನ್ನು ಮಾಡಿಕೊಡಲಿಲ್ಲ

ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ, ಹಂದಿ ಮಾಂಸದ ತುಂಡುಗಳನ್ನು, ಏನು ಒಂದು ಕೋಮಿನವರಿಗೆ ಅದರ ಬಗ್ಗೆ ನಿಷೇಧವಿದೆ, ಅವರನ್ನು ಕೆಣಕಬೇಕೆಂದು, ಹಂದಿ ಮಾಂಸದ ತುಂಡುಗಳನ್ನು ಆ ಜಾಗದಲ್ಲಿ ಹಾಕುವುದರ ಮುಖಾಂತರ ಮತ್ತೊಮ್ಮೆ ಈ ಕೋಮು ಗಲಭೆಗೆ ಕುಮ್ಮಕ್ಕು ಕೊಡತಕ್ಕಂಥ ಕೆಲಸವನ್ನು ಮಾಡುತ್ತಾರೆ. ಅದಾದ ನಂತರದ ಘಟನೆಗಳಲ್ಲಿ ಯಾವ ರೀತಿ ಅಮಾಯಕರ ಬಲಿಪಶುವಾಯಿತು ಎಂಬುದರ ಬಗ್ಗೆ ಸನ್ಮಾನ್ಯ ನಾಯಕರು ಹೇಳಿದ್ದಾರೆ. ಈ ಅಮಾಯಕರು ಸತ್ತಂತಹ ಸಂದರ್ಭದಲ್ಲಿ ಸನ್ಮಾನ್ಯ ಗೃಹ ಸಚಿವರು ಮೈಸೂರಿಗೆ ಭೇಟಿ ಕೊಡುತ್ತಾರೆ ಒಂದು ಕಡೆ ಬಿ.ಜೆ.ಪಿ.ಯ ಯುವ ಮೋರ್ಚಾ ಅಧ್ಯಕ್ಷರ ಮೇಲೆ ಹಲ್ಲೆಯಾಗುತ್ತದೆ. ಬಹುಶ: ನಾನು ವಿರೋಧ ಪಕ್ಷದ ನಾಯಕರ ನಿಲುವನ್ನು ಮೆಚ್ಚುತ್ತೇನೆ. ಏಕೆಂದರೆ, ಅವರು ಅಲ್ಲಿಗೆ ಭೇಟಿ ಕೊಡುತ್ತಾರೆ. ಅವರು ಅಲ್ಲಿಗೆ ಭೇಟಿ ಕೊಟ್ಟು ಸಂದೇಶವೊಂದನ್ನು ಕೊಡುತ್ತಾರೆ. ಯಾರೇ ತಪ್ಪು ಮಾಡಿರಲಿ, ಅವರಿಗೆ ಶಿಕ್ಷೆಯಾಗಬೇಕು ಎಂಬ ಸಂದೇಶವನ್ನು ಅವರು ಕೊಡುತ್ತಾರೆ. ಆದರೆ ಸನ್ಮಾನ್ಯ ಗೃಹ ಸಚಿವರು ಬರೀ ಬಿ.ಜೆ.ಪಿ. ಯುವ ಮೋರ್ಚಾ ಅಧ್ಯಕ್ಷರಾಗಿದ್ದ ಗಿರಿಧರ್, ಯಾರು ಹಲ್ಲೆಗೆ ಒಳಗಾಗಿದ್ದರೋ, ಅಲ್ಲಿಗೆ ಮಾತ್ರ ಭೇಟಿ ಕೊಡುತ್ತಾರೆಯೇ: ವಿನ: ಅಮಾಯಕರು ಸತ್ತಂತಹ ಜಾಗಗಳಿಗೆ ತೆರಳಿ, ಅವರ ಮನೆಗಳಿಗೆ ತೆರಳಿ ಅವರಿಗೆ ಸಾಂತ್ವನ ಹೇಳಿದರು ಎಂಬುದನ್ನು ನಾನು ಮಾಧ್ಯಮಗಳಲ್ಲಿ ಓದಿಲ್ಲ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಬಹುಶ: ಅವರು ಅಲ್ಲಿಗೆ ತೆರಳಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ.

ಡಾ : ವಿ.ಎಸ್.ಆಚಾರ್ಯ :– ಮಾನ್ಯ ಅಧ್ಯಕ್ಷರೆ, ನಾ॰ ಮೂರನೇ ದಿವಸ ಅಲ್ಲಿಗೆ ಹೋಗಿದ್ದೆ. ಮಾನ್ಯ ಬಾಲಕೃಷ್ಣರವರು ಹೇಳಿದ ಹಾಗೆ, ನನ್ನ ಉದ್ದೇಶವೇ ಯಾರ್ಯಾರು ಗಾಯಾಳುಗಳಿದ್ದರು, ಅವರನ್ನು ಆಸ್ಪತ್ರೆಗಳಿಗೆ ಹೋಗಿ ನೋಡುವಂತಾದ್ದು ಆಗಿತ್ತು. ಎಲ್ಲಾ ಎಂಟು ಗಾಯಾಳುಗಳನ್ನೂ ನಾಲ್ಕು ಆಸ್ಪತ್ರೆಗಳಿಗೆ ಹೋಗಿ ನಾನು ಭೇಟಿಯಾಗಿದ್ದೇನೆ. ಪ್ರತ್ಯೇಕ ಪ್ರತ್ಯೇಕವಾಗಿ ಎಲ್ಲಾ ಸಮಾಜದ ಪ್ರಮುಖರನ್ನೂ ಸಹ ಭೇಟಿಯಾಗಿದ್ದೇನೆ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಸಹಾ ಮಾತನಾಡಿದ್ದೇನೆ. ಅಲ್ಲಿಯ ಪರಿಸ್ಥಿತಿಯನ್ನು ಎಷ್ಟು ವಿವೇಚನೆಯಿಂದ ನೋಡಬಹುದೋ, ಅದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಏಕೆಂದರೆ, ಕೆಲವು ಭಾಗಗಳಲ್ಲಿ ಇನ್ನೂ ಪ್ರಕ್ಷುಬ್ಧ ಪರಿಸ್ಥಿತಿ ಇದ್ದಿರಬಹುದಾದ್ದರಿಂದ ನಾನು ಅಲ್ಲಿಗೆ ಹೋಗುವಂತಾದ್ದು ಸೂಕ್ತವಲ್ಲ ಎನ್ನುವಂತಾದ್ದು ಇದ್ದಿದ್ದರಿಂದ, ನನ್ನ ಇತಿಮಿತಿಯೊಳಗೆ ಏನೇನು ಮಾಡಬಹುದೋ, ಅದನ್ನೆಲ್ಲಾ ನಾನು ನೋಡಿಕೊಂಡು ಬಂದಿದ್ದೇನೆ. ಸ್ವತ: ಗಿರಿಧರ್ ಅನ್ನೂ ಸಹ ನೋಡಿದ್ದೇನೆ ಮತ್ತು ಅದೇ ದಿವಸ ಪೆಟ್ಟಾದಂತಹ ವಾಜೀದ್‌ನನ್ನೂ ಸಹ ಆಸ್ಪತ್ರೆಗೆ ನಾನು ಹೋಗಿ ನೋಡಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ನಾನು ಏಕೆ ಈ ಮಾತನ್ನು ಹೇಳತ್ತೇನೆಂದರೆ, ಅಲ್ಪಸಂಖ್ಯಾತರ ಕೋಮಿನ ಏನು ಯುವಕರು ಸತ್ತಿದ್ದಾರೆ, ಬಹುಶ: ಅಲ್ಲಿಗೆ ಭೇಟಿ

ಕೊಟ್ಟಿದ್ದರೆ ಚೆನ್ನಾಗಿತ್ತು. ಈ ರಾಜ್ಯವನ್ನು ಎಲ್ಲಾ ವಿಚಾರದಲ್ಲೂ ನಿಯಂತ್ರಿಸತಕ್ಕಂಥ ಒಬ್ಬ ಗೃಹ ಮಂತ್ರಿಗಳು, ಪೊಲೀಸ್ ಅಧಿಕಾರಿಗಳು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೊಗಲಿಕ್ಕಾಗಲಿಲ್ಲ, ಅಲ್ಲಿ ವಾತಾವರಣ ಸರಿಯಿರಲಿಲ್ಲ ಎನ್ನುವುದನ್ನು ಹೇಳಿದರೆ, ಬಹುಶ: ನಾನು ಅದಕ್ಕೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಆದರೆ ಅವರು ಅಲ್ಲಿಗೆ ಭೇಟಿ ಕೊಟ್ಟಿದ್ದರೆ ಎಲ್ಲೋ ಒಂದು ಕಡೆ ಭಾವನೆ ಬರುತ್ತಿತ್ತು, ಹೌದು, ಗೃಹ ಮಂತ್ರಿಗಳು ನಮ್ಮ ಕಷ್ಟ ಸುಖಗಳನ್ನು ಕೇಳಿದ್ದಾರೆ, ಇವರು ಒಬ್ಬರ ಪರ ಇಲ್ಲ ಎನ್ನುವಂತಹ ಭಾವನೆ ಬಂದಿದ್ದರೆ, ಬಹುಶ: ಎಲ್ಲರಲ್ಲೂ ಕೂಡ ಶಾಂತಿಯ ವಾತಾವರಣವನ್ನು ತರತಕ್ಕಂಥ ಕೆಲಸ ಮಾಡಬಹುದಾಗಿತ್ತು. ಆದರೆ ಆ ಕೆಲಸ ಆಗಲಿಲ್ಲ. ತದನಂತರ ಸನ್ಮಾನ್ಯ ಮುಖ್ಯಮಂತ್ರಿಗಳು, 'ಮೈಸೂರಿನ ಗಲಭೆ ಷಡ್ಯಂತ್ರ: ನಿಷೇಧಾಜ್ಞೆ ಜಾರಿಯಲ್ಲಿದ್ದರು ಕೇರಳ, ಕೊಡಗು, ಮಂಗಳೂರು ಕಡೆಗಳಿಂದ ಕರ್ನಾಟಕ ಫೋರಂ ಆಫ್ ಡಿಗ್ನಿಟಿ ಕಾರ್ಯಕರ್ತರು ಮೈಸೂರಿಗೆ ಬಂದು ಪ್ರತಿಭಟಿಸಿದ್ದಾರೆ, ಅವರನ್ನು ಬಂಧಿಸುತ್ತೇವೆ, ಇದನ್ನು ನಿಷೇಧ ಮಾಡಬೇಕೆಂದು ಮಾನ್ಯ ಪ್ರಧಾನಿಗೆ ಪತ್ರ ಬರೆಯುತ್ತೇವೆ' ಎಂದು ಹೇಳಿದ್ದು ಪತ್ರಕರ್ತರುಗಳಲ್ಲಿ ವರದಿಯಾಗಿದೆ. ಸ್ವಾಮಿ, ಇವರೊಬ್ಬರೇನಾ ಬಂದಿದ್ದು? ನಿಮ್ಮ ಶ್ರೀರಾಮಸೇನೆ ಕಾರ್ಯಕರ್ತರು ಬಂದ್‌ಗೆ ಕರೆ ಕೊಟ್ಟರಲ್ಲಾ, 144 ಸೆಕ್ಷನ್ ಜಾರಿಯಲ್ಲಿದ್ದರೂ ಕೂಡ ಬಂದ್ ಮಾಡಿಸಿದರಲ್ಲಾ, ಆಗ ನಿಮ್ಮ ಪೊಲೀಸ್‌ನವರು ಏನು ಮಾಡುತ್ತಿದ್ದರು? ನಿಮ್ಮ ಹಿಂದೂ ಜಾಗರಣಾ ವೇದಿಕೆಯವರು ಬಂದು ಗಲಾಟೆ ಮಾಡುತ್ತಿದ್ದರಲ್ಲಾ, ಅವರು ಬಂದ್‌ನಲ್ಲಿ ಭಾಗವಹಿಸಿದರಲ್ಲಾ, ಅದನ್ನೇಕೆ ನೀವು ಪ್ರಧಾನಿಗೆ ಪತ್ರ ಬರೆದು ಅದಕ್ಕೆ ನಿರ್ಬಂಧ ಹೇರಬಾರದು? ಎಲ್ಲೋ ಒಂದು ಕಡೆ ನಿಮ್ಮ ಭಾವನೆ ಏನು ಎಂಬುದನ್ನು ಸಾರ್ವಜನಿಕವಾಗಿ ನೀವು ಗೊತ್ತುಪಡಿಸುವ ರೀತಿಯಲ್ಲಿ ಸಿ.ಎಂ. ಹೇಳಿಕೆ ಕೊಟ್ಟರು. ಈ ರಾಜ್ಯದ ಮುಖ್ಯಮಂತ್ರಿಯವರು, ಈ ರಾಜ್ಯದ ಎಲ್ಲಾ ಕೋಮಿನ ಹಿತವನ್ನು ಕಾಪಾಡತಕ್ಕಂಥ ಮುಖ್ಯಮಂತ್ರಿಗಳಾಗಬೇಕಿತ್ತು. ಬರೀ ಏನೋ ಅಲ್ಪಸಂಖ್ಯಾತ ಸಂಘಟನೆಗಳಿಂದ ಮಾತ್ರ ಇದಾಗುತ್ತಿದೆ ಎನ್ನತಕ್ಕಂಥ ಒಂದು ಭಾವನೆ ಬರತಕ್ಕ ಹೇಳಿಕೆಯನ್ನು ಕೊ[illegible], ಬಹುಶ: ಆ ಕೋಮಿನ ಜನಗಳಿಗೆ, ಈ ಮುಖ್ಯಮಂತ್ರಿಗಳ ಮೇಲೆ [illegible] ಯಾವ ರೀತಿಯಾಗಿ [illegible]ರುತ್ತದೆ? ದಯಮಾಡಿ ಮಾನ್ಯ ಮುಖ್ಯಮಂತ್ರಿಗ[illegible] ರಾಜ್ಯದಲ್ಲಿ ಇರತಕ್ಕಂಥ ಎಲ್ಲ[illegible] ಕೂಡ ನಮ್ಮವರು ಎನ್ನತಕ್ಕಂಥ ಭಾವನೆ[illegible] ಮಾಧ್ಯಮಗಳ ಮೂಲಕ ವ್ಯಕ್ತಪಡಿಸಿದಾಗ ಮಾತ್ರ ಇಂತಹ ಕೋಮು[illegible]ನ್ನು ಹತ್ತಿಕ್ಕಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಮನುಷ್ಯನಲ್ಲೂ ಕೂಡ [illegible]ವನ್ನು ಮೂಡುವ ರೀತಿಯಲ್ಲಿ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಬೇ[illegible] ನಾನು ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೆ[illegible]. ನಾನೂ ಕೂಡ judicial enquiryಗೆ ಒತ್ತಾಯ ಮಾಡುತ್ತೇನೆ. ಅದಕ್ಕೆ ಕಾರಣವಿದೆ. ನಾನು ಈ ಪೊಲೀಸ್‌ನವರ ಮೇಲೆ ದೂರುವುದಕ್ಕೆ ಹೋಗುವುದಿಲ್ಲ. ಪೊಲೀಸ್‌ನವರ ಕೈಯಲ್ಲಿ ಕೆಲಸ ಮಾಡಲಿಕ್ಕೆ

ರಾಜಕಾರಣಿಗಳು ಬಿಡುತ್ತಿಲ್ಲ. ಅದನ್ನು ನೇರವಾಗಿ ಎಲ್ಲೋ ಒಂದು ಕಡೆ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕಾದರೆ, ಅದರಲ್ಲೂ ಕೂಡ ಅಜಯ್‌ಕುಮಾರ್ ಸಿಂಗ್ ಅಂತಹ ಅಧಿಕಾರಿಗಳು, ಅವರು ಬಹುಶ: ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ, ಹಿಂದಿನ ಸರ್ಕಾರದಲ್ಲಿ ನಾವು ಅವರನ್ನು ಹತ್ತಿರದಿಂದ ನೋಡಿದ ರೀತಿಯಲ್ಲಿ ಹೇಳುವುದಾದರೆ, ಅವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ನಾನು ಒಂದು ಮಾತನ್ನು 'ಹಿಂದೂ' ಪತ್ರಿಕೆಯಲ್ಲಿ ಓದಿದ್ದೇನೆ. "People are attributing the violence to too much of the political meddling in police functioning". ನಾವೇ ರಾಜಕಾರಣಿಗಳೇ ಕಾರಣ. "There are instances where the police have been forced to release the culprits because of political pressure which has hit their morale" said a senior police officer.

ಅಧ್ಯಕ್ಷರೆ, ಹೀಗಿರುವಾಗ ಅವರಿಗೆ ಕೆಲಸ ಮಾಡುವುದಕ್ಕೆ ಯಾವ ರೀತಿ ಧೈರ್ಯ ಬರುತ್ತದೆ? ಗಲಭೆಗೆ ಕಾರಣಕರ್ತರಾದ ಇಬ್ಬರು ವ್ಯಕ್ತಿಗಳನ್ನು arrest ಮಾಡಿದರೆ ಒಂದು ಗುಂಪು ನೂರಾರು ಜನ ಬೀದಿಗಿಳಿದು ಅಧಿಕಾರಿಗಳ ಮೇಲೆ pressure ತೆಗೆದುಕೊಂಡು ಬಂದು ರಿಲೀಸ್ ಮಾಡಿಸಿಕೊಂಡು ಹೋಗುತ್ತಾರೆ. Culprits ರನ್ನು ಆರೆಸ್ಟ್ ಮಾಡಿದಂಥ ಪೊಲೀಸರು ಸಸ್‌ಪೆಂಡ್ ಆಗುತ್ತಾರೆ. ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಆ ಪೊಲೀಸ್‌ನವರು ನಾವು ಯಾವ ರೀತಿ ಕೆಲಸ ಮಾಡಬೇಕೆಂದು ಹೇಳುತ್ತಾರೆ. ನಮ್ಮ ಮೇಲಿನ ಅಧಿಕಾರಿಗಳು ಕೂಡ ನಮ್ಮ ರಕ್ಷಣೆಗೆ ಬರಲಿಲ್ಲ, ಯಾವ ರೀತಿ ನಾವು ಕೆಲಸ ಮಾಡಬೇಕೆಂದು ಮಾಧ್ಯಮಗಳಲ್ಲಿ ಹೇಳಿದ್ದಾರೆ. ಅದೇ ರೀತಿ ಅಧ್ಯಕ್ಷರೆ, "It is known that efforts to contain political pressure in transfers by Director-General and Inspector-General of police Mr.Ajay Kumar Singh failed. When he cannot withstand political pressure, imagine our plight" the police officer says. ಯಾವ ರೀತಿ ಪೊಲೀಸ್‌ನವರ ಮೇಲೆ ಸರ್ಕಾರದ ಒತ್ತಡ ಇದೆ ಎನ್ನತಕ್ಕಂಥದ್ದನ್ನು ಈ ಪತ್ರಿಕೆಯಲ್ಲಿ ಅಧಿಕಾರಿಗಳೇ ಹೇಳಿದ್ದಾರೆ. ಅದೇ ರೀತಿ ಅಧ್ಯಕ್ಷರೆ, "If the police were given a free hand to deal with the situation there would have been no need to summon the RAF." ಅವರಿಗೆ ಸರಿಯಾದ ರೀತಿಯಲ್ಲಿ ಅಂತಹ situation ಅನ್ನು ಡೀಲ್ ಮಾಡತಕ್ಕಂತಹ ಪರಿಸ್ಥಿತಿ ನಿರ್ಮಾಣ ಮಾಡಿ ರಾಜಕಾರಿಣಿಗಳು ಯಾರೂ ಕೂಡ interfere ಆಗದೇ ಹೋದರೆ, ನಮ್ಮ ಪೊಲೀಸರೇ ಅದನ್ನು ಹತ್ತಿಕ್ಕತಕ್ಕಂಥದ್ದಕ್ಕೆ ಅದನ್ನು ಎದುರಿಸುವುದಕ್ಕೆ ಸಮರ್ಥರಾಗಿದ್ದಾರೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇಂತಹ ಕೋಮು ಗಲಭೆಗಳನ್ನು ಹತ್ತಿಕ್ಕಬೇಕಾದರೆ

ಎಲ್ಲೋ ಒಂದು ಕಡೆ ಸರ್ಕಾರ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ಉದಾಹರಣೆಗೆ 1993–94ರಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದ ಗಲಾಟೆ ಸಂದರ್ಭದಲ್ಲಿ ಒಂದು ಕಡೆ ಆ ಈದ್ಗಾಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಬೇಕೆಂದು ಎಲ್ಲಾ ಹಿಂದೂ ಸಂಘಟನೆಗಳ ಅಭಿಪ್ರಾಯ. ಅಲ್ಲಿ ರಾಷ್ಟ್ರಧ್ವಜ ಹಾರಿಸಬಾರದು ಎಂದು ಸರ್ಕಾರದ ಅಭಿಪ್ರಾಯ. ಬಹುಶ: ಮೂರು–ನಾಲ್ಕು ವರ್ಷಗಳ ಕಾಲ ಗೋಲಿಬಾರ್ ಅಯಿತು, ಗಲಾಟೆಗಳಾದವು, ದೊಡ್ಡ ದೊಡ್ಡ ದುರಂತಗಳು ಸಂಭವಿಸಿದವು, ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗತಕ್ಕಂತಹ ಇಚ್ಛಾಶಕ್ತಿ ಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗತಕ್ಕಂತಹ ಇಚ್ಛಾಶಕ್ತಿ ಬೇಕು. 1994ರಲ್ಲಿ ಸನ್ಮಾನ್ಯ ದೇವೇಗವಡರು ಮುಖ್ಯ ಮಂತ್ರಿಗಳಾದರು. ಸನ್ಮಾನ್ಯ ಸಿಂಧ್ಯರವರು ಗೃಹ ಮಂತ್ರಿಗಳಾಗಿದ್ದರು, ಮಾನ್ಯ ಸಿ.ಎಂ. ಇಬ್ರಾಹಿಂ ರವರು ನಮ್ಮ ಪಕ್ಷದ ಅಧ್ಯಕ್ಷರಾಗಿದ್ದರು. ಹುಬ್ಬಳ್ಳಿಗೆ ಹೋಗಿ ಎಲ್ಲರನ್ನೂ ಕೂರಿಸಿಕೊಂಡು ಸಂಧಾನ ಮಾಡಿದರು. ಬಾವುಟವನ್ನು ಹಾರಿಸಿದರು ಗಲಾಟೆ ನಿಂತಿತು. ಈ ಓಟಿಗೋಸ್ಕರವಾಗಿ ಕಿತ್ತಾಡತಕ್ಕಂತಹ ವಾತಾವರಣ ನಿಂತಿತು. ಅದಕ್ಕಾಗಿ ಹೇಳುವುದು ಎಲ್ಲೋ ಒಂದು ಕಡೆ ಅದನ್ನು ನಿಲ್ಲಿಸಬೇಕು, ಅದನ್ನು ಹತ್ತಿಕ್ಕಬೇಕೆಂಬ ಉದ್ದೇಶ ಇದ್ದರೆ ಖಂಡಿತ ಇದನ್ನು ನಿಲ್ಲಿಸಬಹುದು. ರಾಜಕೀಯಕ್ಕೋಸ್ಕರ ನಮ್ಮ ಓಟಿನ ಆಸೆಗೋಸ್ಕರ ನಾವೇ ಹಿಂದಗಡೆ ನಿಂತು ಒಬ್ಬರನ್ನೊಬ್ಬರು ಹೊಡೆದಾಡುವುದಕ್ಕೆ ಬಿಟ್ಟರೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಇದಕ್ಕೆ ನೇರ ಹೊಣೆ ಮೈಸೂರಿನ ಸನ್ಮಾನ್ಯ ಉಸ್ತುವಾರಿ ಸಚಿವರು. ಅವರು ಮನಸ್ಸು ಮಾಡಿದ್ದರೆ ಇದನ್ನು ನಿಲ್ಲಿಸಬಹುದಾಗಿತ್ತು. ಪ್ರಾರಂಭದಲ್ಲಿಯೇ ಅದನ್ನು ಹತ್ತಿಕ್ಕಬಹುದಾಗಿತ್ತು. ಆ ಕೆಲಸವನ್ನು ಮಾಡುವುದಕ್ಕೆ ಅವರ ಕೈಯಲ್ಲಿ ಆಗಲಿಲ್ಲ.ಈ ಗಲಾಟೆ ಆದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಧಾರ್ಮಿಕ ಮುಖಂಡರನ್ನು ಹಾಗೂ ವಿರೋಧ ಪಕ್ಷದವರನ್ನು ಕರೆದು ಕಾನೂನು ಈ ರೀತಿ ಇದೆ ನಾವು ಅದಕ್ಕೆ ಅವಕಾಶ ಕೊಡಬೇಕು, ಕಾನೂನು ವಿರುದ್ಧವಾಗಿ ಹೋದರೆ ಅವರನ್ನು ಶಿಕ್ಷೆಗೆ ಗುರಿಪಡಿಸುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ ಬಹುಶ: ಇದು ಮುಂದುವರೆಯುತ್ತಿರಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಪೋಲೀಸ್‌ನವರಿಗೂ ಕೂಡ ರಾಜಕಾರಣಿಗಳು ಎಲ್ಲೋ ಒಂದು ಕಡೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ಪೋಲೀಸ್‌ನವರ ಮೇಲೆ ಕೂಡ Pressure ಇದೆ? ಆದ್ದರಿಂದ ನಮ್ಮ ಪೋಲೀಸ್‌ನವರೇ ಸಮರ್ಥರಿದ್ದಾರೆ ನಮ್ಮ ಪೋಲೀಸ್‌ನವರೇ ಕ್ರಮ ತೆಗೆದುಕೊಳ್ಳುತ್ತಾರೆಂದು ಏನು ಸನ್ಮಾನ್ಯ ಗೃಹ ಮಂತ್ರಿಗಳು ಹೇಳಿದ್ದಾರೆ ಪೋಲೀಸ್‌ನವರು ಸಮರ್ಥರಿದ್ದಾರೆ ಆದರೆ ನಾವು ಅಧಿಕಾರದಲ್ಲಿರತಕ್ಕಂತಹವರು ಕ್ರಮ ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಮಾನ್ಯ ಉಸ್ತುವಾರಿ ಸಚಿವರು ನ್ಯಾಯಾಂಗ ತನಿಖೆಗೆ

ಒಪ್ಪಿಸುತ್ತೇನೆಂದು ಹೇಳಿದ್ದಾರೆ ಅದೇ ರೀತಿ ಇದನ್ನು ನಿಷ್ಪಕ್ಷಪಾತವಾಗಿ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿ ಕೊಡಬೇಕೆಂದು ಹೇಳಿ ನಾನು ಒತ್ತಾಯಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸಪ್ರಸಾದ್:(ನಂಜನಗೂಡು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮೈಸೂರು ನಗರದಲ್ಲಿ ನಡೆದಿರತಕ್ಕಂತಹ ಕೋಮು ಗಲಭೆಯ ಹಿನ್ನೆಲೆಯಲ್ಲಿ ಚರ್ಚೆ ಪ್ರಾರಂಭವಾಗಿದೆ. ನಮ್ಮ ಶಾಸಕಾ ೧ ಪಕ್ಷದ ನಾಯಕರು, ಉಪನಾಯಕರು ಹಾಗೂ ಸಹೋದ್ಯೋಗಿ ಬಾಲಕೃಷ್ಣರವರು ಈಗಾಗಲೇ ಬಹಳ ಸುಧೀರ್ಘವಾದ ಎಳೆ ಎಳೆಯಾಗಿ ಬಿಡಿಸಿ ಹೇಳಿದ್ದಾರೆ. ನಾನು ಅದೆಲ್ಲವೂ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ.ಆದರೆ ಒಂದು ಮಾತನ್ನು ನಾನು ಹೇಳುತ್ತೇನೆ. ಸ್ವಾತಂತ್ರ್ಯ ಬಂದು 60 ವರ್ಷಗಳಾಗಿವೆ ನಮ್ಮದೇ ಆದ ಸಂವಿಧಾನ ಬಂದು 59 ವರ್ಷಗಳಾಗಿವೆ. ಆದರೆ ಒಂದಲ್ಲ ಒಂದು ರೀತಿಯಲ್ಲಿ ದಿನನಿತ್ಯದ ಸುದ್ದಿಯಲ್ಲರತಕ್ಕಂಥದ್ದು ಕೋಮು ಗಲಭೆಗಳು ಹಾಗೂ ಜಾತೀಯ ಸಂಘರ್ಷ. ಇದರ ಬಗ್ಗೆ ಭಾರತದ ಸಂಸತ್ತಿನಲ್ಲಿ ಹಾಗೂ ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಇದರ ಬಗ್ಗೆ ಚರ್ಚೆಗಳಾಗುತ್ತಿರುವುದು ನಾವು ನೋಡುತ್ತಿದ್ದೇವೆ. ಬಹುಶ: ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ದೇಶದ ಜನಜೀವನ ವ್ಯವಸ್ಥೆ ರೂಪುರೇಷೆಗಳು ಹೇಗಿರಬೇಕೆಂದು ಆಳವಾಗಿ ಚಿಂತನೆ ಮಾಡಿ ನಮ್ಮ ಸಂವಿಧಾನವನ್ನು ಕೊಟ್ಟಿರತಕ್ಕಂಥದ್ದು. ಭಾರತ ದೇಶದ ಸಂವಿಧಾನ ಎಂದರೆ ಬಹಳ ಶ್ರೇಷ್ಠವಾದ ಸಂವಿಧಾನ. Indian Constitution is the best written Constitution in the World ಎನ್ನತಕ್ಕಂತಹ ಮಾತನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಆದರೆ ಅಂತಹ ಅತ್ಯುತ್ತಮವಾದ ಸಂವಿಧಾನ ಇವತ್ತು ಇದ್ದೂ ಕೂಡ ನಮ್ಮ ದೇಶಕ್ಕೆ ನಮ್ಮ ಸಮಾಜಕ್ಕೆ ಇದು ಒಂದು ರೀತಿಯ ಕಳಂಕ ಹಾಗೂ ಶಾಪ ಆಗಿರತಕ್ಕಂಥದ್ದು ನಾವು ಕಾಣುತ್ತಿರುವುದನ್ನು ಬಹಳ ಗಂಭೀರವಾದ ಯೋಚನೆ ಮಾಡಬೇಕಾಗಿದೆ. ನಮ್ಮ ಸಂವಿದಾನದ ಆಶಯಗಳು ಇರತಕ್ಕಂಥದ್ದು ಕೂಡ ಬಹಳ ಮುಖ್ಯವಾಗಿ ಒತ್ತಿ ಹೇಳಿತರಕ್ಕಂಥದ್ದು ಜಾತ್ಯಾತೀಯತೆಯ ಬಗ್ಗೆ, broad based secularism ಬಗ್ಗೆ ನಾವು ಹೇಳುತ್ತೇವೆ. ಸಮಾನತೆ (Equality) ಬಗ್ಗೆ ಹೇಳುತ್ತೇವೆ. Equality ಜೊತೆಗೆ ನಮಗೆ ಬೇಕಾಗಿರತಕ್ಕಂಥದ್ದು Liberty ಮತ್ತು Fraternity ಎಂದು ನಾವು ಹೇಳಿದ್ದೇವೆ, ಭಾರತ ದೇಶದಲ್ಲಿ ನಾನು ಏಕೆ best written constitution ಎಂದು ಹೇಳಿದೆ ಎಂದರೆ, ಭಾರತ ದೇಶದ Preamble ನಲ್ಲಿರತಕ್ಕಂಥದ್ದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. If we had sincerely implemented the preamble of the Indian Constitution, India would have been heaven ಎನ್ನತಕ್ಕಂತಹ ಮಾತನ್ನು ಹೇಳುತ್ತಿರುತ್ತೇವೆ. ಬಹುಶ: ಅಲ್ಲಿ ನಾವು ಎಡವುತ್ತಿರತಕ್ಕಂಥದ್ದು. Democratic Institutionsನಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳು ಏನಿವೆ, ಪಾರ್ಲಿಮೆಂಟ್ ಅಥವಾ ಅಸೆಂಬ್ಲಿಯಲ್ಲಿ ಚರ್ಚೆ ಮಾಡುತ್ತೇವೆ, ಅಲಿಗೇಷನ್ಸ್ ಮಾಡುತ್ತೇವೆ, ಕೌಂಟರ್

ಅಲಿಗೇಷನ್ಸ್ ಆಗುತ್ತಿರತಕ್ಕಂಥದ್ದು ನಾವು ನೋಡಿದ್ದೇವೆ. ಒಂದು ತರಹ ಕೆಸರೆರಚಾಡತಕ್ಕಂತಹ ರೀತಿಯಲ್ಲಿ ಇದ್ದೇವೆ. ಇವತ್ತು ನಾವು ಆಳವಾಗಿ ಯೋಚನೆ ಮಾಡಬೇಕಾಗಿದೆ. ನಾವು ಜಾಗತಿಕ ಪ್ರಪಂಚದಲ್ಲಿರತಕ್ಕಂತಹವರು, competitive world ನಲ್ಲಿರತಕ್ಕಂತಹವರು. ನಾನು ಅನೇಕ ಸಾರಿ ಪಾರ್ಲಿಮೆಂಟಿನಲ್ಲಿ ಮಾತನಾಡತಕ್ಕಂತಹ ಸಂದರ್ಭದಲ್ಲಿ ಕೂಡ ನಾನು ಇದನ್ನು ನೆನೆಸಿಕೊಳ್ಳುತ್ತಿರುತ್ತೇನೆ. India is a very resourceful country. ಭಾರತ ಬಹಳ ಸಂಪದ್ಭರಿತವಾದ ದೇಶ. ಇಲ್ಲಿರುವಷ್ಟು human resources, ಮಾನವೀಯ ಸಂಪನ್ಮೂಲಗಳು, natural resources, ನೈಸರ್ಗಿಕ ಸಂಪನ್ಮೂಲಗಳು ಇವೆರಡನ್ನೂ ಬಳಸಿಕೊಳ್ಳತಕ್ಕಂತಹ man power 100 ಕೋಟಿಗಿಂತ ಹೆಚ್ಚಿಗೆ ಇರತಕ್ಕಂಥದ್ದು ಬಹುಶ: ಈ ಜಗತ್ತಿನಲ್ಲಿ ಬಹಳ ವಿರಳ. ಇಷ್ಟಿದ್ದರೂ ಕೂಡ ಭಾರತ ಅಭಿವೃದ್ಧಿ ಹೊಂದಿದಂತಹ ರಾಷ್ಟ್ರ ಆಗಲಿಲ್ಲ. Still India is not a developing Country ಎನ್ನತಕ್ಕಂಥದ್ದು ನಮ್ಮ ಕೊರಗು. ಏಕೆ ಎಂದು ಆಲೋಚನೆ ಮಾಡತಕ್ಕಂತಹ ಸಮಯದಲ್ಲಿ ಬಹುಶ: ನಮ್ಮಲ್ಲಿ ಈ ರೀತಿಯಾದ ಒಗ್ಗಟ್ಟಿನ ಕೊರತೆಯಿಂದ ಇದು ಸಾಧ್ಯವಾಗುತ್ತಿಲ್ಲ. ಇವತ್ತಿಗೂ ಕೂಡ ನಮ್ಮನ್ನು ಕಿತ್ತು ತಿನ್ನತಕ್ಕಂಥದ್ದು ಈ ಕೋಮು ಗಲಭೆಗಳು ಜಾತೀಯ ಸಂಘರ್ಷ. ಕೋಮು ಗಲಭೆ ಎಂದು ನಾನು ಒಂದು ಕಡೆ ಮಾತನಾಡುತ್ತೇನೆ ಎನ್ನತಕ್ಕಂಥದ್ದು ಅಲ್ಲ. ಕೋಮು ಗಲಭೆ ಹಿನ್ನೆಲೆಯಲ್ಲಿ religious fundamentalist ಎನ್ನತಕ್ಕಂಥದ್ದು ಧಾರ್ಮಿಕ ಮತಾಂಧರಿಂದ ಇದು ಆಗತಕ್ಕಂಥದ್ದು, ಮತಾಂಧತೆ ಇವತ್ತು ತಾಂಡವವಾಡುತ್ತಿದೆ. ಎಲ್ಲಾದರೂ ಕೋಮುಗಲಭೆ ಆಗಿದೆ ಎಂದರೆ, ನಾವು ಸುಮ್ಮನೆ ಕುರುಡಾಗಿ ಒಬ್ಬರನ್ನು ಬ್ಲೇಮ್ ಮಾಡುವುದು ಅಲ್ಲ. ಯಾರಾದರೂ ಒಂದು ತಪ್ಪು ಇರುತ್ತದೆ. ಯವುದೋ ಒಂದು ಧರ್ಮದ ತಪ್ಪು ಇರುತ್ತದೆ. ರಿಲೀಜಿಯಸ್ ಸೆಂಟಿಮೆಂಟ್ಸ್ ಗೆ ಸ್ವಲ್ಪ ಧಕ್ಕೆ ಆದರೂ ಕೂಡ flare up ಆಗುತ್ತಾರೆ. ಅದು ಬಹಳ ಬೇಗ ಅದರಿಂದ ಅವರಿಗೆ ಪ್ರಚೋದನೆ ಸಿಗುತ್ತದೆ. ನಾವೂಕೂಡ ಅದೇ ರೀತಿ ಇದ್ದೇವೆ. ಸಂವಿಧಾನ ಬರೆದವರು ಸವಿಸ್ತಾರವಾಗಿ ಹೇಳುತ್ತಾರೆ. ಮನುಷ್ಯರಲ್ಲಿ ನಾವು ಯೋಚನೆ ಮಾಡುವ ಶಕ್ತಿ ತುಂಬ ಇದೆ. ಧರ್ಮದ ಅವಶ್ಯಕತೆ ಇದೆ. ಧರ್ಮವನ್ನು ವೈಭವೀಕರಣವನ್ನು ಮಾಡುತ್ತದ್ದೇವೆ ಹೊರತು ಧರ್ಮವನ್ನು ಭವಿಷ್ಯದ ಒಳಿತಿಗಾಗಿ ಉಪಯೋಗಿಸುತ್ತಿಲ್ಲ. ಇದು ಈ ದೇಶದ ಕೊರಗು. ಯಾವ ಧರ್ಮವನ್ನು ಮನುಷ್ಯನ ಒಳಿತಿಗಾಗಿ ನಾವು ಉಪಯೋಗಿಸಿಕೊಳ್ಳಬೇಕಾಗಿತ್ತು ಅಲ್ಲಿ ಎಡವಿದ್ದೇವೆ. ಧಮ್ದ glorify, ವೈಭವೀಕರಣ ಮಾಡುತ್ತಿದ್ದೇವೆ. ಕೋಮು ಗಲಭೆಗಳು ಎಲ್ಲಾದರೂ ನಡೆದಾಗ ಯಾರದಾದರೂ ಅಚಾತುರ್ಯದಿಂದ ನಡೆದಿರುವುದು ಇವತ್ತು ಕಾಣುತ್ತಿದ್ದೇವೆ. ಜಾತೀಯ ಸಂಘರ್ಷ ನಮ್ಮದಲ್ಲದ ತಪ್ಪಿನಿಂದಾಗಿ ಮೇಲು ಕೀಳು, ಇವರು ಸ್ಪೃಷ್ಯರು – ಅಸ್ಪೃಷ್ಯರು ಎನ್ನತಕ್ಕಂತಹ ರೀತಿಯಲ್ಲಿ ಇವತ್ತೂ ಕೂಡ ಕಾಣುತ್ತಿದ್ದೇವೆ. ಅಲ್ಲಿ ಒಂದು ಕಡೆ ತಪ್ಪು ಇರತಕ್ಕಂಥದ್ದು. ಶೋಷಿತರ ತಪ್ಪು ಇಲ್ಲ

ಎನ್ನತಕ್ಕಂಥದ್ದು ನಮಗೆ ಅರ್ಥವಾಗುತ್ತದೆ How it will kill us ಎಂದು ನಮಗೆ ಅರ್ಥವಾಗಬೇಕು. ಕೋಮು ಗಲಭೆ ನಡೆಯುತ್ತಿರತಕ್ಕಂತಹ ಹಿನ್ನೆಲೆಯಲ್ಲಿ ನಾವು ಯೋಚನೆ ಮಾಡಿದಂತಹ ಸಂದರ್ಭದಲ್ಲಿ ಮೈಸೂರಿನ ಘಟನೆ ಹಿನ್ನೆಲೆ ಬಗ್ಗೆ ನಾನು ಹೇಳುವುದಾದರೆ ನಾನಾಗಲಿ ಅಥವಾ ಸಿದ್ದರಾಮಯ್ಯನವರಾಗಲಿ, ನಾವು ಹುಟ್ಟಿದ್ದು, ಬೆಳೆದಿದ್ದು ಮತ್ತು ನಮ್ಮ ಶಿಕ್ಷಣದ ಜೊತೆ ಜೊತೆಗೆ ನಾವು ಬೆಳೆದು ಬಂದ ಪ್ರದೇಶವೇ ಮೈಸೂರು ನಗರವಾಗಿದೆ. ಬಹುಶ: ಇವತ್ತು ಈ ಘಟನೆಗೆ ಹಿನ್ನೆಲೆ ಕ್ಯಾತಮಾರನಹಳ್ಳಿಯಾಗಿದೆ. ಕ್ಯಾತಮಾರನಹಳ್ಳಿ ಹಿಂದೆ ಹಳ್ಳಿಯಾಗಿಯೇ ಇತ್ತು. ಇದು ಮೈಸೂರು ನಗರದಲ್ಲಿದ್ದರೂ ಕೂಡ ಮೈಸೂರು ನಗರದ ಹೊರ ಭಾಗದಲ್ಲಿದ್ದಂಥದ್ದು. ಈ ರೀತಿ ಇದು ನಗರದ ಹೊರಭಾಗದಲ್ಲಿದ್ದರೂ ಕೂಡ ಅಲ್ಲಿಂದ ಆಯ್ಕೆಯಾಗುವ ಸದಸ್ಯರಿದ್ದರು.ಈ ಕ್ಯಾತಮಾರನಹಳ್ಳಿ ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿರತಕ್ಕಂಥ ಒಂದು ಹಳ್ಳಿ ಅಥವಾ ಬಡಾವಣೆಯಾಗಿದೆ. ಈಗ ಅದು ನಾಗರಿಕತೆ ಬೆಳೆಯುತ್ತಾ, ಬಡಾವಣೆಗಳು ಸುತ್ತಮುತ್ತ ಬೆಳೆಯುತ್ತಿರತಕ್ಕಂಥ ಸಂದರ್ಭದಲ್ಲಿ ಮಧ್ಯೆ ಅದು ಇದ್ದು ಇದರ ಸುತ್ತಮುತ್ತ ಅನೇಕ ಬಡಾವಣೆಗಳು ಬಂದಿದೆ. ಆದುದರಿಂದ ಈಗ ಕ್ಯಾತಮಾರನಹಳ್ಳಿ ಒಂದು ಗ್ರಾಮ ಅಥವಾ ಬಡಾವಣೆಯೇ ಆಗಿರತಕ್ಕಂಥದ್ದಾಗಿದೆ. ಮೈಸೂರು ನಗರದ ಬಗ್ಗೆ ಬಹಳ ಹೆಮ್ಮೆಯಿಂದ ಹೇಳುತ್ತಿದ್ದೆವು. ಮೈಸೂರು ನಗರ ಬಹಳ ಅತ್ಯಂತ ಶಾಂತಿಪ್ರಿಯವಾದಂಥ ಸ್ಥಳ, ಮೈಸೂರು ನಗರ ಕರ್ನಾಟಕ ರಾಜ್ಯದ ಸಾಂಸ್ಕೃತಿಕ ರಾಜಧಾನಿಯಾಗಿದೆ, ಅದಕ್ಕೆ ನಮ್ಮದೇ ಆದಂಥ ಇತಿಹಾಸ, ಹಿರಿಮೆ – ಗರಿಮೆ ಗಳಿರತಕ್ಕಂಥದ್ದು ಎಂದು ನಾವೆಲ್ಲರೂ ಕೂಡ ಬಹಳ ಹೆಮ್ಮೆಯಿಂದ ಹೇಳುತ್ತಿದ್ದೆವು. ಯದುವಂಶದ ರಾಜರ ಆಡಳಿತ ಕಾಲದಿಂದಲೂ ಕೂಡ ಅಲ್ಲಿ ನಾವು ಜಾತ್ಯಾತೀತ ಗುಣಲಕ್ಷಣಗಳನ್ನು ಬೆಳೆಸಿಕೊಂಡು ಬಂದಿರತಕ್ಕಂಥದ್ದು ಮೈಸೂರು ನಗರವಾಗಿದೆ ಎಂದೂ ಕೂಡ ಹೇಳುತ್ತಿದ್ದೆವು. ಆ ಕಾಲದಲ್ಲಿ ದಿವಾನ್ ವಿಶ್ವೇಶ್ವರಯ್ಯನವರು ದಿವಾನರಾಗಲಿ ಅಥವಾ ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾಗಿರಲಿ, ಆ ಕಾಲದಲ್ಲಿ ಇವರುಗಳು ಉತ್ತಮ ಆಡಳಿತದ ಬಗ್ಗೆ ಗಮನವನ್ನು ಕೊಡುತ್ತಿದ್ದರು. ನಾವೆಲ್ಲರೂ ಕೂಡ ಒಂದು ಎನ್ನತಕ್ಕಂಥ ರೀತಿಯಲ್ಲಿ ಉತ್ತಮವಾದಂಥ ಆಡಳಿತವನ್ನು ಅವರು ಆ ಕಾಲದಲ್ಲಿಯೇ ರಾಜರ ಆಶ್ರಯದಲ್ಲಿಯೇ ದಿವಾನರಾಗಿ ಉತ್ತಮವಾದಂಥ ಆಡಳಿತವನ್ನು ನಡೆಸಿರತಕ್ಕಂಥದ್ದನ್ನು ನಾವು ಕಾಣುತ್ತೇವೆ. ಎಂದೂ ಕೂಡ ಅಲ್ಲಿ ಈ ರೀತಿಯಲ್ಲಿ ಕೋಮು ಗಲಭೆ, ಘರ್ಷಣೆಗೆ ಅವಕಾಶಗಳು ಇರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಕ್ಯಾತಮಾರನಹಳ್ಳಿ ಕೇಂದ್ರ ಭಾಗದಲ್ಲಿ ಬಂದಿದ್ದು ನಿಜವಾಗಿಯೂ ಅಲ್ಲಿ ಬಹಳ ಬೆಳವಣಿಗೆಯಾಗಿದೆ. ಅಲ್ಲಿ ಸುತ್ತಮುತ್ತ ಗೌಸಿಯಾ ನಗರವಿದೆ, ಶಾಂತಿ ನಗರವಿದೆ, ಉದಯಗಿರಿ ಇದೆ, ರಾಜಿವ್ ನಗರವಿದೆ, ರಾಘವೇಂದ್ರ ನಗರವಿದೆ, ಇರೀತಿ ಈ ಪ್ರದೇಶ ಬಹಳ ಸೂಕ್ಷ್ಮವಾದಂಥದ್ದಾಗಿದೆ. ಆ ಬಡಾವಣೆಯಾಗುತ್ತಾ ಆಗುತ್ತಾ ಮೈಸೂರಿನ ಕೆಲವು

ಭಾಗಗಳು ಬೆಳೆದಿದೆ. ಈ ಕ್ಯಾತಮಾರನಹಳ್ಳಿ ನಾರ್ಥ್ – ಈಸ್ಟ್‌ನಲ್ಲಿರತಕ್ಕಂಥದ್ದು. ಮೈಸೂರಿನ ಅನೇಕ ಭಾಗಗಳಿಂದ ಜನರು ಅಲ್ಲಿಗೆ ಹೋಗಿ ನೆಲೆಸಿರತಕ್ಕಂಥದ್ದಾಗಿವೆ. ಅಲ್ಲಿ ಈ ರೀತಿಯಲ್ಲಿ ನೆಲೆಸಿರತಕ್ಕಂಥವರ ಬಗ್ಗೆ ನಿಮಗಾಗಲೇ ಗೊತ್ತಿರಬಹುದು, ಬಹಳ ಅತ್ಯಂತ ಕ್ಲಿಷ್ಟಕರವಾದಂಥ ಪರಿಸ್ಥಿತಿಯಲ್ಲಿ ಬದುಕತಕ್ಕಂಥ ಜನ ಸಮೂಹ ಅಲ್ಲಿ ಇರತಕ್ಕಂಥದ್ದು. Hand to mouth ಎಂದು ಹೇಳುತ್ತೇವಲ್ಲ, ಬೆಳಿಗ್ಗೆಯಿಂದ ಸಂಜೆಯವರೆವಿಗೂ ದುಡಿದರೆ, ತಾವು ದುಡಿದು ತಮ್ಮ ಮಕ್ಕಳಿಗೆ ತುತ್ತು ಅನ್ನವನ್ನು ತಂದು ಹಾಕತಕ್ಕಂಥ ಬಡ ಜನ ಸಮೂಹ ಅಲ್ಲಿರತಕ್ಕಂಥದ್ದು. ಬಹುತೇಕ ಅಲ್ಲಿ ವಾಸ ಮಾಡತಕ್ಕಂಥವರು ಈ ರೀತಿಯ ವರ್ಗದವರೇ ಆಗಿದ್ದಾರೆ. ಆದರೆ ಅಷ್ಟೇ ಬಹಳ ಸೂಕ್ಷ್ಮವಾದಂಥ ಪ್ರದೇಶವಾಗಿದೆ. ಅಲ್ಲಿ ಬಡಾವಣೆಯಾಗುತ್ತಲೇ ಪೊಲೀಸ್ ಸ್ಟೇಷನ್ ಕೊಡುವಾಗಲೇ ಬಹಳ ಯೋಚನೆ ಮಾಡಬೇಕಾಗಿತ್ತು. ಪೊಲೀಸ್ ಸ್ಟೇಷನ್‌ನ್ನೇನೋ ಕೊಟ್ಟಿದ್ದೀರಿ. ಆದರೆ ಆ ಠಾಣೆ ಹೇಗಿರಬೇಕು, ಅಲ್ಲಿ police personnel strength ಯಾವ ರೀತಿಯಾಗಿರಬೇಕು, ಯಾವ ರೀತಿಯಲ್ಲಿ ಪೊಲೀಸರು alert ಆಗಿರಬೇಕು ಎನ್ನತಕ್ಕಂಥದ್ದರ ಬಗ್ಗೆ ಕೂಡ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಈ ಬಗ್ಗೆ ನಂತರದಲ್ಲಿ ಮಾತನಾಡುತ್ತೇನೆ. ಏಕೆಂದರೆ ಈ ಪ್ರದೇಶದಲ್ಲಿ ಒಂದು ಬಾರಿಯಲ್ಲ, ಮೂರ್‍ನಾಲ್ಕು ಬಾರಿ ಈ ಹಿಂದೆ ಇಂಥ ಘಟನೆಗಳು ನಡೆದಿದೆ. ಇಂಥ ಘಟನೆಗಳು ನಡೆಯುವುದಕ್ಕೆ ಮೊದಲೇ preventive measures, precaution ತೆಗೆದುಕೊಳ್ಳಬೇಕಾಗಿತ್ತೋ ಆ ರೀತಿಯ ಮುಂಜಾಗ್ರತೆಯ ಪ್ರಶ್ನೆಯೂ ಇಲ್ಲಿ ಬರುತ್ತದೆ. ಮುಂಜಾಗ್ರತೆಯನ್ನು ತೆಗೆದುಕೊಂಡಾಗಲೂ ಕೂಡ ಈ ರೀತಿಯ ಘಟನೆಗಳು ನಡೆದಾಗ, ಘಟನೆಗಳು ನಡೆದ ಮೇಲೆ ನಿಯಂತ್ರಿಸುವುದು ಹೇಗೆ ಎನ್ನುವುದು ಕೂಡ ಬಹಳ ಮುಖ್ಯವಾಗಿರುತ್ತದೆ ಎಂಬ ಬಗ್ಗೆ ಕೂಡ ಯೋಚನೆ ಮಾಡಬೇಕಾಗಿದೆ. ಆದುದರಿಂದ ನಾನು ಕ್ಯಾತಮಾರನಹಳ್ಳಿ ಬಗ್ಗೆ ಅಲ್ಲಿಯ ಸ್ಥಳೀಯನಾಗಿರುವುದರಿಂದ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಕ್ಯಾತಮಾರನಹಳ್ಳಿಯಲ್ಲಿ ಬಹಳ ಅತ್ಯಂತ ಹಿಂದುಳಿದ ವರ್ಗದ ಜನರಿದ್ದಾರೆ. ಬೇರೆ ಬೇರೆಯ ಸ್ವಲ್ಪ ಜನ ದಲಿತರು ಅಲ್ಲಿದ್ದಾರೆ, ಇನ್ನು ಬಹಳ ಕಡಿಮೆ ಜನರಿರುವ ಐದಾರು ಕುಟುಂಬ ಬೇರೆ ವರ್ಗದವರಿರತಕ್ಕಂಥದ್ದು, ವಿಶೇಷವೆಂದರೆ ಇಲ್ಲಿ ಅಲ್ಪಸಂಖ್ಯಾತ ವರ್ಗದ ಮುಸಲ್ಮಾನ ಬಂಧುಗಳು ಇದ್ದಾರೆ. ಅಲ್ಲಿ ಒಂದು ಕಾಲದಲ್ಲಿ 400 ರಿಂದ 450 ಮನೆಗಳು ಮುಸ್ಲಿಂ ಬಾಂಧವರಿದ್ದರು. ಐದು ತಲೆಮಾರಿನಿಂದ ಅಲ್ಲಿ ಮುಸ್ಲಿಂ ಜನರಿದ್ದಾರೆ. ಆದರೆ ಇವತ್ತು ಆ ಕ್ಯಾತಮಾರನಹಳ್ಳಿಯಲ್ಲಿ ಕೇವಲ 150 ಮುಸ್ಲಿಂ ಕುಟುಂಬಗಳಿವೆ. ಇವತ್ತು ಅಲ್ಲಿ ಕ್ಯಾತಮಾರನಹಳ್ಳಿ ಹೊರತುಪಡಿಸಿದರೆ ಈ ಕಡೆಗೆ ಗೌಸಿಯಾ ನಗರ ಬೇರೆ ಇದೆ, ಶಾಂತಿ ನಗರ ಬೇರೆ ಮತ್ತು ಉದಯಗಿರಿ ಬೇರೆ ಇರತಕ್ಕಂಥದ್ದಾಗಿದೆ. ಅಲ್ಲಿ ತುಂಬಾ ಅಲ್ಪಸಂಖ್ಯಾತರಿರತಕ್ಕಂಥದ್ದು, ಮಧ್ಯೆ ಹಿಂದುಗಳೂ ಕೂಡ ಇದ್ದಾರೆ, ಆದರೆ ಅಲ್ಲಿ ಯಾವುದೇ ರೀತಿಯಾದಂಥ ಇಂಥ ಘಟನೆಗಳು ನಡೆದಿಲ್ಲ. ಯಾವುದೇ

ರೀತಿಯಲ್ಲಿ ಹಿಂದುಗಳು ಅಲ್ಲಿ ಭಯಭೀತರಾಗಿಲ್ಲ. ಆದರೆ ಈ ಕ್ಯಾತಮಾರನಹಳ್ಳಿಯಲ್ಲಿಯೇ ಏಕೆ ಈ ರೀತಿಯಾಯಿತು ಎಂಬ ಬಗ್ಗೆ ನೋಡಬೇಕಾಗುತ್ತದೆ. ಈ ಹಿಂದೆ ಕೂಡ 1986 ರಲ್ಲಿ ಒಂದು ಘಟನೆ ಇಲ್ಲಿ ನಡೆದಿತ್ತು. ಆಗ ಇಡೀ ರಾಜ್ಯದಲ್ಲಿ ಸಂಭವಿಸಿದಂತೆ ಇಲ್ಲಿ ಘಟನೆ ನಡೆದಿದ್ದಾಗಿತ್ತು. ಒಂದು ಪತ್ರಿಕೆಯಲ್ಲಿ ಅದು ಬಹುಶ: ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿರಬಹುದು, ಅದರಲ್ಲಿ ಬಂದಂಥ ಒಂದು ಸುದ್ದಿಯ ಹಿನ್ನಲೆಯಲ್ಲಿ ಕ್ಯಾತಮಾರನಹಳ್ಳಿಯಲ್ಲಿಯೂ ಕೂಡ ಸ್ವಲ್ಪ ಪರಿಣಾಮ ಇದರಿಂದ ಆಗಿತ್ತು. ಆಗ ಕೇವಲ ಸ್ವಲ್ಪ ಗಲಾಟೆಯಾಗಿತ್ತು. ಆನಂತರ ಇಂಥ ಘಟನೆ ನಡೆದಿದ್ದು ಬಾಬ್ರಿ ಮಸೀದಿ ಗಲಭೆಯ ಹಿನ್ನೆಲೆಯಲ್ಲಿ ಆಗಿದಂಥದ್ದು. 1992 ನೇ ಇಸವಿಯಲ್ಲಿ ನಡೆದಂಥ ಗಲಾಟೆ. ಆಗ ಇಡೀ ದೇಶದಲ್ಲಿಯೇ ಬಾಬ್ರಿ ಮಸೀದಿ ಗಲಭೆಯ ಪರಿಣಾಮ ಹೆಚ್ಚಾಗಿ ನಡೆದಿತ್ತು. ಆಗ ಬಹುಶ: ಅದರ ಬಿಸಿ ಕ್ಯಾತಮಾರನಹಳ್ಳಿಯಲ್ಲಿಯೂ ಆಗಿತ್ತು. ಆಗ ಬಹಳಷ್ಟು ನೋವಾಯಿತು. ಬಹಳಷ್ಟು ಕಷ್ಟಕ್ಕೆ ಸಿಲುಕಿಕೊಂಡವರು ಆಗ ಅಲ್ಪಸಂಖ್ಯಾತರೇ ಆಗಿದ್ದರು. ಆಗ ಅಲ್ಲಿ ಐದಾರು ತಲೆಮಾರುಗಳಿಂದ ಇದ್ದಂಥ ಮುಸ್ಲಿಂ ಸಮುದಾಯದವರೂ ಕೂಡ ಆ ಜಾಗವನ್ನು ಅಂದು ಬಿಡಬೇಕಾಯಿತು. ಈಗ ಕೇವಲ 100 ರಿಂದ 150 ಮುಸ್ಲಿಂ ಕುಟುಂಬಗಳು ಮಾತ್ರ ಅಲ್ಲಿ ಇರುವುದು. ಅಲ್ಲಿ ಅವರದೇ ಆದಂಥ ಮಸೀದಿ ಕೂಡ ಇರತಕ್ಕಂಥದ್ದು ಇದೆ. ಈ ಬಗ್ಗೆ ಯೋಚನೆ ಮಾಡಬೇಕು. ಯಾರಿಗೆ ಅಲ್ಲಿ ರಕ್ಷಣೆ ಕೊಡಬೇಕು ಎನ್ನುವಂಥ ಪ್ರಶ್ನೆ ಬಂದಾಗ ಆ 150 ಕುಟುಂಬಗಳ ಬಗ್ಗೆ ಕೂಡ ನೀವು ಯೋಚನೆ ಮಾಡಬೇಕಾಗುತ್ತದೆ. ಗೃಹ ಸಚಿವರಿಗೆ ಈ ಗಲಭೆಯ ಬಗ್ಗೆ ಮಾಹಿತಿ ಗೊತ್ತಿರತಕ್ಕಂಥದ್ದೇ ಆಗಿದೆ. ಬಾಬ್ರಿ ಮಸೀದಿ ಗಲಭೆಯಾದ ಮೇಲೆ ನಂತರದಲ್ಲಿ ಗಲಭೆಯಾಗಿರುವುದು ಇತ್ತೀಚೆಗೆ ನಡೆದಂಥದ್ದಾಗಿದೆ. 2009 ನೇ ಇಸವಿಯಲ್ಲಿ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಜೂಜಾಟದಲ್ಲಿ ಯಾವ ರೀತಿ ಗಲಭೆ ನಡೆಯಿತು, ಆಮೇಲೆ ಅಲ್ಲಿದ್ದಂಥ ಮಹಾನಗರಸಭೆಯ ಸದಸ್ಯರ ಮಾವನ ಮೇಲೆ ಹಲ್ಲೆ ನಡೆದಂಥದ್ದು, ದೊಡ್ಡ ಗಲಾಟೆಗಳು, ಗೊಂದಲಗಳು ಈ ಘಟನೆಯಾದ ನಂತರದಲ್ಲಿ ಪೊಲೀಸರು ಬಂದು ಆ ಗಲಾಟೆಯನ್ನು ನಿಯಂತ್ರಿಸಲು ಮಾಡಿದಂಥ ಪ್ರಯತ್ನಗಳ ಬಗ್ಗೆ ಗೊತ್ತಿದೆ. ಬಹುಶ: ಅವತ್ತು ಇದ್ದಂಥ ಪೊಲೀಸ್ ಕಮಿಷನರ್ ಇವತ್ತು ಮೈಸೂರು ನಗರದಲ್ಲಿ ಇಲ್ಲ. ಅವರು ಬಂದು ಕೇವಲ ಹನ್ನೊಂದು ತಿಂಗಳು ಮಾತ್ರವಾಗಿತ್ತು. ಅಂದರೆ ಮೂರು ತಿಂಗಳ ಹಿಂದೆ ಏಪ್ರಿಲ್‌ನಲ್ಲಿ ನಡೆದಂಥ ಘಟನೆ ನಡೆದಾಗ ಇದ್ದ ಪೊಲೀಸ್ ಕಮಿಷನರ್ ಒಬ್ಬರು, ಮೂರು ತಿಂಗಳು ಆದಮೇಲೆ ನಡೆದಂಥ ಘಟನೆಗೆ ಇನ್ನೊಬ್ಬ ಪೊಲೀಸ್ ಕಮಿಷನರ್ ಬಂದಿರತಕ್ಕಂಥದ್ದು. ಮೊದಲಿದ್ದವರನ್ನು ಹನ್ನೊಂದು ತಿಂಗಳು ಕೂಡ ಅಲ್ಲಿ ಇರಲು ಬಿಡಲಿಲ್ಲ. ಅದು ಬೇರೆ ವಿಚಾರ. ಅದರ ಬಗ್ಗೆ ನಾನು ಹೇಳುವುದಿಲ್ಲ. It is a disciplined organization. Police Department is a very disciplined organization. ಅದರ ಬಗ್ಗೆ ನಾನು ಈಗ ಮಾತನಾಡುವುದಕ್ಕೆ

ಹೋಗುವುದಿಲ್ಲ. ಏಕೆಂದರೆ ಪೊಲೀಸ್ ಇಲಾಖೆ ಬಹಳ ಶಿಸ್ತಿನಿಂದ ಇರತಕ್ಕಂಥ ಇಲಾಖೆಯಾಗಿದೆ. ಬಹಳ ಜವಾಬ್ದಾರಿ ಕೂಡ ಇದೆ. ಬಹಳ ಎಚ್ಚರಿಕೆಯಿಂದಲೂ ಕೂಡ ನಾವು ಯೋಚನೆ ಮಾಡಬೇಕಾಗಿರತಕ್ಕಂಥದ್ದೂ ಕೂಡ ಇದೆ. ಈಗ ಜುಲೈನಲ್ಲಿ ಕೂಡ ಗಲಾಟೆ ನಡೆಯಿತು. ಯುಗಾದಿ ಹಬ್ಬದ ಹಿನ್ನಲೆಯಲ್ಲಿ ನಡೆದಂಥ ಗಲಭೆ ಏನಿದೆ ಅದರ ಬಗ್ಗೆ ಕೂಡ ನೋಡಬೇಕಾಗಿತ್ತು. ಏಕೆಂದರೆ ನಾನು ಮೊದಲೇ ಹೇಳಿದಂತೆ ಕ್ಯಾತಮಾರನಹಳ್ಳಿ ಬಹಳ ಸೂಕ್ಷ್ಮವಾದಂಥ ಪ್ರದೇಶವಾಗಿದೆ. ಗಲಭೆಯಾದ ನಂತರ ಅಲ್ಲಿ ಪೊಲೀಸ್ ಜೀಪ್, ಪೋಲಿಸ್ ವ್ಯಾನ್‌ಅನ್ನು ಹಾಕಿದ್ದರು. ಆದರೆ ಅದನ್ನು ಹಿಂತೆಗೆದುಕೊಳ್ಳಬೇಕಾದಾಗ ಯೋಚನೆ ಮಾಡಬೇಕಾಗಿತ್ತಲ್ಲವೆ? ನಮ್ಮ intelligence network ಬಗ್ಗೆ ನೀವು ಮಾತನಾಡುತ್ತೀರಿ. ನಾನು ಪೊಲೀಸ್ ಇಲಾಖೆ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡುತ್ತೇನೆ. ಇವತ್ತಿಗೂ ಕೂಡ ನಾವು ಓಬಿರಾಯನ ಸಿಸ್ಟಂ ಅನ್ನೇ ಇಟ್ಟುಕೊಂಡಿದ್ದೇವೆ ಎಂದು ಹೇಳಬಯಸುತ್ತೇನೆ. ಯಾರೋ ಒಬ್ಬ anti-corruption ಇವತ್ತು ಹಾಕಿರುತ್ತೀರಿ, ಆತನೇ ರೆಗ್ಯುಲರ್ ಸ್ಟೇಷನ್‌ನಲ್ಲಿ ಸಿಕ್ಕಿಹಾಕಿಕೊಂಡಿರುವವನಿಗೆ ಮತ್ತೆ revoke ಮಾಡಿ ಅವನ್ನನ್ನು anti-corruption ಗೆ ಹಾಕಿದರೆ ಡಿಪಾರ್ಟ್‌ಮೆಂಟ್ morality ಎಲ್ಲಿ ಉಳಿಯುತ್ತದೆ ಹೇಳಿ? ಆಮೇಲೆ ಇದರ ಬಗ್ಗೆ ಮಾತನಾಡುತ್ತೇನೆ. finger prints, intelligence, C.O.D ಎಂದು ಎಷ್ಟು ಮೆಸ್ ಮಾಡಿ ಇಟ್ಟಿದ್ದೀರಿ. ಇಂಥ ಡಿಸಿಪ್ಲಿನ್ ಆರ್ಗನೈಸೇಶನ್‌ನಲ್ಲಿ ಕೆಲಸ ತೆಗೆಯುವುದಕ್ಕೆ ಸಾಧ್ಯವಿದೆಯೆ? ಬುದ್ಧಿವಂತಿಕೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವೇ? ವಿ.ಎಸ್. ಆಚಾರ್ಯರವರೆ ಇದರ ಬಗ್ಗೆ ಸ್ವಲ್ಪ ನಿವಾದರೂ ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ನಿಮ್ಮ ಕಾಲದಲ್ಲಿಯಾದರೂ ಕೂಡ ಯೊಚನೆ ಮಾಡಿ. ಏಕೆಂದರೆ ಬಹಳ ಹೆಗ್ಗಳಕೆ ನಿಮಗೆ ಇದೆ. ದಕ್ಷಿಣ ಭಾರತದಲ್ಲಿ shut the door for BJP ಎಂದು ಹೇಳುವಾಗ ಹೆಬ್ಬಾಗಿಲು ಮಾಡಿಕೊಂಡು ನೀವು ಬಂದಿರತಕ್ಕಂಥದ್ದನ್ನು ಜನರು ನೋಡುತ್ತಿದ್ದಾರೆ. ಈಗಾಗಲೇ ದಕ್ಷಿಣ ಭಾರತದ ಮೂರು ರಾಜ್ಯಗಳಲ್ಲಿ ಈಗಾಗಲೇ ನೀವು ಬಹಳ ಎಚ್ಚರಿಕೆಯಿಂದ ಇರಿ, ನಿಮ್ಮನ್ನು ಜನರು ನೋಡುತ್ತಿದ್ದಾರೆ ಎಂದು ತೋರಿಸಿ ಕೊಟ್ಟಿದ್ದಾರೆ. ತಾವೇನೋ ಒಂದಲ್ಲ ಒಂದು ಕಾರಣಕ್ಕೆ ಕರ್ನಾಟಕದಲ್ಲಿ ಆಡಳಿತಕ್ಕೆ ಬಂದಿದ್ದೀರಿ. ಆದುದರಿಂದ ಏನಾದರೂ ಒಂದು ಬದಲಾವಣೆಯನ್ನು ತರತಕ್ಕಂಥ ರೀತಿಯಲ್ಲಿ ನೀವು ಯೋಚನೆಯನ್ನು ಮಾಡಬೇಕು. ಈ ಬಗ್ಗೆ ನಾನು ಈಗ ಮಾತನಾಡುವುದಿಲ್ಲ. ಪೊಲೀಸ್ ಇಲಾಖೆ ಮೇಲೆ ಮಾತನಾಡುವಾಗ ಹೇಳುತ್ತೇನೆ. ಇವರು ಪೊಲೀಸ್ ಇಂಟಲಿಜೆನ್ಸ್ ಬಗ್ಗೆ ಮಾತನಾಡಿದ್ದಾರೆ. ಕ್ಯಾತಮಾರನಹಳ್ಳಿ ಬಹಳ ಸೂಕ್ಷ್ಮವಾಗಿರತಕ್ಕಂಥ ಪ್ರದೇಶ. ನಾನು ತಮಗೆ ಹೇಳುತ್ತೇನೆ, ಕ್ಯಾತಮಾರನಹಳ್ಳಿಯಲ್ಲಿ ಹಿಂದುಳಿದ ಹಿಂದುಗಳು ಸಹಸ್ರಾರು ಸಂಖ್ಯೆಯಲ್ಲಿ ಇದ್ದಾರೆ, ಬಹುಶ: ಅಲ್ಲಿ ಬಹಳ

ಕಷ್ಟಕರವಾದಂಥ ವ್ಯವಸ್ಥೆ ಇರತಕ್ಕಂಥದ್ದಾಗಿದೆ. ಈಪ್ರದೇಶದ ಮಧ್ಯದಲ್ಲಿ ಅಲ್ಪ ಸಂಖ್ಯಾತರೂ ಕೂಡ ವಾಸ ಮಾಡುತ್ತಿದ್ದಾರೆ. ಅಲ್ಲಿ ಪೊಲೀಸ್ ಜೀಪ್ ಇಟ್ಟಿದ್ದನ್ನು ವಾಪಾಸ್ ತೆಗೆದುಕೊಂಡಿದ್ದಾರೆ. ತಮಗೆ ಗೊತ್ತಿದೆ. ಅಲ್ಲಿ ಅರೇಬಿಕ್ ಸ್ಕೂಲ್ ಇದೆ, ಅಲ್ಲಿ ಮುಸ್ಲಿಮರು ತಾವು ಪ್ರಾರ್ಥನೆ ಮಾಡಲು ಮಸೀದಿ ಬೇಕು ಎಂದು ಹೇಳಿರುವಂಥದ್ದು ಗೊತ್ತಿದೆ. ಕ್ಯಾತಮಾರನಹಳ್ಳಿಯ ಸುತ್ತಮುತ್ತ ಇರತಕ್ಕಂತಹ ಹಿಂದುಗಳು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದಲ್ಲದೇ ಅಲ್ಲಿ ವಿದ್ಯಾವಂತರು, ಯೋಚನೆ ಮಾಡತಕ್ಕಂಥವರ ವರ್ಗ ಕೂಡ ಅಲ್ಲಿ ಹೆಚ್ಚಾಗಿ ಇಲ್ಲವೆಂಬುದು ತಮಗೆ ಗೊತ್ತಿದೆ. ಇವೆಲ್ಲದರ ಹಿನ್ನೆಲೆಯಲ್ಲಿ ಇದರ ಪರಿಣಾಮ ಅಲ್ಲಿ ಏನಾಗಬಹುದು ಎಂಬ ಬಗ್ಗೆಯೆಲ್ಲಾ ತಾವು ಯೋಚನೆಯನ್ನು ಮಾಡಬೇಕಾಗಿತ್ತು. ಅನೇಕ ಬಾರಿ ಜಿಲ್ಲಾಧಿಕಾರಿಗಳ ಗಮನಕ್ಕೆ ಹೋಗಿದೆ, ಪೊಲೀಸ್ ಕಮಿಷನರ್‌ರವರ ಗಮನಕ್ಕೆ ಹೋಗಿದೆ, ಹತ್ತಿರದಲ್ಲಿರತಕ್ಕಂಥ ಪೊಲೀಸ್ ಸ್ಟೇಷನ್ ಗಮನಕ್ಕೂ ಹೋಗಿದೆ, ಅನೇಕ ಸಂಘ ಸಂಸ್ಥೆಗಳು ಅಲ್ಲಿ ಭಾಗವಹಿಸಿವೆ, ರಾಜಕೀಯ ಪಕ್ಷದ ಮುಖಂಡರುಗಳೆಲ್ಲಾ ಮಾತನಾಡಿದ್ದೀರಿ. ಇಂಥ ಸೂಕ್ಷ್ಮವಾದಂಥ ಪ್ರದೇಶದಲ್ಲಿ ನೀವು ಏಕಾಏಕಿ ಗೊತ್ತಿಲ್ಲದೇ ಪೊಲೀಸ್ ಜೀಪ್ ಹಾಕಿದ್ದನ್ನು ಹಿಂತೆಗೆದಿದ್ದೀರಿ. ಅಲ್ಲಿ ಇನ್ನೂ ಕಂಪ್ಲೀಟ್ ಆಗಿಲ್ಲ. ಅದಕ್ಕೆ ವಿರೋಧವಾಗುತ್ತಿದೆ, ಅರೇಬಿಕ್ ಸ್ಕೂಲ್ ಬಗ್ಗೆ ವಿರೋಧವಾಗುತ್ತಿದೆ, ಮಸೀದಿ ಕಟ್ಟುವುದಕ್ಕೂ ಕೂಡ ವಿರೋಧವಿದೆ, ಇಂಥ ಸಂದರ್ಭದಲ್ಲಿ ನೀವು ಪೊಲೀಸ್ ಜೀಪ್‌ನ್ನು ಹೇಗೆ ತೆಗೆದು ಹಾಕಿದಿರಿ? ಪೊಲೀಸ್ ವ್ಯಾನ್‌ಅನ್ನು ನೀವು ಏಕೆ ತೆಗೆದಿರಿ? ನೀವು ಪೊಲೀಸ್ ವ್ಯಾನ್ ತೆಗೆದ ತಕ್ಷಣ ಏನಾಯಿತು? ಹಂದಿ ಮಾಂಸವನ್ನು ತೆಗೆದುಕೊಂಡು ಅಲ್ಲಿ ಹಾಕಿದರು. ಇದನ್ನು ಮಾಡಿಸಿದವರು ಯಾರು? ಬಹುಶ: ಅವನು ಇನ್ನೂ ಸಿಕ್ಕಿಲ್ಲ. ಮಾಡಿದವನ ಸುಳಿವು ಸಿಕ್ಕಿದೆ ಎನ್ನತಕ್ಕಂಥದ್ದರ ಬಗ್ಗೆ ನೀವು investigation ನಡೆಸುತ್ತಿರುವ ಬಗ್ಗೆ ಗೊತ್ತಿದೆ. ನಾನು ಮೊದಲೇ ಹೇಳಿದಂತೆ ಅಂಥ ಸೂಕ್ಷ್ಮವಾದಂಥ ಪ್ರದೇಶದಲ್ಲಿ ಯಾವ ರೀತಿಯಾಗಿ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ವಿಚಾರದಲ್ಲಿ failure ಆಗಿದ್ದೀರಿ. ಅಂಥ ಸೂಕ್ಷ್ಮವಾದಂಥ ಪ್ರದೇಶದಲ್ಲಿ ಇರತಕ್ಕಂಥ ಪೊಲೀಸ್ ಠಾಣೆಯಲ್ಲಿ Station House Officer, ಪೊಲೀಸರ ಸಂಖ್ಯೆ ಯಾವ ರೀತಿ ಇರಬೇಕು, ಇನ್ಸ್‌ಪೆಕ್ಟರ್ ಯಾವ ರೀತಿ ಇರಬೇಕು, ಆ ಭಾಗದಲ್ಲಿ ಎ.ಸಿ.ಪಿ. ಹೇಗಿರಬೇಕು, ಅಲ್ಲಿ ಡಿ.ಸಿ.ಪಿ. ಹೇಗಿರಬೇಕು, ಇವರ ಮೇಲೆ ಇರತಕ್ಕಂಥ ಪೊಲೀಸ್ ಕಮಿಷನರ್ ಯಾವ ರೀತಿ ಇರಬೇಕು ಎಂಬ ಬಗ್ಗೆ ತಾವು ನೋಡಬೇಕಾಗಿತ್ತು. ಎಲ್ಲ ಪ್ರದೇಶಗಳಲ್ಲಿಯ ಪೊಲೀಸ್ ಠಾಣೆ ಒಂದೇ ರೀತಿ ಎಂದು ನೋಡಬಾರದು. ನೀವು ವಿಜಯ ನಗರವೂ ಒಂದೇ, ಜಯಲಕ್ಷ್ಮೀಪುರವೂ ಕೂಡ ಒಂದೇ, ಉದಯಗಿರಿಯ ಪೊಲೀಸ್ ಸ್ಟೇಷನ್, ಹೀಗೆ ಎಲ್ಲವನ್ನು ಒಂದೇ ರೀತಿ ನೋಡತಕ್ಕಂಥದ್ದು ಆಗಿದೆ. ಇದೇನು ನಿಮಗೆ ಅರ್ಥವಾಗುವುದಿಲ್ಲವೇ Psychological anxiety ಮಾನಸಿಕವಾಧಂಥ ಲೋಚನೆಗಳೇ ನಿಮಗೆ ಇರಬೇಡವೇ? ಪೊಲೀಸ್

ಅಧಿಕಾರಿಗಳನ್ನು ಎಲ್ಲೆಲ್ಲಿ ಹಾಕಬೇಕು, ಹೇಗಿರಬೇಕು. ನನಗೆ ಆಶ್ಚರ್ಯವಾಯಿತು, ಉದಯಗಿರಿ ಪೊಲೀಸ್ ಸ್ಟೇಷನ್‌ನಲ್ಲಿ ಯಾವ ರೀತಿಯಾದಂಥ ಯಾವ ರೀತಿಯಲ್ಲಿ ಅದು ನಡೆದುಕೊಳ್ಳುತ್ತಿದೆ ಎನ್ನತಕ್ಕಂಥದ್ದು. ಬೇಜವಾಬ್ದಾರಿಯಿಂದ ಬಹುಶ: ಈ ಘಟನೆ ವಿಕೋಪಕ್ಕೆ ಹೋಗತಕ್ಕಂಥದ್ದು ಆಗಿ ಜುಲೈ ತಿಂಗಳಲ್ಲಿ ಈ ರೀತಿಯ ಘಟನೆ ನಡೆದುಹೋಗಿದೆ. ಅಲ್ಲಿ ಏನು ಅರೇಬಿಕ್ ಶಾಲೆ ಇತ್ತೋ ಬಹುಶ: ಅಲ್ಲಿ ಅವರು ತೆಗೆದುಕೊಂಡ ಕ್ರಮ ಸರಿಯಲ್ಲ. ಏಕೆಂದರೆ ಅಲ್ಲಿ ಇನ್ನು ಡಿಸ್‌ಪ್ಯೂಟ್ ಇತ್ತು. ವಿವಾದ ಇರತಕ್ಕಂಥ ಜಾಗ. ಅಲ್ಲಿ ಹಂದಿ ಮಾಂಸವನ್ನು ತೆಗೆದುಕೊಂಡು ಹೋಗಿ ಹಾಕಿರುವುದು, ಸಹಜವಾಗಿ ಅವರಿಗೆ ಪ್ರಚೋಚನೆ ಮಾಡತಕ್ಕಂಥ, ಅವರ ಧಾರ್ಮಿಕ ವಿಧಿ ವಿಧಾನಗಳಿಗೆ ನೋವುಂಟು ಮಾಡುವಂತಹ ಕೆಲಸ ಏನಾಗಿದೆ ಬಹುಶ: ಇದನ್ನು ಯಾರೂ ಸಹಿಸತಕ್ಕಂಥದ್ದಲ್ಲ, ಇದು ಪ್ರತಿಭಟನೆಯಾಗಿದೆ. ಆದರೂ ಕ್ಯಾತಮಾರನ ಹಳ್ಳಿಯ ಒಳಗಡೆ ಇರುವವರ ಬಹಳ ತಾಳ್ಮೆಯಿಂದ ಇದ್ದಾರೆ. ಅವರಿಗೂ ಪ್ರಚೋದನೆಗಳಾಗಿವೆ, ಪ್ರಚೋದನೆಗಳಾಗುವುದಿಲ್ಲವೆಂದು ಅಲ್ಲ. ಅಲ್ಲಿ ಶಾಸಕರು ತನ್ವೀರ್ ಸೇಠ್‌ರವರ ಹತ್ತಿರ ನಾವು ಅದನ್ನು ಬಗೆಹರಿಸಿಕೊಳ್ಳುತ್ತೇವೆ ಅಥವಾ ಅಲ್ಲಿ ಮಹದೇಯರ್ ಅಯೂಬ್ ಖಾನ್ ಎಂದು ಇದ್ದಾರೆ, ಅವರು ಎರಡೂ ಕಡೆ ಸಮಾಧಾನ ಮಾಡುತ್ತಾರೆ. ಮೂರನೆಯವರು, Whether it is PFI or Karnataka forum for democracy ನಮಗೆ ಯಾರು ಬೇಕಾಗಿಲ್ಲ ಎನ್ನುವ ರೀತಿಯಲ್ಲಿ ಅವರೇ ನಮಗೆ ಬೇಡ ಇದು, ನಾವೇ ಈ ಸಮಸ್ಯೆಯನ್ನು ಬಗೆಹರಿಸುಕೊಳ್ಳುತ್ತೇವೆಂದು ಹೇಳಿ ಕಳುಹಿಸಿದ್ದಾರೆ. ಬಹುಶ: ಗಲಾಟೆ ಆದಮೇಲೆ ಹೇಗೆ ನಡೆಯುತ್ತಿದೆ. ಗಲಾಟೆಯಲ್ಲಿ ಪೊಲೀಸರ ನಿಷ್ಕ್ರೀಯತೆ, ಮುಂಜಾಗ್ರತೆಯಾಗಿ ತಮ್ಮದೇ ಆದಂತಹ ಯೋಚನೆ ಮಾಡುವಂತಹ ಶಕ್ತಿ,. ವ್ಯವದಾನ ಅವರಿಗೆ ಇಲ್ಲ. ಅಲ್ಲಿ Anti social elements ಬಂದು ಸೇರಿಕೊಂಡಿರತಕ್ಕಂಥದ್ದು, ಅವರ ಜೊತೆಯಲ್ಲಿ ಕೆಲವು ಸಲ ಇವರು ಸೇರಿಕೊಂಡು ಬಿಡುತ್ತಾರೆ, ಕೈ ಜೋಡಿಸಿಕೊಂಡು ಬಿಡುತ್ತಾರೆ. ಪೊಲೀಸ್‌ನವರೂ human being ಅಲ್ಲವೇ? ಅಂತಹ ಕಡೆಗೆ ಅಂತಾಹದ್ದನ್ನೆಲ್ಲ ತಡೆದುಕೊಂಡು ಇರುವಂತಹ integrity ಇರುವವರನ್ನು ಯೋಚನೆ ಮಾಡಿ ನೋಡಿಕೊಂಡು ಹಾಕಬೇಕಲ್ಲವೇ? ಬಹುಶ: ಅಲ್ಲಿ ಆ ಮಟ್ಟದಲ್ಲಿರುವವರು, ಇಲ್ಲವೆಂದು ನನಗೆ ಅನಿಸುತ್ತದೆ, ಅದು ನಿಮ್ಮ Inspector ಇರಬಹುದು, ನಿಮ್ಮ ACP ಇರಬಹುದು, DCP ಇರಬಹುದು, ನಿಮ್ಮ Police Commissioner ಇರಬಹುದು, ಯಾವ ಮಟ್ಟಕ್ಕೆ alert ಇರಬೇಕಾಗಿತ್ತು, ಆ ಮಟ್ಟಕ್ಕೆ ಇರಲಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ಅವರು ಗಲಾಟೆಯಾದ ನಂತರ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದಾರೆ. ನಿಜ, ನಾನು ಪೋಲೀಸ್ ಬಗ್ಗೆ ಹೇಳಿದೆ, It is desciplined organisation ಆಗಬೇಕು. ಪೊಲೀಸ್ ಇಲ್ಲದಿದ್ದರೂ

ಆಗುವುದಿಲ್ಲ. Might is right ಎಂದು ಆಗುತ್ತದೆ. ನಾನು ಪೊಲೀಸ್‌ನವರಿಗೆ, ನೀವು ಇಲ್ಲದಿದ್ದರೆ Society will become jungle ಎಂದು ಹೇಳುತ್ತಿರುತ್ತೇನೆ. ಪೊಲೀಸ್‌ನವರು ಇಲ್ಲದಿದ್ದರೆ ಬದುಕುವುದಕ್ಕಾಗುತ್ತದೆಯೇ? ಕಾಡಿನಲ್ಲಿ ಹೇಗೆ ದೊಡ್ಡ ಪ್ರಾಣಿ ಸಣ್ಣ ಪ್ರಾಣಿಗಳನ್ನು ತಿನ್ನುತ್ತದೋ ಹಾಗೆ ತಿಂದು ಹಾಕಿಬಿಡುತ್ತೀರಿ.. ಪೊಲೀಸರು ಬೇಕು, ಆದರೆ ಇವರಿಗೆ ವಿವೇಚನೆ, ಬುದ್ಧಿವಂತಿಕೆ ಬೇಕು. It is a disciplined organisation ಇವರಿಗೆ ಜವಾಬ್ದಾರಿ ಇದೆ. Police Department is the best department to serve the people. At the same time it can be worst department to harass the people ಎಂದು ಇದೆ. ಆದರೆ ನೀವು ಎರಡನೇ ಭಾಗವನ್ನೇ ತೆಗೆದುಕೊಳ್ಳುತ್ತೀರಲ್ಲ. ಪೊಲೀಸ್ ಇಲಾಖೆ ಜನಗಳಿಗೆ ಸೇವೆ ಮಾಡುವುದಕ್ಕೆಂದು ಇರುವಂತಹ ಬಹಳ ಒಳ್ಳೆಯ ಇಲಾಖೆ. ಬಡವರಿಗೆ, ಅನಾಥರಿಗೆ, ಶೋಷಿತರಿಗೆ, ಗುರಿಯಿಲ್ಲದಿರುವಂತಹವರಿಗೆ, ಒಂದು ಸಾಮಾಜಿಕ ನ್ಯಾಯವನ್ನು ಕೊಡುವುದರಲ್ಲಿ ನಿಮ್ಮದು ಮುಖ್ಯ ಜವಾಬ್ದಾರಿ ಇರತಕ್ಕಂಥದ್ದು. ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರಿಗೆ ಯಾವ ರೀತಿ ರಕ್ಷಣೆ ಕೊಡಬೇಕು ಎನ್ನುವುದರಲ್ಲಿ, ಅವರ ಧಾರ್ಮಿಕ ವಿಧಿವಿಧಾನಗಳಿಗೆ ಧಕ್ಕೆ ಬರದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಈ ರೀತಿಯ ದೊಡ್ಡ ಜವಾಬ್ದಾರಿ ನಿಮಗೆ ಇರುತ್ತದೆ. ಅದರ ಬದಲಾಗಿ harassmentಗೆ ಸಂಬಂಧಪಟ್ಟ ಹಾಗೆ ಇಲ್ಲಿ ಚರ್ಚೆಯಾಗುತ್ತಿರುವುದು. ಏನಾಗಿದೆ? ಈ ಘಟನೆಗಳು ನಡೆದಂತಹ ಸಂದರ್ಭದಲ್ಲಿ ಯಾರು ಕಾರಣರು? ಒಂದು ಕಡೆ ನೀವು ನಿಷ್ಪಕ್ಷಪಾತವಾಗಿ ಮಾಡಬೇಕಾಗಿ. ನೀವು ನಿಷ್ಪಕ್ಷಪಾತವಾಗಿ ಮಾಡಿದ್ದೀರಾ? ಇಲ್ಲಿ ನಮ್ಮ ಗೃಹಸಚಿವರು ಇದ್ದಾರೆ. 144 ಸೆಕ್ಷನ್ ಹಾಕಿದಾಗ 4ನೇ ತಾರೀಖು ಮೈಸೂರು ನಗರದಲ್ಲಿ ಬಂದ್ ಆಚರಣೆ ಮಾಡಿದವರು ಯಾರು? ನಿಮ್ಮ ಪಕ್ಷದವರು ತಾನೇ? ಬಿಜೆಪಿ ಪಕ್ಷದವರು ತಾನೇ ಕಾಲ್ ಕೊಟ್ಟು, ಮೈಸೂರು ನಗರದಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಹೆದರಿಸಿ ಗಲಾಟೆ ಮಾಡಿದ್ದು. ಸೆಕ್ಷನ್ 144 ಇರುವಾಗ ಬಂದ್ ಮಾಡುವುದಕ್ಕೆ ಅವರಿಗೆ ಪೊಲೀಸ್‌ನವರು ಏಕೆ ಅವಕಾಶ ಕೊಟ್ಟರು? ನೀವು ಬಂದ್ ಮಾಡಿದ್ದರಿಂದ PFIನವರು ಕೇಳಿದರು, Press conferenceಗೆ ಬಂದರು. ನಿಮ್ಮ DCಯವರು ಅವಕಾಶ ಕೊಡಲಿಲ್ಲ, Press conferenceನ clap press clubನಲ್ಲಿ ಅವಕಾಶ ಸಿಗುತ್ತಿಲ್ಲ. ಅಂದ ಮೇಲೆ ಮತ್ತೆ ಕರೆದು ಮಾಡಿ ಎಂದು ಹೇಳಿದವರು ಯಾರು? ಜಿಲ್ಲಾಧಿಕಾರಿಗಳು. ಅವರು press conference ಮಾಡುವುದಕ್ಕೆ ಹೋದರೆ arrest ಮಾಡುತ್ತೀರಿ? ಯಾವುದೋ ಒಂದು button ಚಾಕು ಇತ್ತು, ಅದನ್ನು ತೆಗೆದಿರಿ. Press conferenceಗೆ ಬರುವಾಗ button ಚಾಕು ಇಟ್ಟುಕೊಂಡಿರುವಾಗ ನಿಮ್ಮ ಹತ್ತಿರ ಇನ್ನೆಂತಹ ಶಸ್ತ್ರಾಸ್ತ್ರಗಳು ಇರಬಹುದು? ಬಹುಶ: ಇದನ್ನು ನೀವು ಯೋಚನೆ ಮಾಡಿ ಅವರಿಗೆ

ಹೇಳಿದಿರಿ, arrest ಮಾಡಿದಿರಿ. ಅದು retaliation ಆಯಿತು. ಅವರು ಪ್ರತಿಕಾರಕ್ಕೆ ಕಾಯುತ್ತಿರುತ್ತಾರೆ. ಅದಕ್ಕೆ ನೀವು PFI ನವರಿಗೆ ಮಾಡಿದಿರಲ್ಲ, ಅಲ್ಲಿ ಏನಾಯಿತು? ಹೌದು, ಇವರು ಬಿಜೆಪಿ ಮತ್ತು ಹಿಂದು ಸಂಘಟನೆಗಳಿಗೆ ಬಂದ್‌ಗೆ ಅವಕಾಶ ಕೊಟ್ಟರು, ನಾವೂ ಕೂಡ road block ಮಾಡುತ್ತೇವೆ, ನಮ್ಮ PFI ಮುಖಂಡರನ್ನು arrest ಮಾಡಿರುವುದು ತಪ್ಪು, ನಾವು ಪ್ರತಿಭಟಿಸುತ್ತೇವೆ, ಜೈಲ್‌ಬರೋ ಮಾಡುತ್ತೇವೆ ಎಂದು ಹೋದರು. ಅವರು ನಮ್ಮ ಗೃಹ ಮಂತ್ರಿಗಳಿಗೆ ಬಿಡಲಿಲ್ಲ. ಅಪಲೋ ಅಸ್ಪತ್ರೆಗೆ ಬಂದಾಗ ಬಿಜೆಪಿ ಕಾರ್ಯಕರ್ತರೆಲ್ಲ ಘೇರಾವ್ ಮಾಡಿದರು. ಬಾಯಿಗೆ ಬಂದಹಾಗೆ ಮಾತನಾಡಿದರು. ನಾನು ಪೇಪರ್ ನೋಡಿದೆ, ನಾನು ಹೋಗಿ ನೋಡಿದೆ ಪಾಪ ತಾವು ಬಹಳ ವಿಚಲಿತರಾಗಿದ್ದಿರಿ. ನಿಮ್ಮ ಬಗ್ಗೆ ಎರಡು ಮಾತಿಲ್ಲ.

ಡಾ: ವಿ.ಎಸ್. ಆಚಾರ್ಯ: ನಾನು ಎಲ್ಲೆಲ್ಲಿ ಹೋಗಬೇಕೆಂದು ಪೂರ್ವ ನಿಗದಿತ ಕಾರ್ಯಕ್ರಮವನ್ನು ಮಾಡಿಕೊಂಡು ಹೋಗಿದ್ದೆನು. ಆ ಎಲ್ಲಾ ಕಾರ್ಯಕ್ರಮಗಳಿಗೆ ಹೋಗಿ ಜನರನ್ನು ಹಾಗೂ ಗಾಯಾಳುಗಳನ್ನು ಭೇಟಿಯಾಗಿ press meet ಅನ್ನು ನನ್ನ ಕಾರ್ಯಕ್ರಮದ ಪ್ರಕಾರ ಮಾಡಿ ಬಂದಿದ್ದೇನೆ. ನಾನು ಇಲ್ಲಿಗೆ ಬಂದಮೇಲೆ ಗೊತ್ತಾಗಿದೆ electronic media ಮತ್ತು ಮರುದಿವಸ paper ನಲ್ಲಿ ಒಂದು ಕಡೆ ಗೃಹ ಸಚಿವರನ್ನು ಘೇರಾವ್ ಮಾಡಿದರು ಎಂದು ಇರುವುದು. ಆದರೆ ಈ ರೀತಿ ನನ್ನ ಅನುಭವಕ್ಕೆ ಏನೂ ಬರಲಿಲ್ಲ. ನಾನು ಸುಸೂತ್ರವಾಗಿ ನನ್ನ ಕಾರ್ಯಕ್ರಮದ ಪ್ರಕಾರ ಬಂದಿದ್ದೇನೆ. ಕೆಲವು ಸಂದರ್ಭದಲ್ಲಿ ಮಾಧ್ಯಮಗಳು ತಪ್ಪು ಗ್ರಹಿಕೆಗಳನ್ನು ಸೃಷ್ಟಿ ಮಾಡುವಂತಾದ್ದು ಆಗಿರುತ್ತದೆ. ಅಲ್ಲಿ ಒಂದಷ್ಟು ಜನ ಮಾತ್ರ ಸೇರಿದ್ದರು.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್: ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗುತ್ತದೆ ಎಂದು ನಾನು ಹೇಳಿದ್ದು. ಅವರು ಮಾಡಿದಂತಾದ್ದು, ಮಾನ್ಯ ಸದಾನಂದಗೌಡರವರ ಹೇಳಿಕೆ ಇರುವಂತಾದ್ದು, ನಮ್ಮ ಜಿಲ್ಲಾ ಮಂತ್ರಿಗಳು ಅಮೆರಿಕಾದಿಂದ ಬಂದಾಗ ಮಾಡಿದರು. ಬ್ಯಾನ್ ಪ್ರಶ್ನೆ ಬಂದಾಗ ಅಂತಹ ಒಂದು ಸಂದರ್ಭದಲ್ಲಿ, ಭಾರತೀಯ ಜನತಾ ಪಕ್ಷದ ಅಧ್ಯಕ್ಷರೇ ಬಹಳ ಜವಾಬ್ದಾರಿಯುತವಾಗಿ ಮಾತನಾಡಬೇಕು, ಏಕಾಏಕಿ ಹೇಳುವುದಿಲ್ಲ. People Front of India ಆಗಿಲಿ ಅಥವಾ Karnataka Forum for Democracy ಇರಬಹುದು, ಈ ಕಡೆ ಹಿಂದೂ ಸಂಘಟನೆಗಳು, ಶ್ರೀ ರಾಮ ಸೇನೆ, ಭಜರಂಗದಳ ಇವರೆಲ್ಲ ಸೇರಿಕೊಂಡು ಏನಾಗಿದೆ ಎಂದರೆ ಮಾನ್ಯ ಈಶ್ವರಪ್ಪನವರೇ, ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರಲ್ಲ, ಎರಡು ಗೂಳಿಗಳ ಜಗಳದಲ್ಲಿ ಜೋಳದ ರಾಶಿ ಹಾಳಾಯಿತು ಎನ್ನುವ ಹಾಗೆ, ಇವರಿಬ್ಬರ ಮಧ್ಯೆ ಈಗ ಬಂದಿರತಕ್ಕಂಥಾದ್ದು ಒಂದು ರೀತಿಯಲ್ಲಿ ಜನ ನೆಮ್ಮದಿಯಿಂದ ಇಲ್ಲ. ನೆಮ್ಮದಿ, ಶಾಂತಿಯನ್ನು ಕದಡಿರತಕ್ಕಂಥದ್ದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಅದಕ್ಕೆ ನಾವು ಬಹಳ ಎಚ್ಚರಿಕೆಯಿಂದ ಯೋಚನೆ ಮಾಡಬೇಕು. ಇಂತಹ ಸಂದರ್ಭದಲ್ಲಿ ಬಹಳ

ನಿಷ್ಪಕ್ಷಪಾತವಾಗಿ ನಾವು ಇದನ್ನು ನೋಡಬೇಕು. ಇವರು ಹೇಳಿದ ಹಾಗೆ ಅವತ್ತು PFI ನವರು call ಕೊಟ್ಟರು. ನಮಗೆ ಅನ್ಯಾಯವಾಗಿದೆ, ನಮ್ಮ ಮುಖಂಡರನ್ನೆಲ್ಲ ತೆಗೆದುಕೊಂಡು ಹೋಗಿ press conferenceನಲ್ಲಿ ನಮಗೆ ಏನು ತೊಂದರೆಯಾಗಿದೆ, ಯಾವ ರೀತಿಯಾಗುತ್ತಿದೆ ಎಂದು ಹೇಳುವುದಕ್ಕೆ ಹೋದಾಗ ಮುಖಂಡರನ್ನು arrest ಮಾಡಿದಿರಿ. ಅದನ್ನು ಪ್ರತಿಭಟಿಸಬೇಕು ಎಂದು ಒಂದು ಕಡೆ ಹೋದರು. ಈ ಕಡೆ 144 section ಹಾಕಿದರೂ ಕೂಡ ನೀವು ಬೇರೆ ಹಿಂದೂ ಸಂಘಟನೆಗಳಿಗೆ ಅವಕಾಶವನ್ನು ಕೊಟ್ಟಿರಿ. ಏಕೆ ಈ ರೀತಿ ತಾರತಮ್ಯವನ್ನು ಮಾಡಿದಿರಿ ಎನ್ನುವುದು. ಹೋಗಲಿ, ನಿಮಗೆ ಗೊತ್ತು ನಿಮ್ಮ intelligence ನಿಂದ ಮೈಸೂರು ನಗರಕ್ಕೆ ಬರುವಂತಹ ಎಲ್ಲಾ ಕಡೆ check posts ಇವೆ. ಇವೆಲ್ಲ ಕಳೆದ electionನಲ್ಲಿ ತಂದ check postಗಳು. ಪ್ರತಿಯೊಂದು vehicle ಕೂಡ check ಮಾಡಿ ಕಳುಹಿಸುವುದು. ಇವತ್ತು ಸಾವಿರಾರು ಜನ ಬಂದಿದ್ದಾರೆ, ನನಗೆ ಒಂದು ಅಶ್ಚರ್ಯ ಎಂದರೆ ಒಂದು ವಿಚಾರವನ್ನು ನಾನು ಪೇಪರ್‌ನಲ್ಲಿ ನೋಡಿದೆ, ಈ ರೀತಿಯಲ್ಲಿ ಗಲಾಟೆಯಾಗಿದೆ, 144 section ಹಾಕಿದ್ದೀರಿ, ಮೈಸೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಸರಾ ಉತ್ಸವ ಸಮಿತಿ ಸಭೆಯನ್ನು ಕರೆದಿದ್ದಾರೆ, ಅಲ್ಲಿಗೆ Police Commissioner, IGP, DC ಎಲ್ಲರೂ ಕೂಡ ಬರುತ್ತಾರೆ. ಅಲ್ಲಿ ಯಾರು ನಿಯಂತ್ರಣ ಮಾಡುತ್ತಿದ್ದಾರೆಂದರೆ DCPಗಳು. ಅಲ್ಲಿ ಆತನ ಕಥೆ ಏನಾಗಿರಬೇಕು? ಅವರು ಪ್ರತಿ ನಿಮಿಷಕ್ಕೂ DGPಯವರನ್ನು ಕೇಳಬೇಕು, ಪ್ರತಿಯೊಂದು Police Commissioner ರವರನ್ನು ಕೇಳಬೇಕು, DCಯವರನ್ನು ಕೇಳಬೇಕು. ಅವನು helpless ಆಗಿದ್ದಾನೆ, ಪಾಪ ಅತನನ್ನು ನೋಡುತ್ತಿದ್ದೇನೆ. ಹಲ್ಲುಪುಡಿ ಮಾರಾಟ ಮಾಡುವ ರೀತಿಯಲ್ಲಿ ಒಂದು ಬೈಕ್ ಹಿಡಿದುಕೊಂಡು ಕೂಗಿಕೊಂಡು ಕೂಗಿಕೊಂಡು ಹೋದರೆ, ಅಲ್ಲಿ ಸಾವಿರಾರು ಜನ ಇದ್ದಾರೆ. ಅಲ್ಲಿ ಆ DCP ಕಥೆ ಬೇಡ. ಅಲ್ಲಿ ಯಾವ ಮಟ್ಟಕ್ಕೆ ಹೋಯಿತು? ಅಲ್ಲಿ ದೊಡ್ಡ ಲಾಠಿ ಚಾರ್ಜ್ ಆಯಿತು. ಅಲ್ಲಿ ಎಂತಹ ಅನಾಹುತಗಳಾಯಿತು? ಘರ್ಷಣೆ ಆದಮೇಲೂ ಕೂಡ ಪೊಲೀಸರ ನಿಷ್ಕ್ರಿಯತೆಯಿಂದ, ಬೇಜವಾಬ್ದಾರಿತನದಿಂದ ಈ ರೀತಿ ಆಗುತ್ತಿದೆ ಎದು ಎಲ್ಲಾ ತನಿಖೆಯಾಗಬೇಕು ಎನ್ನುವ ದೃಷ್ಟಿಯಿಂದಲೇ ಮುಖ್ಯವಾಗಿ ಬಿಡಿಸಿದ್ದು. ನಮ್ಮ ಶಾಸಕಾಂಗ ಪಕ್ಷದ ನಾಯಕರು ನ್ಯಾಯಾಂತ ತನಿಖೆಯನ್ನು ಮಾಡಬೇಕೆನ್ನುವ ಮಾತನ್ನು ಹೇಳಿದರು. ನನಗೆ ಇದು ಹೊಸದಾಗಿ ಏನು ಕಾಣಲಿಲ್ಲ. ನಾನು ಹೇಳುವುದು ನಿಮಗೆ ಸ್ವಲ್ಪ ಬೇಸರವಾಗಬಹುದು. ನಿಜ, ಮೊದಲನೆ ಬಾರಿ ಗಲಾಟೆಯಾದಗಲೇ ಬಿಜೆಪಿ ಅಥವಾ ಬೇರೆ ಹಿಂದು ಸಂಘಟನೆಗಳಿಗೆ, ಶ್ರೀರಾಮ ಸೇನೆಯ ಮುತಾಲಿಕ್‌ಗೂ ನಮಗೂ ಸಂಬಂಧ ಇಲ್ಲವೆಂದು ನೀವು statement

ಮಾಡಿದ್ದೀರಿ. ಏಕೆಂದರೆ ನೀವು ಅಧಿಕಾರಕ್ಕೆ ಬಂದ ಮೇಲೆ ಚರ್ಚ್‌ಗಳ ಮೇಲೆ ನಡೆದಂತಹ ಗಲಾಟೆ, ಭಜರಂಗ ದಳದವರು ನಡೆದುಕೊಂಡ ರೀತಿಗಳು, ಅದಕ್ಕೆ ನೀವು ನ್ಯಾಯಾಂಗ ತನಿಖೆ ಮಾಡಬೇಕಾದಂತಹ ಪರಿಸ್ಥಿತಿ ಬಂತು ಅದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದವರು ನಿಮಗೆ ಎಚ್ಚರಿಕೆಯನ್ನು ಕೊಟ್ಟರು. ಬಹಳ ಎಚ್ಚರಿಕೆಯಿಂದಿರಿ, ಈ ರೀತಿ ಅಲ್ಪಸಂಖ್ಯಾತರ ಜೀವದ ರಕ್ಷಣೆಗೆ, ಬದುಕಿಗೆ ಈ ರೀತಿ ಆಘಾತವಾದರೆ, ತೊಂದರೆಯಾದರೆ ನಾವು ಸುಮ್ಮನೆ ಬಿಡುವುದಿಲ್ಲವೆನ್ನುವುದನ್ನು ಕೂಡ ಹೇಳಿದ್ದಾರೆ. ನಾವು ಒಂದು decision ತೆಗೆದುಕೊಂಡಿದ್ದೀರಿ, ಬಹುಶ: ಆ ಹಿನ್ನೆಲೆಯಲ್ಲಿ ತಾವು ತೆಗೆದುಕೊಂಡಂತಹ ರೀತಿ ಸರಿಯಿದೆ. ಇವತ್ತು ಆ ವಿಚಾರದಲ್ಲಿ ನ್ಯಾಯಾಂತ ತನಿಖೆ ಕೂಡ ಆಗುತ್ತಿದೆ. ಅಲ್ಲಿ ಮತ್ತೆ ಮುತಾಲಿಕ್ ಪ್ರಚೋಚನೆ ಮಾಡಿದರು. ನಿಮಗೆ ತನಿಖೆಯಿಂದ ಗೊತ್ತಾಗುತ್ತಿರಬೇಕು. ಮುತಾಲಿಕ್ ಮೊದಲನೆ ಬಾರಿ ಗಲಾಟೆಯಾದ ಮೇಲೆ ಅಲ್ಲಿಗೆ ಹೋಗಿ, ಬಹುಶ: ಪೊಲೀಸ್‌ನವರು ಮುತಾಲಿಕ್‌ನ ಅಲ್ಲಿಗೆ ಹೋಗುವುದಕ್ಕೆ ಬಿಡಬಾರದಾಗಿತ್ತು, ಅವನ ಹಿನ್ನೆಲೆ ಏನು ಎಂದು ಅವರಿಗೆ ಗೊತ್ತಿತ್ತು. ಅವರು ಎಂತಹ ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಾರೆ, ಸಮಾಜದ ಸ್ವಾಸ್ಥವನ್ನು ಹಾಳು ಗೆಡುವಂತಹ ರೀತಿಯಲ್ಲಿ ಆತನ ಹೇಳಿಕೆಗಳು, ಮಾತುಗಳು ಹೇಗಿರುತ್ತವೆ ಎಂದು ತಮಗೆ ಗೊತ್ತು. ಅಂತಹ ಸೂಕ್ಷ್ಮವಾದಂತಹ ಪ್ರದೇಶಕ್ಕೆ ತಾವು ಆತನನ್ನು ಕಳುಹಿಸಬಾರದಾಗಿತ್ತು. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅದರ ಪರಿಣಾಮ ಇವತ್ತು ಏನಾಗಿದೆ? ಕೇವಲ ಅದು ಒಂದೇ ಮಾತ್ರ ಅಲ್ಲ. ನಾನು ಗಮನಿಸಿದ ಕಳೆದ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಭಾಷಣಗಳು ಏನಿತ್ತು? ನಿಮ್ಮದು ಎಂದರೆ ನಿಮ್ಮದಲ್ಲ, ನಿಮ್ಮ ಪ್ರಚೋದನೆಯೇ ಇದಕ್ಕೆ ಕಾರಣ. ಅಂದು ಕೆನರಾದಿಂದ ಲೋಕಸಭಾ ಚುನಾವಣೆಗೆ ನಿಂತಂಹ ಬಿಜೆಪಿ ಅಭ್ಯರ್ಥಿ ಮಾಡಿದ ಭಾಷಣ ಏನು? ಯಾವುದೇ ಅಲ್ಪಸಂಖ್ಯಾತರು ಈ ರೀತಿಯಾಗಿ ನಡೆದುಕೊಂಡರೆ ಅಥವಾ ಮಾತನಾಡಿದರೆ, ನಾವು ಅಲ್ಪಸಂಖ್ಯಾತರ ಯಾವ ಧಾರ್ಮಿಕ ಮೆರವಣಿಗೆಗಳನ್ನು ಮಾಡುವುದಕ್ಕೆ ಬಿಡುವುದಿಲ್ಲ. ಇನ್ನೊಬ್ಬ ಸದಸ್ಯರು ಹಿಂದೂ ಧರ್ಮದ ಬಗ್ಗೆ, ಹಿಂದೂ ಸಂಘಟನೆಗಳ ಬಗ್ಗೆ ಮಾತನಾಡಿದರೆ ತಿಥಿ ಮಾಡಿಬಿಡುತ್ತೇವೆ ಎಂದು ಹೇಳುತ್ತಾರೆ. ಅವರು ಈ ಸದನದಲ್ಲಿ ಶಾಸಕರು, ಅವರ ಹೆಸರು ಹೇಳುವುದಿಲ್ಲ. ಇನ್ನೊಬ್ಬರು ಈ ಭಾಗದ ಶಾಸಕರಾಗಿ ಕತ್ತನ್ನು ತೆಗೆದುಬಿಡುತ್ತೇವೆಂದು ಹೇಳುತ್ತಾರೆ. ನೀವುಗಳೇ ಹೀಗೆ ಮಾತನಾಡಿದರೆ, ನಿಮ್ಮ ಸಂಘಟನೆಗಳ ಅಹಂ ಅನ್ನು ಇಳಿಸುವುದಕ್ಕೆ ಆಗುತ್ತದೆಯೇ? ಅವರ ತಲೆಗಳಿಗೆ ಬಂದು ಬಿಟ್ಟಿದೆ. ಅದು ಏನೆಂದರೆ ಇದು ನಮ್ಮ ಸರ್ಕಾರ, ನಾವು ಹೋರಾಟ ಮಾಡಿ, ಹಿಂದೂ ಸಂಘಟನೆಯಿಂದ ಬಂದಿರುವಂಥ ನಮ್ಮ ಸರ್ಕಾರವಿದೆ. ನಾವು ಏನು ಬೇಕಾದರೂ ಮಾಡಬಹುದೆಂಬ ಅಹಂ ಇದೆಯಲ್ಲಾ, ಬಹುಶ: ಅದರ ಪರಿಣಾಮ ಇದು ಆಗಿರುವಂಥದ್ದು. ಅದರ ಪರಿಣಾಮದ ನೇರ ಫಲಿತಾಂಶವೇ ಇವತ್ತು ಈ ಮಟ್ಟಕ್ಕೆ ಇಲ್ಲಿ ಈ ರೀತಯಾದಂಥ ಘಟನೆಗಳು, ಕೋಮು ಗಲಭೆಗಳು,

ಕೋಮು ಘರ್ಷಣೆ ಆಗುವುದಕ್ಕೆ ಸಾಧ್ಯವಾಗಿರುವಂಥದ್ದು. ಇವತ್ತು ಏನಾಗಿದೆಯೆಂದರೆ ಮೂರು ಜನ ಅಮಾಯಕರುಗಳು, ಅದರಲ್ಲಿ ಒಬ್ಬ ಲಾರಿ ಡ್ರೈವರ್ ಆಗಿದ್ದು, ಅವನು 16 ವರ್ಷದ ಬಾಲಕ, ಇನ್ನೊಬ್ಬ ತಿರುಪತಿ ಎನ್ನುವವನು, ಇವನು ಮತ್ತು ಇವನ ಹೆಂಡತಿಯು ಗಾರೆ ಕೆಲಸ ಮಾಡುವವರು. ಇವನು ಹೆಂಡತಿಯ ಜೊತೆಗೆ ಗಾರೆ ಕೆಲಸಕ್ಕೆಂದು ಹೋಗುತ್ತಿದ್ದರು. ಇವನನ್ನು ಹೆಂಡತಿಯ ಎದುಗಡೆಯೇ ಕೊಂದು ಬಿಟ್ಟರು. ಮೂರನೆಯವನು ಗಿರಿಧರ್ ಎನ್ನುವವನು ಇದು ಬೇರೆ ಕಡೆ ಅದದ್ದು, ಅದು ಉದಯಗಿರಿಯಲ್ಲಿ ಅದದ್ದು. ಅದರೂ ಸಹ ಆ ಗಲಭೆಯಲ್ಲಿ ಅವನಿಗೆ ಮಾರಣಾಂತಿಕವಾದಂಥ ಪೆಟ್ಟು ಆಗಿರುವಂಥಾದ್ದು. ಸುಮಾರು 20, 25 ಜನರಿಗೆ ಬಹಳ ತೀವ್ರವಾದಂಥ ಗಾಯಗಳಾಗಿದೆ. ಮಾನ್ಯ ಗೃಹ ಸಚಿವರು ಅಲ್ಲಿ ಅಸ್ಪತ್ರೆಗಳಿಗೆ ಹೋಗಿ ನೋಡಿರುವಂಥದ್ದು ಇದೆ. ನಾನು ತಮಗೆ ಹೇಳುವಂಥದ್ದು ಏನೆಂದರೆ, ಅವರು ಮಾತನಾಡುತ್ತಾ organization ತಿಳಿಸಿ ಹೇಳಿದರು. ಅದು ನೀವು ಆಡಳಿತ ನಡೆಸುವಂಥವರಿಗೆ ಸೇರಿದಂಥದ್ದು. ಆದರೆ ನಾವು ಎಚ್ಚರಿಕೆಯನ್ನು ಕೊಟ್ಟಿದ್ದೇವೆ. It is a disciplined organization. ಈಗ ತುಂಬಾ ಹುಷಾರಾಗಿ ಇರಬೇಕಾಗಿದೆ. ಇವತ್ತು ಏನಾಗಿದೆಯೆಂದರೆ ನಿಮ್ಮ ಯಾವ ಸ್ಟೇಷನ್ ಹೌಸ್ ಆಫೀಸರ್‌ಗಳು, ACP, DCP, IGPಗಳ ಮಾತನ್ನು ಕೇಳುತ್ತಾರೆ. ಅವರಿಗೆ ಒಂದು ಸೆಲ್ಯೂಟ್ ಹೊಡೆಯುತ್ತಾರೆ ಅಷ್ಟೆ. ಅದು ಏನೆಂದು ಹೇಳಿ loyalty ನಮಗೆ, ನೀವು ನಮ್ಮ ದೊಡ್ಡ ಅಧಿಕಾರಿಗಳು ನನ್ನ ಮೇಲೆ ಇರುವಂಥ SP, IGP, DGP ಯವರಿಗೂ ಕೂಡ ಸೆಲ್ಯೂಟ್ ಅಷ್ಟೆ, ಅದರೆ loyality ಎಲ್ಲಾ ಅವನನ್ನು ವರ್ಗಾವಣೆ ಮಾಡಿಸಿದವನ ಹತ್ತಿರ ಇರುತ್ತದೆ. ಅವನ ಡೈರಕ್ಷನ್ ಅನ್ನು ಕೇಳುತ್ತಾರೆ. ಇದನ್ನು ನಾವು ನೋಡುತ್ತಿದ್ದೇವೆ. ಅವರ ಡೈರಕ್ಷನ್ ಮೇಲೆ ನಮ್ಮ ಇನ್‌ಸ್ಪೆಕ್ಟರ್ ಇರಲಿ, ಸಬ್ ಇನ್‌ಸ್ಪೆಕ್ಟರ್ ಇರಲಿ ಇವರು DGP ಹೇಳಿದರೂ ಅವರ ಮಾತನ್ನು ಕೇಳುವುದಿಲ್ಲ, IGP ಹೇಳಿದರೂ ಕೇಳುವುದಿಲ್ಲ. ಅವನ loyalty ಅವನನ್ನು ಅಲ್ಲಿಗೆ ಯಾರು ತಂದು ಕೂರಿಸಿರುತ್ತಾರೋ ಅವರಿಗೆ ಆಗಿರುವಂಥದ್ದು ಒಂದು. ಇದು ವರ್ಗಾವಣೆಯಲ್ಲಿ ಕಳೆದ ಒಂದು ವರ್ಷದಿಂದ ಮಾಡಿರುವಂಥದ್ದು. ಅದರಲ್ಲೂ ಕೂಡ ಇಂಥ ಸೂಕ್ಷ್ಮವಾದಂಥ ಪೊಲೀಸ್ ಇಲಾಖೆಯಲ್ಲಿ, ನಿಮಗೆ ಗೊತ್ತಿದೆ. ಇದರಲ್ಲಿ ಒಂದು ವಿಚಾರವೂ ಗೊತ್ತಿಲ್ಲವೇನೋ? ಯಾರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ, ಯಾರು ಎಲ್ಲಿದ್ದಾರೆಂಬುದು ಕೂಡ ಮಾನ್ಯ ಗೃಹ ಸಚಿವರಿಗೆ ಗೊತ್ತಿಲ್ಲ. ಅವರು ಆಡಳಿತ ನಡೆಸಬೇಕು, ನಡೆಸುತ್ತಿದ್ದಾರೆ. ಆದರೆ ಎಲ್ಲೆಲ್ಲಿ ಯಾರ್ಯಾರು ಬರಬೇಕೆಂಬುದು ವ್ಯವಸ್ಥಿತವಾಗಿ ನಡೆಯುತ್ತಿದೆ. ಇವತ್ತು totally ನಿಮ್ಮ ಪೊಲೀಸ್ ಇಲಾಖೆ ಏನಾಗಿದೆಯೆಂದರೆ demoralize ಆಗಿದೆ. ಇಲ್ಲಿ ಯಾರೂ ಯಾರ ಮಾತನ್ನು ಕೇಳುವಂಥದ್ದು ಇಲ್ಲ. ತಾವು ಬೇರೆ ಹೇಳುವುದಕ್ಕಿಂತ ಮೊದಲು ಇದನ್ನು

ಸರಿಪಡಿಸಿಕೊಳ್ಳಿ. ಇಲ್ಲಿ ಸಾಧ್ಯವಿಲ್ಲ, ಇದು ಆಗುತ್ತಿಲ್ಲ, ಇಲ್ಲಿ ಇವತ್ತು ಏನಾಗುತ್ತಿದೆಯೆಂಬುದು ನಮಗೆ ಗೊತ್ತಿದೆ. ಇವತ್ತು ಪೊಲೀಸ್ ಇಲಾಖೆಯಿಂದ ಅಲ್ಲಿ ಸ್ಥಳೀಯವಾಗಿ ಇರತಕ್ಕಂಥವರು ಯಾವ ರೀತಿಯಲ್ಲಿ ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆಂಬುದು ನಮಗೆ ಅರ್ಥವಾಗುತ್ತದೆ. ತಮ್ಮ ಆಡಳಿತದಲ್ಲಿ ನಿಮ್ಮ ಇಲಾಖೆ ಸರಿಯಾದಂಥ ರೀತಿಯಲ್ಲಿ ನಡೆಯಬೇಕೆಂಬ ದೃಷ್ಟಿಯಲ್ಲಿ ಹೇಳಿದೆ. ಅಂತಹ ಇಲಾಖೆಯಲ್ಲಿ ಇವತ್ತು ಈ ರೀತಿಯಾದಂಥ ವರ್ಗಾವಣೆಗಳು ಬಂದೆರಗಿರುವುದರಿಂದ ಈ ರೀತಿಯ ಘಟನೆಗಳು ನಡೆಯುತ್ತಿದೆ. ನಾವು ವಿಶೇಷವಾಗಿ ನ್ಯಾಯಾಂಗ ತನಿಖೆ ಎಂದು ಹೇಳಿದ್ದೇವೆ. ಇವತ್ತು ಅಲ್ಲಿ 150 ಜನ ಮಾತ್ರ ಅಲ್ಪಸಂಖ್ಯಾತರು ಕ್ಯಾತಮಾರನ ಹಳ್ಳಿಯ ಒಳಗೆ ಭಯದಿಂದ ಇರುವವರು, ಇವರು ಐದು ತಲೆಮಾರುಗಳಿಂದ ಹೊಂದಾಣಿಕೆ ಮಾಡಿಕೊಂಡು ಬಂದಿರುವಂಥ ಸಂದರ್ಭದಲ್ಲಿ, ಇವತ್ತು ಈ ರೀತಿಯಾಗಿ ಹಿಂದು ಸಂಘಟನೆಗಳ ಪ್ರಚೋದನೆಯಿಂದ ಅವರ ಮೇಲೆ ಯಾವ ಕ್ಷಣದಲ್ಲಿಯಾದರೂ ತಿರುಗಿ ಬೀಳುವಂಥ ಒಂದು ಭಯಾನಕವಾದ ವಾತಾವರಣವನ್ನು ಇವತ್ತು ಅಲ್ಪಸಂಖ್ಯಾತರಲ್ಲಿ ನಾವು ಕಾಣುತ್ತಿರುವಂಥ ಪರಿಸ್ಥಿತಿಯಾಗಿದೆ. ಅಲ್ಲಿ ಏನಾದರೂ ಅದರೆ ಅದರ ಪರಿಣಾಮ entire Udayagiri police station jurisdiction ಏನು ಇದೆ, ಅಲ್ಲಿ ಅದರ ಪರಿಣಾಮವಾಗತಕ್ಕಂಥದ್ದು. ಅಲ್ಲಿ ಮತ್ತೆ ಪ್ರತಿಕಾರದ ರೀತಿಯಲ್ಲಿ ನಡೆದುಕೊಳ್ಳುವಂಥ ಸಾಧ್ಯತೆಗಳು ಇರುವುದರಿಂದ, ನೀವು ಈಗಾಗಲೇ ಇದರ ಬಗ್ಗೆ ಬಹಳ ಎಚ್ಚರಿಕೆಯನ್ನು ವಹಿಸಿ, ಉದಯಗಿರಿ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಯಾವ ರೀತಿಯಲ್ಲಿರಬೇಕು, ಅವರು ಎಷ್ಟು ಅಲರ್ಟ್ ಆಗಿರಬೇಕಾಗಿರುತ್ತದೆನ್ನುವಂಥದ್ದು ಮತ್ತು ಅಲ್ಲಿ ಶಾಂತವಾದ ವಾತಾವರಣವಿರುವುದಕ್ಕೆ ದಿನನಿತ್ಯ ಯಾವ ರೀತಿಯಲ್ಲಿ ನೋಡಿಕೊಳ್ಳಬೇಕನ್ನುವಂಥದನ್ನು ಮಾಡಬೇಕು, ಅದು ಹಿಂದೂ ಸಂಘಟನೆಗಳು ಇರಲಿ, ಮುಸ್ಲಿಂ ಸಂಘಟನೆಗಳು ಇರಲಿ, ರಾಜಕೀಯ ಪಕ್ಷಗಳಿರಲಿ, ರಾಜಕೀಯೇತರ ಪಕ್ಷಗಳಿರಲಿ, ಅವರ ಜೊತೆಯಲ್ಲಿ ಕೂಡ ಅವರು ಯಾವ ರೀತಿಯಾಗಿ ಅವರೊಡನೆ ಒಡನಾಟ, ಮಾತುಕತೆಗಳನ್ನು ಇಟ್ಟುಕೊಂಡು ಅಲ್ಲಿ ಯಾವ ರೀತಿಯಲ್ಲಿ ಶಾಂತಿ ನೆಲಸುವಂತೆ ಮಾಡಬೇಕೆನ್ನುವ ಬಗ್ಗೆ ಪ್ರಯತ್ನವನ್ನು ಮಾಡಬೇಕು. ಕ್ಯಾತಮಾರನಹಳ್ಳಿಯ ಹೊರಗಡೆ ಇರುವಂಥವರು ಯಾರು ಭಯದ ಭೀತಿಯಲ್ಲಿರುವಂಥವರಿಗೆ ಯಾವ ರೀತಿಯಲ್ಲಿ ರಕ್ಷಣೆಯನ್ನು ಕೊಡಬೇಕನ್ನುವ ಬಗ್ಗೆ ಕೂಡ ಯೋಚನೆ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಸಮಗ್ರವಾಗಿ ನಮಗೆ ಗೊತ್ತಿದೆ, judicial enquiry ಅಗಬೇಕಾಗಿರುವಂಥದ್ದು ನಿಜ. ಇದು ಏಕೆ ಆಯಿತು, ಇದರ ಹಿನ್ನಲೆ ಏನು ಎಂಬುದು ಎಲ್ಲರಿಗೂ ಗೊತ್ತಾಗಬೇಕಾಗಿದೆ. ಇದು ಪೊಲೀಸರ ನಿಷ್ಕ್ರಿಯತೆಯಿಂದ ಅಗಿದೆಯಾ ಅಥವಾ ಧಾರ್ಮಿಕ ಪ್ರಚೋದನೆಯಿಂದ ಅಗಿದೆಯಾ, ಯಾವ ರೀತಿಯಿಂದ ಇದು ಆಗುತ್ತಿದೆ? ಇದು ಮತ್ತೊಂದು ಬಾರಿ ಆಗಬಾರದೆಂದು ನಮ್ಮ ಶಾಸಕಾಂತ ಪಕ್ಷದ ನಾಯಕರು ಇದನ್ನು ನ್ಯಾಯಾಂಗ

ತನಿಖೆಯಾಗಬೇಕೆಂದು ಹೇಳಿದ್ದು, ಇದು ನ್ಯಾಯಾಂಗ ತನಿಖೆಯಾಗಲಿ. ಇಲ್ಲಿ ಹೃದಯಗಳು ಬದಲಾವಣೆಯಾಗಬೇಕಾಗಿರುವಂಥದ್ದು, ಮನಸ್ಸುಗಳು ಬದಲಾವಣೆ ಆಗಬೇಕಾಗಿರುವಂಥದ್ದು ಮುಖ್ಯ. ಅದಕ್ಕೆ ನಾನು ಹೇಳಿದೆ, basically, Indian Constitution ಇದೆಯಲ್ಲ, ಅದರ preamble ನಾವು ಭಾರತೀಯರು ಎನ್ನುವಂಥ ರೀತಿಯಲ್ಲಿ, ಅಂಥ ಅತ್ಯುತ್ತಮವಾದ ಸಂವಿಧಾನದ ಆಶ್ರಯದಲ್ಲಿ, ನೆರಳಿನಲ್ಲಿ ನಾವು ಅಧಿಕಾರವನ್ನು, ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸಬೇಕಾಗಿದೆಯೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲಿ ಬಹಳ ಎಚ್ಚರಿಕೆಯಿಂದ ಮತ್ತು ಶಾಂತಿಪ್ರಿಯವಾದಂಥ ಮೈಸೂರು ನಗರದಲ್ಲಿ ಮುಂದೆ ಈ ರೀತಿಯಾದ ಯಾವುದೇ ರೀತಿಯಾದಂಥ ಕೋಮು ಘರ್ಷಣೆ, ಕೋಮು ಗಲಭೆಗಳಿಗೆ ಅವಕಾಶ ಕೊಡದೇ ಅಲ್ಲಿನ ಜನತೆ ಶಾಂತ ರೀತಿಯಲ್ಲಿ ಬದುಕುವಂತೆ ನೋಡಿಕೊಳ್ಳುವಂಥದ್ದೆ ಆಡಳಿತ ಪಕ್ಷದ ಜವಾಬ್ದಾರಿಯಾಗಿದೆ. ನಿಮ್ಮ ಜೊತೆಯಲ್ಲಿ ನಾವು ಸಹಕರಿಸುವುದೇ ನಮ್ಮೆಲ್ಲರ ಕರ್ತವ್ಯವಾಗಿದೆಯೆನ್ನುವ ಮಾತನ್ನು ಹೇಳುತ್ತೇನೆ. ಬಿ.ಜೆ.ಪಿ. ಎಂದರೆ ಅಲ್ಪಸಂಖ್ಯಾತರ ಬಗ್ಗೆ ತಾತ್ಸಾರವಿದೆ ಅಥವಾ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದರೆ ಅವುಗಳ ಹಿಂದೆ ಇರುವಂಥ ಸಂಘಟನೆಗಳು ತಮ್ಮ ಅಹಂನಿಂದ ಈ ರೀತಿಯಾದಂಥ ಘಟನೆಗಳು ನಡೆಯುವಂಥ ರೀತಿಯಲ್ಲಿ ಪ್ರಚೋದನೆಗಳಿಗೆ ಅವಕಾಶವನ್ನು ಕೊಡುತ್ತಿದ್ದಾರೆನ್ನುವಂಥದ್ದನ್ನು ತೆಗೆಯುವಂಥ ರೀತಿಯಲ್ಲಿ ಸರ್ಕಾರ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಅದಕ್ಕೆ ಪೂರಕವಾಗಿ ನೀವು ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂಬ ಮಾತನ್ನು ನಮ್ಮ ಶಾಸಕಾಂಗ ಪಕ್ಷಗಳ ಜೊತೆ ಜೊತೆಯಲ್ಲಿ ನಾನು ಕೂಡ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಆರ್.ರೋಷನ್‌ಬೇಗ್(ಶಿವಾಜಿನಗರ): ಮಾನ್ಯ ಉಪಾಧ್ಯಕ್ಷರೆ, ನಮ್ಮ ವಿರೋಧಪಕ್ಷದ ನಾಯಕರು ಹಾಗೂ ಉಪ ನಾಯಕರು, ಮಿತ್ರರು, ಬಾಲಕೃಷ್ಣರವರು ಹಾಗೂ ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಏನು ವಿಷಯಗಳನ್ನು ಮಾತನಾಡಿದ್ದಾರೆ. ನಾನು ಅದನ್ನೇ repeat ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದೆರಡು points ಹೇಳಲಿಚ್ಛಿಸುತ್ತೇನೆ. ಇದೇ ರೀತಿಯ ಘಟನೆ ಬೆಂಗಳೂರಿನಲ್ಲಿ 6 ತಿಂಗಳ ಹಿಂದೆ ಒಂದು ಘಟನೆ ನಡೆಯಿತು. ಬೆಳಗಿನ ಜಾವ ಹೆಬ್ಬಾಳ ಪೋಲೀಸ್ ಸ್ಟೇಷನ್ ವ್ಯಾಪ್ತಿಯ ಒಂದು ಮಸೀದಿಯಲ್ಲಿ ಹಾಗೂ ಮುನಿರೆಡ್ಡಿ ಪಾಳ್ಯದ ಒಂದು ಮಸೀದಿಯಲ್ಲಿ ಬೆಳಗಿನ ಜಾವ ಇದೇ ರೀತಿಯಲ್ಲಿ ಹಂದಿ ಮಾಂಸವನ್ನು ತಂದು ಇಟ್ಟು ಹೋಗಿದ್ದರು.. ಅಲ್ಲಿ ಜೆ.ಸಿ.ನಗರ ಪೋಲೀಸ್ ಸ್ಟೇಷನ್‌ನವರು ಹಾಗೂ ಹೆಬ್ಬಾಳ ಪೋಲೀಸ್ ಸ್ಟೇಷನ್‌ನವರು ಬಹಳ prompt ಆಗಿ ಕೆಲಸ ಮಾಡಿ, ಬೆಳಗಿನ ಜಾವ ಆ ಜಾಗವನ್ನೆಲ್ಲಾ clean ಮಾಡಿ, ನಮ್ಮನ್ನೆಲ್ಲಾ ಕರೆಸಿ ಮಾತನಾಡಿ ನಮ್ಮ ಸಲಹೆಗಳನ್ನು ತೆಗೆದುಕೊಂಡರು. ನಮಗೆ tension ಆಯಿತು, ಅಲ್ಲಿ ಈಗ ಯಾವ ಗಲಾಟೆಗಳು ಆಗಲಿಲ್ಲ, ಯಾವ ಗಲಭೆಗಳು ಆಗಲಿಲ್ಲ. ಆ ದಿವಸ ಸ್ವಲ್ಪ ಲಾಠಿ ಚಾರ್ಜ್ ಆಯಿತು

ನಂತರ ವಾತಾವರಣ ಶಾಂತವಾಯಿತು. ಆದರೆ ಐದಾರು ದಿವಸಗಳಲ್ಲಿ ಅಲ್ಲಿ ಒಬ್ಬ Assistant Commissioner of Police, R.T.Nagar, ಅವರ ಹೆಸರು ಆದಿಮಣಿ ಎಂದು. ಅವರು ಎಷ್ಟು prompt ಆಗಿ ಕೆಲಸ ಮಾಡುತ್ತಾರೆಂದರೆ ಐದಾರು ದಿವಸಗಳಲ್ಲಿ ನಾಲ್ಕು ಜನ ರಾಮಸೇನಾದವರನ್ನು arrest ಮಾಡಿದರು. ಅವರನ್ನು ಅರೆಸ್ಟ್ ಮಾಡಿ, ಜೈಲಿಗೆ ಕಳುಹಿಸುತ್ತಾರೆ. ಅವರು ಕೆ.ಸಿ.ಹಳ್ಳಿ ಕಡೆಯಿಂದ ಈ ಹಂದಿ ಮಾಂಸವನ್ನು ತೆಗೆದುಕೊಂಡು ಬಂದು ನಾವೇ ಇಟ್ಟಿದ್ದು ಎಂದು ಒಪ್ಪಿಕೊಳ್ಳುತ್ತಾರೆ. ಆಗ ಅವರು ಅವರನ್ನು ಜೈಲಿಗೆ ಕಳುಹಿಸುತ್ತಾರೆ. ಆಗ ನಾನು ಅಂದುಕೊಂಡೆ, ಮಾನ್ಯ ಗೃಹ ಸಚಿವರು ಈ ACPಯವರನ್ನು ಕರೆದು ಶಹಭಾಸ್‌ಗಿರಿಯನ್ನು ಹೇಳುತ್ತಾರೆ, ಅವರಿಗೆ complement ಮಾಡುತ್ತಾರೆಂದು ಅಂದುಕೊಂಡರೆ, ಇವರು ಏನು ಮಾಡುತ್ತಾರೆಂದರೆ, sent him out immediately, How dare, ನಿನಗೆ ಎಷ್ಟು ಧೈರ್ಯ, ನಮ್ಮ workers ಅನ್ನು arrest ಮಾಡುವುದಕ್ಕೆ ನಿನಗೆ ಎಷ್ಟು ಧೈರ್ಯವೆಂದು ಹೇಳಿ, ಅವರನ್ನು immediate ಆಗಿ next day ಅಲ್ಲಿಂದ ಕಳುಹಿಸಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಒಳ್ಳೆಯ DGPಗಳು ಇದ್ದಾರೆ, ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಯಾವುದೇ ಸರ್ಕಾರವಾದರೂ tension societyಯಲ್ಲಿ tension ಇದ್ದೇ ಇರುತ್ತದೆ. They are bound to be tensioned in the socieity. ಪೊಲೀಸ್‌ನವರು ಅಲರ್ಟ್ ಆಗಿ ಇದ್ದಿದ್ದರೆ, ಈ ಘಟನೆಗಳು ಆಗುತ್ತಾ ಇರಲಿಲ್ಲ. ಬೆಂಗಳೂರು ನಗರದಲ್ಲಿ ಯಾವಾಗ ಈ ಘಟನೆ ಆಯಿತೋ, ಯಾವಾಗ ಆ ACPಯವರನ್ನು sent out ಮಾಡಿದರೋ, ಆಗ ತಾವು message ಅನ್ನು ಕಳುಹಿಸಿದ್ದೀರಿ. ನನ್ನ ಸರ್ಕಾರ ಇದೆ, ಏನು ಬೇಕಾದರೂ ಮಾಡಿ ಎಂದು ಹೇಳಿದ್ದೀರಿ. ಅದಕ್ಕೆ ಉಪಾಧ್ಯಕ್ಷರೆ, ನಾನು ಮನವಿ ಮಾಡಿಕೊಳ್ಳುವುದೇನೆಂದರೆ, as a part of confidence building measure, immediate ಆಗಿ ಸರ್ಕಾರ ಏನು ಮಾಡಬೇಕೆಂದರೆ, ಅಮಾಯಕರನ್ನು ಏನು arrest ಮಾಡಿದ್ದೀರಿ, ಅವರ ಮೇಲೆ charge sheet ಮಾಡಲು 90 days time ಇದೆ. ತಾವು ಯಾರನ್ನು ಇಟ್ಟುಕೊಂಡಿದ್ದೀರಿ. ಅವರಲ್ಲಿ ಯಾರು ಪೋಲಿ ಪುಂಡರು ಇದ್ದಾರೆ. ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಿ. ಅದರೆ ಬಹಳಷ್ಟು ಜನ ಅಮಾಯಕರನ್ನು ಅರೆಸ್ಟ್ ಮಾಡಿದ್ದಾರಲ್ಲಾ, ಅವರ ಮೇಲೆ non bailable cases ಅನ್ನು ದಯವಿಟ್ಟು ಹಾಕಬೇಡಿ. ಯಾರು ಅಮಾಯಕರು ಇದ್ದಾರೆ, ಅವರನ್ನು immediate ಆಗಿ release ಮಾಡಿ. ಇನ್ನು ನಮ್ಮ ನಾಯಕರು ಏನು ಹೇಳಿದ್ದಾರೆ, either refer it to

CBI or judicial enquiry ಅನ್ನು ಮಾಡಿ ಎಂದು ಹೇಳಿದ್ದಾರೆ. ನಾನು ಕೂಡ ಮನವಿಯನ್ನು ಮಾಡಿಕೊಳ್ಳುತ್ತೇನೆ. ಒಂದು Judicial Commission ಮಾಡಿ ಇಲ್ಲವೆಂದರೆ CBIಗೆ refer ಮಾಡಿ. ಯಾವ ಸರ್ಕಾರವಾದರೂ ಒಂದು ಇಚ್ಛಾಸಕ್ತಿ ಇರಬೇಕು. ನಾವು control ಮಾಡುತ್ತೇವೆಂದರೆ ಯಾರ ಕೈಯಲ್ಲೂ ಗಲಾಟೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಗುಜರಾತ್‌ನಲ್ಲಿ ನೋಡಿ, ಇದೇ ತಿಂಗಳಿನಲ್ಲಿ 15 ದಿವಸಗಳಿಗೂ ಮುಂಚೆ ಸೂರತ್‌ನಲ್ಲಿ ಒಂದು ಘಟನೆ ನಡೆಯಿತು. ಆಗ ನರೇಂದ್ರ ಮೋದಿಯವರ ತಲೆಗೆ ಬಂತು. ಯಾವಾಗ ಸುಪ್ರೀಂ ಕೋರ್ಟ್ SIT team ಎಲ್ಲಾ ಮಾಡಿ, ಅಲ್ಲೆಲ್ಲಾ investigation ಎಲ್ಲಾ ಶುರು ಮಾಡಿದರು. ಮಾನ್ಯ ನರೇಂದ್ರ ಮೋದಿಯವರು ಎಲ್ಲರನ್ನು ಅರೆಸ್ಟ್ ಮಾಡಿ ಎಂದು ಹೇಳಿದರು. ಸೂರತ್‌ನಲ್ಲಿ ವಿಶ್ವ ಹಿಂದೂ ಪರಿಷತ್ತಿನ ವರ್ಕರ್ಸ್ ಅನ್ನು ಅರೆಸ್ಟ್ ಮಾಡಿದ ಮೇಲೆ ಅಲ್ಲಿ ಒಂದು ಘಟನೆಗಳು ನಡೆಯಲಿಲ್ಲ. ಇದು 15 ದಿವಸಗಳಿಗೂ ಮುಂಚೆ ಆಗಿರುವಂಥದ್ದು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ಏನೇ ಕಾರಣವಿದ್ದರೂ ಸಹ ನಾವು ಇಲ್ಲಿ ಮೈನಾರಿಟೀಸ್‌ಗೆ ರಕ್ಷಣೆ ಕೊಡುತ್ತೇವೆ, ಯಾವ ಗಲಾಟೆಯನ್ನೂ ಮಾಡುವುದಕ್ಕೆ ನಾವು ಬಿಡುವುದಿಲ್ಲ, ನಾವು ಶಾಂತಿಯನ್ನು ಕಾಪಾಡುತ್ತೇವೆ ಎನ್ನುವ ಇಚ್ಛೆ ಇದ್ದರೆ ಯಾವ ಗಲಾಟೆಗಳೂ ಆಗುತ್ತಿರಲಿಲ್ಲ. ಇಲ್ಲೂ ಕೂಡ Home Minister failure ಆಗಿದ್ದಾರೆ. ಬೆಂಕಿ ಹತ್ತಿ ಉರಿದ ಮೇಲೆ ಅಲ್ಲಿಗೆ ಹೋಗಿ ಶಾಂತಿ ಹೇಳುವುದಲ್ಲ. ಮೊದಲು ಅಲ್ಲಿದ್ದ Commissioner ಒಳ್ಳೆಯ ಕೆಲಸ ಮಾಡುತ್ತಿದ್ದರು, ಅವರನ್ನು ಮನೆಗೆ ಕಳುಹಿಸಿ, ಈ ಎಲ್ಲ ಘಟನೆಗಳಾಗುತ್ತಿದ್ದಾಗ ನೀವು ಸುಮ್ಮನೆ ನೋಡಿಕೊಂಡಿದ್ದು, ಆಮೇಲೆ ನೀವು ಅಲ್ಲಿಗೆ ಹೋದರೆ ಏನು ಪ್ರಯೋಜನ? ನಾನು ಇಲ್ಲಿ Popular Front of India ವನ್ನು defend ಮಾಡುತ್ತಿಲ್ಲ. Forum for Dignity ಯನ್ನು ಕೂಡ defend ಮಾಡುತ್ತಿಲ್ಲ. ನಾನು ಸರ್ಕಾರಕ್ಕೆ warn ಮಾಡುತ್ತಿದ್ದೇನೆ, ಈ ರಾಜ್ಯದಲ್ಲಿ ಇದೇ ತರಹದ ಹಂದಿ ಮಾಂಸದ ಘಟನೆಗಳು ನಡೆಯುತ್ತಿದ್ದರೆ, ದುಷ್ಟರನ್ನು ಹಿಡಿದು ಜೈಲಿಗೆ ಕಳುಹಿಸಿದಂಥ ಪೊಲೀಸ್ ಅಧಿಕಾರಿಯನ್ನು ನೀವು immediate ಆಗಿ transfer ಮಾಡುವಂಥದ್ದು ಆದರೆ, you will have to face very serious consequences. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ Judicial enquiry ಮಾಡಿ, ಇಲ್ಲವೆಂದರೆ C.B.I. enquiry ಮಾಡಿ ಎಂದು ಹೇಳುತ್ತಾ ನನಗೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ): ಸನ್ಮಾನ್ಯ ಸಭಾಧ್ಯಕ್ಷರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ಧನ್ಯವಾದಗಳನ್ನು

ಸಲ್ಲಿಸುತ್ತೇನೆ. ಮೈಸೂರು ನಗರದಲ್ಲಿ ನಡೆದಿರುವಂಥ ಕೋಮು ಗಲಭೆಯ ವಿಚಾರವನ್ನು ನಮ್ಮ ಶಾಸಕಾಂಗ ಪಕ್ಷದ ನಾಯಕರು ನಿಲುವಳಿ ಸೂಚನೆಯ ಮೂಲಕ ತಂದಿದ್ದು, ಅದನ್ನು ರೂಲ್ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ರೂಲ್ 69ರ ಅಡಿಯಲ್ಲಿ ಒಂದು ವಿಷಯವನ್ನು ತಂದಾಗ, ಅದರ ಬಗ್ಗೆ ಚರ್ಚೆ ಮಾಡುವಾಗ ಒಂದೇ ಪಕ್ಷದವರು ಮಾಡಬೇಕು ಎಂದು ಇದೆಯೋ ಅಥವಾ ಎಲ್ಲರೂ ಚರ್ಚೆ ಮಾಡಬೇಕೋ?

ಉಪಾಧ್ಯಕ್ಷರು: ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಎಲ್ಲರಿಗೂ ಕೊಡುವುದಾದರೆ, ಅವರಿಗೆ ನಾಲ್ಕು ಜನರಿಗೆ ಅವಕಾಶ ಕೊಟ್ಟಮೇಲೆ ನಮ್ಮವರಿಗೆ ಒಬ್ಬರಿಗಾದರೂ ಅವಕಾಶವನ್ನು ಕೊಡಬಾರದೇ?

ಉಪಾಧ್ಯಕ್ಷರು: ಕೊಡುತ್ತೇನೆ, next ನೀವೇ ಮಾತನಾಡಿ.

ಶ್ರೀ ತನ್ವೀರ್ ಸೇಠ್: ದಯವಿಟ್ಟು ನನ್ನದು ಆದಮೇಲೆ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಮ್ಮ ಪಕ್ಷದವರೂ ಮಾತನಾಡುತ್ತಾರೆ. ಅವರಿಗೂ ಅವಕಾಶ ಕೊಡಿ.

ಉಪಾಧ್ಯಕ್ಷರು: ಅವರಿಗೆ ಅವಕಾಶ ಕೊಡುತ್ತೇನೆ. ತನ್ವೀರ್ ಸೇಠ್‌ರವರು ಮಾತನಾಡಿ ಮುಗಿಸಲಿ. ಆಮೇಲೆ ಕೊಡುತ್ತೇನೆ.

ಶ್ರೀ ತನ್ವೀರ್ ಸೇಠ್: ರೂಲ್ 69ರ ಅಡಿಯಲ್ಲಿ ಮಾತನಾಡಲು ಅವಕಾಶ ಕೊಟ್ಟಿರುವಂಥದ್ದಕ್ಕೆ ಮೊದಲಿಗೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅನೇಕ ವಿಚಾರಗಳನ್ನು ನಮ್ಮ ನಾಯಕರುಗಳು ಹಾಗೂ ಜೆಡಿ(ಎಸ್)ನ ಮುಖಂಡರುಗಳು ಸದನದ ಮುಂದೆ ಇಟ್ಟಿದ್ದಾರೆ. ಕೆಲವೊಂದು ಪ್ರಮುಖವಾದಂಥ ವಿಚಾರಗಳನ್ನು ನಾನಾದರೂ ಸರ್ಕಾರಕ್ಕೆ ಹೇಳಬಯಸುತ್ತೇನೆ. ಮೈಸೂರು ನಗರ ಬಹಳ ಹಿಂದಿನಿಂದಲೂ ಬಹಳಷ್ಟು ಶಾಂತಿಯನ್ನು ಕಾಪಾಡಿಕೊಂಡು ಬಂದಂಥ ನಗರ. 1956ನೇ ಇಸವಿಯಲ್ಲಿ ಒಂದು ಸಣ್ಣ ಸುಳ್ಳಿನ ಮಾತಿಗೆ ಆದಂಥ ಘಟನೆಯನ್ನು ಬಿಟ್ಟರೆ, 1986ನೇ ಇಸವಿಯವರೆಗೂ ಯಾವುದೇ ಗಲಭೆ ಆಗದೇ ಇರುವಂಥ ಒಂದು ಹೆಗ್ಗಳಿಕೆಗೆ ಮೈಸೂರು ನಗರ ಪಾತ್ರವಾಗಿತ್ತು. ತದನಂತರ, 1922ರಲ್ಲಿ ನಡೆದ ಘಟನೆಯ ನಂತರ ಇವತ್ತಿನವರೆಗೂ, ಅಂದರೆ ಇತ್ತೀಚೆಗೆ ಕ್ಯಾತಮಾರನಹಳ್ಳಿಯ ಗಲಭೆ ಆಗುವವರೆಗೂ ಮೈಸೂರಿನಲ್ಲಿ ಯಾವುದೇ ಗಲಭೆ ಆಗಿರಲಿಲ್ಲ. ಮಧ್ಯದಲ್ಲಿ ಆದಂಥ ಸಣ್ಣಸಣ್ಣ ಘಟನೆಗಳಿಗೆ ಸ್ಥಳೀಯ ನಾಯಕರುಗಳು ಮತ್ತು ಮುಖಂಡರುಗಳು ಸೇರಿ ಅಲ್ಲಲ್ಲಿಯೇ ಆ ವಿಚಾರಗಳನ್ನು ತಿಳಿ ಮಾಡಿ ಒಂದು ಸಹಜವಾಧಂಥ ವಾತಾವರಣವನ್ನು ಸೃಷ್ಟಿ ಮಾಡಿರುವಂಥ ಘಟನೆಗಳೂ ನಮ್ಮ ಮುಂದೆ ಇವೆ. ಆದರೆ ಏಪ್ರಿಲ್ 1ನೇ ತಾರೀಖಿನಂದು ನಡೆದ ಘಟನೆಗೆ

ಸಂಬಂಧಿಸಿದಂತೆ ಈಗಾಗಲೇ ಹೇಳಿದ ಹಾಗೆ ಮಾನ್ಯ D.G. ಯವರೂ ಸಹ ಸ್ಥಳಕ್ಕೆ ಭೇಟಿ ನೀಡಿದ್ದರು. ಮಾನ್ಯ ಉಸ್ತುವಾರಿ ಸಚಿವರು ಭೇಟಿ ನೀಡಿದ್ದರು. ಯಾವ ಕಾರಣಕ್ಕಾಗಿ ಘಟನೆ ಆಯಿತು ಎನ್ನುವ ಬಗ್ಗೆ ಒಂದು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿ ಮದ್ಯ ಮಾರಾಟ ಮಾಡುವಂಥದ್ದು ಆಗಿರಬಹುದು ಅಥವಾ ಕಾನೂನು ಬಾಹಿರವಾದಂಥ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿರುವುದು, ಜೂಜು ಆಡುವಂಥದ್ದು ಇತ್ಯಾದಿಗಳು ಇರುವುದರಿಂದ ಅಲ್ಲಿ ಗಲಭೆಗೆ ಕಾರಣವಾಯಿತು ಎಂದು ಹೇಳಿದರೂ ಸಹ ಕೆಲವರು ರಾಜಕಿಯ ಬೇಳೆಯನ್ನು ಬೇಯಿಸಿಕೊಳ್ಳುವಂಥ ಪ್ರಯತ್ನದಲ್ಲಿ ಬೇರೆ ಬೇರೆ ಹೇಳಿಕೆಗಳನ್ನು ಕೊಟ್ಟಂಥ ಕಾರಣಕ್ಕೂ ಇನ್ನೂ ಹೆಚ್ಚಿನ ಒಂದು ಪ್ರಚೋದನೆಯ ವಾತಾವರಣ ಸೃಷ್ಟಿಯಾಯಿತು. ಆದರೆ, ಈಗ ನಮ್ಮ ಮುಂದಿರುವಂಥ ವಿಚಾರವೆಂದರೆ, ಪೊಲೀಸಿನವರು ಏಕಪಕ್ಷೀಯವಾಗಿ ಕೆಲಸ ಮಾಡಿದಂಥ ಘಟನೆಗಳು, ಒಂದೇ ಕೋಮಿನ 87 ಜನರನ್ನು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಿದಂಥದ್ದು, ಮತ್ತೊಂದು ಕೋಮಿನ ಕೇವಲ 8 ಜನರನ್ನು ಜೈಲಿಗೆ ಕಳುಹಿಸಿ, ಅವರಿಗೆ ಸುಲಭವಾಗಿ ಬೇಲ್ ಸಿಗುವಂತಹ ಅವಕಾಶಗಳು ಸಿಕ್ಕಿದ್ದು ಅಲ್ಲಿನ ಯುವಕರಲ್ಲಿ ಪೊಲೀಸರ ವಿರುದ್ಧ ಇನ್ನೂ ಹೆಚ್ಚಿನ ಆಕ್ರೋಶ ಬರಲು ಕಾರಣವಾಯಿತು. ಜುಲೈ 2ನೇ ತಾರೀಖು ನಡೆದಂಥ ಘಟನೆಗೆ ಸಂಬಂಧಿಸಿದಂತೆ ಅವತ್ತೇ ನಾನು ದೂರವಾಣಿ ಮೂಲಕ ಗೃಹಸಚಿವರಿಗೆ ಮಾತನಾಡಿದೆ, D.G. ಅವರೊಂದಿಗೆ ಮಾತನಾಡಿ ನನ್ನ ಮನಸ್ಸಿನಲ್ಲಿದ್ದಂಥ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಿದು ಏನೆಂದರೆ, ಚುನಾವಣೆಯ ಸಂದರ್ಭದಲ್ಲಿ ಕೆಲವು ಹಿರಿಯ ಅಧಿಕಾರಿಗಳು ಯಾರು ಹೊರಗೆ ಹೋಗಿದ್ದರು ಅವರನ್ನು ಅಲ್ಲಿಗೆ ಹಾಕಿಕೊಡಿ ಎಂದು ಕೇಳಿದೆ. ತಕ್ಷಣ ಸರ್ಕಾರ ಅದಕ್ಕೆ ಸ್ಪಂದಿಸಿದ್ದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಪದೇಪದೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವಂಥದ್ದರಿಂದ ಆ ಪ್ರದೇಶದ ವ್ಯಾಪ್ತಿಯ ನಕ್ಷೆ ಅವರಿಗೆ ಗೊತ್ತಿಲ್ಲದೇ, ಅಲ್ಲಿರುವಂಥ ಜನರ ಪರಿಚಯ ಅವರಿಗೆ ಇಲ್ಲದೇ ಇರುವಂಥ ಸಂದರ್ಭದಲ್ಲಿ ಇದು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯುವುದಕ್ಕೆ ಕಾರಣವಾಯಿತು. ಪ್ರತಿ ಮೂರು ತಿಂಗಳಿಗೊಮ್ಮೆ ನಾನು ಪ್ರಗತಿ ಪರಿಶೀಲನಾ ಸಭೆ ನಡೆಸುವಂಥ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳ ಜೊತೆಗೆ ಪ್ರತ್ಯೇಕವಾಗಿ ನಾನು ಸಭೆ ನಡೆಸುತ್ತೇನೆ. ನಾನು ಎಲ್ಲಾ ಸಂದರ್ಭಗಳಲ್ಲಿ ಅವರಿಗೆ ಹೇಳುತ್ತೇನೆ, ನನ್ನ ಕ್ಷೇತ್ರ ವ್ಯಾಪ್ತಿಯಲ್ಲಿರುವಂಥ 5 ಪೊಲೀಸ್ ಠಾಣೆಗಳಲ್ಲಿ habitual offenders and rowdy sheeters ಯಾರಿದ್ದಾರೆ ಅವರ ಒಂದು who is who ಎನ್ನುವ ಒಂದು ready reckoner ನಿಮ್ಮ ಹತ್ತಿರ ತಯಾರಾಗಿರಬೇಕು, ಯಾವ ಸಂದರ್ಭದಲ್ಲಿ ಏನು ಆಗುತ್ತದೋ, ಆಗ ಅವರು ಯಾರು ಎನ್ನುವುದು ಪೊಲೀಸ್ ಇಲಾಖೆಗೆ

ಗೊತ್ತಿರಬೇಕು ಎನ್ನುವುದನ್ನು ನಾನು ಹೇಳಿದರೂ ಸಹ ಇಲ್ಲಿಯವರೆಗೆ ಅದನ್ನು ಮಾಡಿದ್ದಾರೆಯೋ ಇಲ್ಲವೋ ಎನ್ನುವುದನ್ನು ಸರ್ಕಾರ ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಏಪ್ರಿಲ್‌ನಲ್ಲಿ ನಡೆದಂಥ ಘಟನೆಯ ಸಂದರ್ಭದಲ್ಲಿ ಆದಂಥ ಸಾವು ಮತ್ತು ಜುಲೈ 2ನೇ ತಾರೀಖು ಆದಂಥ ಸಾವುಗಳಿಗೆ ಮುಖ್ಯವಾಗಿ ಕಾರಣರು ಯಾರು ಎನ್ನುವುದನ್ನು ಈಗಾಗಲೇ ಪೋಲೀಸ್ ಇಲಾಖೆ ಪತ್ತೆ ಹಚ್ಚಿದ್ದರೂ ಇದುವರೆಗೂ ಯಾರನ್ನೂ ದಸ್ತಗಿರಿ ಮಾಡಿಲ್ಲ. ಲಾಂಗ್, ರಾಡ್‌ಗಳನ್ನು ಹಿಡಿದುಕೊಂಡಂಥ ಭಾವಚಿತ್ರಗಳು ಮಾಧ್ಯಮಗಳಲ್ಲಿ ಬಂದಿದ್ದು, ಅವರು ಯಾರು ಎಂದು ಪೋಲೀಸ್ ಇಲಾಖೆಗೆ ಗೊತ್ತಿದ್ದರೂ ಸಹ ಇದುವರೆಗೂ ಅವರನ್ನು ದಸ್ತಗಿರಿ ಮಾಡದೇ ಇರುವಂಥ ಕಾರಣಕ್ಕೆ ಇದು ಇನ್ನೂ ಹೆಚ್ಚಿನ ರೀತಿಯಲ್ಲಿ ಆಗುತ್ತಿದೆ. ಯಾವ ಸಂಘಟನೆಯನ್ನು ನಿಷೇದ ಮಾಡಬೇಕು ಅಥವಾ ಯಾರಿಗೆ ಪ್ರೋತ್ಸಾಹ ಕೊಡಬೇಕು ಎನ್ನುವ ಬಗ್ಗೆ ನಾವು ಯಾವತ್ತೂ ಮಾತನಾಡುವುದಕ್ಕೆ ಹೋಗಿಲ್ಲ. ಈ ಎಲ್ಲ ಪ್ರಕರಣಗಳ ಹಿನ್ನಲೆಯಲ್ಲಿ, ಸರ್ಕಾರ ನಿಷ್ಪಕ್ಷಪಾತವಾಗಿ ವರ್ತಿಸಿ, ಮೈಸೂರಿನಲ್ಲಿ ಮರಳಿ ಇಂಥ ಘಟನೆಗಳು ಆಗಬಾರದು, ಬರೀ ಮೈಸೂರಿನಲ್ಲಿ ಅಲ್ಲ, ಇಡೀ ರಾಜ್ಯದಲ್ಲಿಯೇ ಶಾಂತಿ ಸೌಹಾರ್ದತೆಯ ಒಂದು ವಾತಾವರಣ ಇರಬೇಕು ಎನ್ನುವುದಾದರೆ, ಇದರಲ್ಲಿ ಪಾಲ್ಗೊಂಡಿರುವವರನ್ನು, ಅವರು ಯಾರೇ ಆಗಿರಲಿ, ಯಾವುದೇ ಸಂಘಟನೆಯವರಾಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಇಚ್ಛಾಶಕ್ತಿ ಅವರಲ್ಲಿ ಇರಬೇಕು. 9ನೇ ತಾರೀಖು Popular Front of India ಮತ್ತು K.F.D. ಕಾರ್ಯಕರ್ತರ ಮೇಲೆ ಪೋಲೀಸ್ ಏನು ಲಾಠಿ ಪ್ರಹಾರವನ್ನು ಮಾಡಿದ್ದಾರೆ ಅದನ್ನು ಎಲ್ಲ ದೃಶ್ಯ ಮಾಧ್ಯಮಗಳಲ್ಲಿ ನಾವು ನೋಡಿದ್ದೇವೆ. ನಾನು ಒಂದೇ ಮಾತಿನಲ್ಲಿ ಹೇಳಬೇಕಾದರೆ, it is totally violation of human rights ಎನ್ನುವುದು ನೇರವಾಗಿ ಕಾಣುತ್ತದೆ. ಯಾವ ರೀತಿ ಲಾಠಿ ಪ್ರಯೋಗ ಮಾಡಿದ್ದಾರೆ, ಇದಕ್ಕೆ ಹಿನ್ನಲೆಯಾಗಿ 4ನೇ ತಾರೀಖು ಆದಂಥ ಮೈಸೂರು ಬಂದ್, ಅದಕ್ಕೆ ಪೂರಕವಾಗಿ ಜೈಲ್ ಭರೋ ಕಾರ್ಯಕ್ರಮವನ್ನು ಇವರು ಹಾಕಿಕೊಂಡಿದ್ದರು. ಹೀಗೆ ಎರಡು ಕಡೆಗಳಿಂದಲೂ ಇವರು ಒಂದು ಕಾರ್ಯಕ್ರಮ, ಅವರು ಒಂದು ಕಾರ್ಯಕ್ರಮ ಎಂದು ಹಾಕಿಕೊಂಡು ಹೋದರೆ ಮೈಸೂರು ಸಹಜ ಸ್ಥಿತಿಗೆ ಬರಲು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನೀವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತೊಂದು ವಿಚಾರದ ಬಗ್ಗೆ ನಮ್ಮ ನಾಯಕರುಗಳು ಮಾತನಾಡುವಾಗ ಬೆಳಕು ಚೆಲ್ಲಲಿಲ್ಲ. ಮೈಸೂರಿನಲ್ಲಿ ನಡೆದ ಈ ಗಲಭೆಯ ಸಂದರ್ಭದಲ್ಲಿ ಶಿವರಾಜ್ ಎನ್ನುವ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್‌ರವರ ರಿವಾಲ್ವರ್ ಕಳುವಾಗಿರುತ್ತದೆ. 14 ವಯಸ್ಸಿನ ಮುಸ್ಲಿಂ ಬಾಲಕ ಪೋಲೀಸ್ ಗುಂಡಿಗೆ ಬಲಿಯಾದ ಸಂದರ್ಭದಲ್ಲಿ, ಪೋಲೀಸ್‌ನವರು ಫೈರಿಂಗ್ ಮಾಡಿದ್ದಾರೆ ಎನ್ನುವ ಕೂಗು ಜನರಿಂದ ಬಂದಂಥ ಸಂದರ್ಭದಲ್ಲಿ ಶಿವರಾಜ್ ಎನ್ನುವ ಪೋಲೀಸ್ ಇನ್ಸ್‌ಪೆಕ್ಟರ್‌ರವರ

ರಿವಾಲ್ವರ್ ಕಳುವಾಗಿದೆ ಎನ್ನುವ ವಿಷಯ ಎಲ್ಲಾ ಮಾಧ್ಯಮಗಳಲ್ಲೂ ಬಂದಿತ್ತು. ಆದರೆ, 7ನೇ ತಾರೀಖಿನ ದಿನ ಅವರು ಘಟನೆಯ ವಿವರಗಳನ್ನು ಬರೆಯುತ್ತಾರೆ. ರಿವಾಲ್ವರ್ ಮರಳಿ ಸಿಕ್ಕಿದೆ, ಈ ಘಟನೆ ಯಾವ ರೀತಿ ನಡೆಯಿತು ಎಂದರೆ ಪೊಲೀಸ್ ಇನ್ಸ್‌ಪೆಕ್ಟರ್ ಶಿವರಾಜ್‌ರವರ ಮೇಲೆ ಹಲ್ಲೆ ಮಾಡಿ ರಿವಾಲ್ವರ್ ಅನ್ನು ಕಿತ್ತುಕೊಂಡು ಹೋಗಿದ್ದರು ಎನ್ನುವಂಥ ಮಾತನ್ನು ಬರೆದಿದ್ದಾರೆ. ಪ್ರಕರಣಕ್ಕೆ ಎರಡೆರಡು ದಿಕ್ಕನ್ನು ತೋರಿಸುವಂಥ ಪ್ರಯತ್ನ ಆಗಿರುವಂಥದ್ದನ್ನು ಮಾಧ್ಯಮಗಳಲ್ಲಿ ಬಂದಿರುವಂಥದ್ದನ್ನು ಇವತ್ತು ನಾವು ನೋಡಿದ್ದೇವೆ. ಇದರಲ್ಲಿ ಬಹಳಷ್ಟು ರಹಸ್ಯ ಅಡಗಿದೆ ಎಂದು ನಾನಾದರೂ ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದರ ಜೊತೆಗೆ, ದಸರಾ ನಾಡಹಬ್ಬ, ಅದು ವಿಶ್ವಪ್ರಸಿದ್ಧವಾಗಿದೆ. ಮೈಸೂರು ಶಾಂತಿಯ ನೆಲೆಯಾಗಿದೆ. ಮೈಸೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಗಳನ್ನು ಮತ್ತೆ ನಾವು delimitation of police station limits ಮಾಡಬೇಕಾಗಿರುವಂಥ ಅಗತ್ಯವಿದೆ. ಸರ್ಕಾರದ ಮುಂದೆ ಈಗಾಗಲೇ ನಾವು ಪೊಲೀಸ್ ಇಲಾಖೆಯ ಮೂಲಕ ಮನವಿಯನ್ನು ಮಾಡಿದ್ದು, ಸರ್ಕಾರಕ್ಕೆ ಒಂದು ವರದಿಯೂ ಸಹ ಬಂದಿದೆ. ಜೊತೆಗೆ ಮೈಸೂರು ವ್ಯಾಪಾಕವಾಗಿ ಬೆಳೆಯುತ್ತಿರುವುದರಿಂದ ಹೊಸ Police Stations ನಮಗೆ ಅಗತ್ಯವಾಗಿ ಬೇಕಾಗಿದೆ. ಬನ್ನೀಮಂಟಪದಲ್ಲಿ ಒಂದು, ಇನ್ನೊಂದು ಸಾತನಹಳ್ಳಿ ಬಡಾವಣೆಯಲ್ಲಿ Police Stations ಬೇಕು ಎನ್ನುವುದನ್ನು ಪೊಲೀಸ್ ಇಲಾಖೆಯ ಜೊತೆ ಶಾಸಕನಾಗಿ ನಾನೂ ಸಹ ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿದ್ದೇನೆ. ಇದರ ಜೊತೆಗೆ, Police Station ನಲ್ಲಿರುವ ಸಿಬ್ಬಂದಿ ಸಹ ಬಹಳ ಕಡಿಮೆ ಇದೆ. ಚುನಾವಣೆ ಸಂದರ್ಭದಲ್ಲಿ ಮತಗಟ್ಟೆಗಳಲ್ಲಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಎಂದು ಯಾವ ರೀತಿಯಾಗಿ ಪರಿಗಣಿಸುತ್ತೇವೆ ಅದೇ ರೀತಿಯಲ್ಲಿ ಇರುವಂಥ ಪೊಲೀಸ್ ಠಾಣೆಗಳು, ಅದರಲ್ಲೂ ಸೂಕ್ಷ್ಮವಾಗಿ ಮತ್ತು ಅತಿ ಸೂಕ್ಷ್ಮವಾಗಿರುವಂಥ ಪೊಲೀಸ್ ಠಾಣೆಗಳಿಗೆ ಪ್ರತ್ಯೇಕವಾಗಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಹಾಗೂ ಕೊಡಬೇಕಾಗಿರುವಂಥ ಇತರೆ ಸೌಲಭ್ಯಗಳನ್ನು ಕೊಡುವುದಕ್ಕೆ ಸರ್ಕಾರ ಮುಂದಾಗಬೇಕಾಗುತ್ತದೆ. ಕಳೆದ ಏಪ್ರಿಲ್ ತಿಂಗಳಲ್ಲಿ ಅಲ್ಲಿ ನಡೆದಂಥ ಘಟನೆಯಲ್ಲೂ ಸಹ ಸುಮಾರು 200 ಕ್ಕೂ ಹೆಚ್ಚು ಮನೆಗಳು ಹಾನಿಯಾಗಿದ್ದವು. ಸರ್ಕಾರ ಪರಿಹಾರ ರೂಪಾದಲ್ಲಿ ಕೇವಲ 300 ರೂಪಾಯಿಗಳಿಂದ 1,500–2000 ರೂಪಾಯಿಗಳವರೆಗೆ ಕೊಟ್ಟಿದ್ದಾರೆ. ಅದು ಯಾವುದಕ್ಕೂ ಸಾಲುವುದಿಲ್ಲ. ಈ ಸಲ ನಡೆದ ಘಟನೆಯಲ್ಲೂ ಸಹ ಸುಮಾರು 180 ಮನೆಗಳು ಹಾನಿಯಾದಂಥ ವರದಿ ಇದೆ. ಇದಕ್ಕೆ ಸರ್ಕಾರ ತಕ್ಷಣ ಪರಿಹಾರವನ್ನು ಕೊಡಬೇಕಾಗುತ್ತದೆ. 1980ರಿಂದ ಹಿಡಿದು ಇಲ್ಲಿಯವರೆಗೆ ಯರಾದರೂ ಇಂಥ ಘರ್ಷಣೆಗಳಲ್ಲಿ ಅಥವಾ ಕೋಮು ಗಲಭೆಗಳಲ್ಲಿ ಸತ್ತಂಥವರಿಗೆ 1 ಲಕ್ಷ ರೂಪಾಯಿಗಳನ್ನು ಪರಿಹಾರ ಕೊಡುವಂಥ ಪದ್ಧತಿಯನ್ನು ನಾವು ಬೆಳೆಸಿಕೊಂಡು ಬಂದುಬಿಟ್ಟಿದ್ದೇವೆ. ಆದರೆ, ಆ ಮೃತಪಟ್ಟ

ಕುಟುಂಭದವರಿಗೆ ಪರಿಹಾರ ಹೆಚ್ಚಿಸಬೇಕು. ಇನ್ನು, ನಾನು ಮಾಧ್ಯಮದಲ್ಲಿ ಬಂದಂಥ ಈ ಚಿತ್ರವನ್ನು ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಈ ಘಟನೆಯ ಹಿಂದೆ ಯಾರಿದ್ದಾರೆ ಎನ್ನುವುದನ್ನು ಈ ಭಾವಚಿತ್ರದ ಮೂಲಕ ಪೊಲೀಸ್‌ನವರು ಗುರುತಿಸಬಹುದು. ಇಂಥವರನ್ನು ಬಂಧಿಸುವಲ್ಲಿ ಪೊಲೀಸ್‌ನವರು ಮುಂದಾಗಬೇಕು. ಇದರ ಜೊತೆಗೆ, ಹಲೀಮ್ ಸಾದಿಯಾ ಎಜ್ಯುಕೇಷನ್ ಟ್ರಸ್ಟ್ ವಿಚಾರದಲ್ಲಿ ನಮ್ಮ ನಾಯಕರು ಬಹಳಷ್ಟು ವಿಚಾರಗಳನ್ನು ಹೇಳಿದರು. ನನಗೆ ಬಂದ ಮಾಹಿತಿ ಪ್ರಕಾರ ಮೈಸೂರು ಮಹಾನಗರ ಪಾಲಿಕೆಯ by-laws ಪ್ರಕಾರ ಇದಕ್ಕೆ ಅನುಗುಣವಾಗಿ Plan sanction ಮಾಡಿದ್ದಾರೆ. ಆದರೆ, ಈ ತಪ್ಪನ್ನು ಕೆಲವು ಅಧಿಕಾರಿಗಳ ಮೇಲೆ ಹಾಕಿ ಅವರನ್ನು ಅಮಾನತ್ತು ಮಾಡುವಂಥ ಕೆಲಸ ಮಾಡುವುದಕ್ಕೆ ಸರ್ಕಾರ ಮುಂದಾಗುತ್ತಿದೆ ಎನ್ನುವ ಮಾಹಿತಿ ಬಂದಿದೆ. ಈ ಬಗ್ಗೆ ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೂ ಪತ್ರ ಬರೆದಿದ್ದೇನೆ. 1994ರ ಉಪ ವಿಧಿ 23(2) ಪ್ರಕಾರ – ಏಕೆಂದರೆ ಈ ನಿವೇಶನ ವಾಣಿಜ್ಯ ವಲಯಕ್ಕೆ ಬರುತ್ತದೆ. ವಾಣಿಜ್ಯ ವಲಯಕ್ಕೆ ಬರುವುದರಿಂದ ಅಲ್ಲಿ ಯಾವ್ಯಾವುದನ್ನು ಕೊಡಬಹುದು, ದೇವಸ್ಥಾನ ಆಗಿರಬಹುದು, ಮಸೀದಿ ಆಗಿರಬಹುದು, ಚರ್ಚ್ ಆಗಿರಬಹುದು ಅಥವಾ ಶಾಲೆ ಆಗಿರಬಹುದು ಅಥವಾ ಯಾವುದೇ ಒಂದು ಕಟ್ಟಡ ಅಲ್ಲಿ ಆಗಬೇಕಾದರೆ ನಮ್ಮ by-laws ಪ್ರಕಾರ ಮಾಡಿರುವಂಥ ಕೆಲಸಕ್ಕೆ ಅಧಿಕರಿಗಳನ್ನು ಇದರಲ್ಲಿ ತಪ್ಪಿತಸ್ಥರು ಎಂದು ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಏಕೆಂದರೆ, ಯಾರೋ ಮಾಡಿದ ತಪ್ಪನ್ನು ಇಂಥ ಅಮಾಯಕ ಅಧಿಕಾರಿಗಳ ಮೇಲೆ ಹಾಕುವುದು ಬೇಡ. ಏಕೆಂದರೆ, deomoralizing the officers will add fuel to the fire. ಆ ಕಾರಣಕ್ಕಾಗಿ ನಾವು ಅಧಿಕಾರಿಗಳ ಹತ್ತಿರ ಕೆಲಸ ತೆಗೆದುಕೊಳ್ಳಬೇಕಾಗಿರುವಂಥದ್ದನ್ನು ಕಾನೂನಿನಂತೆ ಅವರಿಂದ ಕೆಲಸ ತೆಗೆದುಕೊಳ್ಳೋಣ. ಇನ್ನು ಮಾನ್ಯ ಶಂಕರಲಿಂಗೇಗೌಡರು ಮೊನ್ನೆ ಮಾಡಿದಂಥ ಆರೋಪ, ಆ ಆರೋಪವನ್ನು ಮಧ್ಯದಲ್ಲಿ ಇಟ್ಟುಕೊಂಡೇ, ಅದನ್ನು ನಾನು ಮಾಡಿದ್ದೇನೋ ಅಥವಾ ಬೇರೆ ಯಾರು ಮಾಡಿದ್ದಾರೋ, ಅದರ ಸತ್ಯಸಂಗತಿಗಳು ಹೊರಗೆ ಬರಬೇಕಾದರೆ ಸರ್ಕಾರ ನ್ಯಾಯಾಂಗ ತನಿಖೆ ನಡೆಸಬೇಕಾಗುತ್ತದೆ. ಇದನ್ನು ನಾನು ಒತ್ತಾಯ ಮಾಡುತ್ತಾ ತಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ(ಅರಸೀಕರೆ): ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿ ನಡೆದ ದುರ್ಘಟನೆ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ನಿಯಮ 60ರ ಅಡಿಯಲ್ಲಿಯೇ ಚರ್ಚೆಯಾಗಬೇಕೆಂದು ಪಟ್ಟು ಹಿಡಿದರು. ಆದರೂ ಸಹ ತಾವು ನಿಯಮ 69ರ ಅಡಿಯಲ್ಲಿ ಇವತ್ತು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ದುರ್ಘಟನೆ ವಿಷಯದಲ್ಲಿ ಬಹಳ ಮಟ್ಟಿಗೆ ವಿರೋದ ಪಕ್ಷದ ನಾಯಕರು, ಉಪ ನಾಯಕರು, ನಮ್ಮೆಲ್ಲ ಸ್ನೇಹಿತರು, ಹಿರಿಯ ನಾಯಕರುಗಳೆಲ್ಲ ಚರ್ಚೆ ಮಾಡಿದ್ದಾರೆ.

ಮೈಸೂರು ನಗರ ಎನ್ನತಕ್ಕಂಥದ್ದು ಒಂದು ಇತಿಹಾಸವನ್ನು ಸೃಷ್ಟಿಮಾಡಿರತಕ್ಕಂಥ, ಎಲ್ಲಾ ಜನಾಂಗಗಳ ಮನಸ್ಸನ್ನು ಸೆಳೆಯತಕ್ಕಂತ ಪ್ರದೇಶವಾಗಿದೆ. ಯಾರಿಗಾದರೂ ಬೇಜಾರಾದರೆ ಒಂದು ಸಲ ಮೈಸೂರಿಗೆ ಹೋಗಿ ಬರೋಣಪ್ಪ ಎನ್ನುವ ಗಾದೆ ನಮ್ಮಲ್ಲಿದೆ.. ಆ ಗಾದೆಗೆ ಈಗ ಒಂದು ತರಹ ಕೆಟ್ಟ ಭಾವನೆ ಬರತಕ್ಕಂಥ ರೀತಿಯಲ್ಲಿ, ಒಂದು ಭಾವನೆಯನ್ನು ಮೂಡಿಸತಕ್ಕಂಥ ರೀತಿಯಲ್ಲಿ ಈ ಸಮಾಜದಲ್ಲಿ ಮತ್ತು ಈ ರಾಜ್ಯದಲ್ಲಿ ಜನತೆ, ಸಾರ್ವಜನಿಕರಲ್ಲಿ ಮೂಡಿಸತಕ್ಕಂಥ ಒಂದು ಭಾವನೆ ಈ ಘಟನೆಯಿಂದ ಆಗಿದೆ ಎನ್ನುವುದಕ್ಕೆ ನಾನು ಈ ಸಂದರ್ಭದಲ್ಲಿ ವಿಷಾದವನ್ನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇದರ ಬಗ್ಗೆ ಇವತ್ತು ಬಹಳ ಚರ್ಚೆಯಾಗುವಾಗ ನಾನು ಕುಳಿತುಕೊಂಡು ಬಹಳವಾಗಿ ಆಲೋಚಿಸಿದೆ. ಬಹುಶ: ಏಪ್ರಿಲ್ ತಿಂಗಳಲ್ಲಿ ನಡೆದಂಥ ಘಟನೆ, ಅದು ಜೂಜುಗೋಸ್ಕರವಾಗಿ ನಡೆದಿರಲಿ, ಅಲ್ಲಿರುವ ವಾತಾವರಣದ ಸನ್ನೀವೇಶದ ಇತಿಮಿತಿಯೊಳಗೆ ಆ ಒಂದು ಘಟನೆ ನಡೆದಿರಲಿ, ಆ ಘಟನೆ ನಡೆದಂಥ ಸಂದರ್ಭದಲ್ಲಿ ಗೃಹ ಇಲಾಖೆಯವರು ಮತ್ತು ಸರ್ಕಾರದ ಪರವಾಗಿ ಇರತಕ್ಕಂಥ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಲ್ಲಿರುವ ಎಲ್ಲಾ ಜನಪ್ರತಿನಿಧಿಗಳು ಒಟ್ಟಾರೆ ಸೇರಿ ಇದು ಮುಂದೊಂದು ದಿವಸ ದೊಡ್ಡ ಪ್ರಮಾಣದ ಘಟನೆ ಆಗಬಹುದು ಎನ್ನುವಂಥ ಆಲೋಚನೆ ಮಡಿ ಆ ಸಂದರ್ಭದಲ್ಲಿಯೇ ಒಂದು ಉತ್ತಮವಾದ ತಿಳಿ ವಾತಾವರಣವನ್ನು ಸೃಷ್ಟಿಮಾಡತಕ್ಕಂಥ ಜವಾಬ್ದಾರಿಯನ್ನು ಅರಿತಿದ್ದರೆ ಬಹುಶ: ಈ ತಿಂಗಳಲ್ಲಿ ಏನು ಘಟನೆ ನಡೆಯಿತು ಅದು ನಡೆಯಲಿಕ್ಕೆ ಸಾಧ್ಯವಿರಲ್ಲಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಯಾರ್ಯಾರ ಜವಾಬ್ದಾರಿ ಎಷ್ಟೆಷ್ಟು ಎನ್ನುವುದಕ್ಕಿಂತ ಆವತ್ತು ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲೊಂದು ಸಭೆಯನ್ನು ನಡೆಸಿ, ಈ ಘಟನೆಯ ಸತ್ಯಾಸತ್ಯತೆಗಳಿಗೆ ನ್ಯಾಯಾಂಗ ತನಿಖೆಯೇ ಆಗಬೇಕೆಂಬ ಒತ್ತಾಯವನ್ನು ಮಾಡುತ್ತಾರೆ. ಅಂದರೆ ಅಲ್ಲಿ ಬಹಳ ಕ್ಲಿಷ್ಟಕರವಾದಂಥ, ಬಹಳ ಒತ್ತಾಯ ಪೂರ್ವಕವಾದಂಥ ಯಾವುದೋ ಒಂದು ಹಿನ್ನೆಲೆಯಲ್ಲಿ ಇತಿಹಾಸದಲ್ಲಿ ನಡೆದಿರತಕ್ಕಂಥ ಘಟನೆಯಿದು ಎಂದು ಆ ಜಿಲ್ಲಾ ಉಸ್ತುವಾರಿ ಸಚಿವರು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಬೇಕಾದರೆ ಅದರ ಮಹತ್ವ ಬಹಳ ಇತ್ತು ಎನ್ನುವುದು ವ್ಯಕ್ತವಾಗುತ್ತದೆ. ಅಂಥ ಒಂದು ಸೂಕ್ಷ್ಮವಾದ ವಿಚಾರವನ್ನು ಜಿಲ್ಲಾ ಉಸ್ತುವಾರಿ ಸಚಿವರು ಬಹುಶ: ಆ ಒಂದು ಘಟನೆಯನ್ನು ಬಹಳ ಸೂಕ್ಷ್ಮವಾಗಿ ಪರಿಗಣೆ ಮಾಡಿದ್ದರೆ ಈ ಘಟನೆ ಮುಂದಕ್ಕೆ ಹರಿಯುತ್ತಿರಲಿಲ್ಲೆನ್ನುವಂತದ್ದು ನಾವೆಲ್ಲ ತಿಳಿದುಕೊಳ್ಳಬೇಕಾದಂಥ ವಿಚಾರ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗತ್ತದೆ. ಅದಾಯಿತು. ಅದಾದನಂತರ ಮುಂದುವರೆದು ಹೋದಂತೆ ಈ ಸಂಸ್ಥೆಯವರು ಒಂದು ಜಮೀನನ್ನು ಖರೀದಿ ಮಾಡಿದ್ದಾರೆ. ಜಮೀನನ್ನು ಖರೀದಿ ಮಾಡಿದಂಥ ಸಂದರ್ಭದಲ್ಲಿ ಸಲೀಂ ಸಾದಿಕ್ ಎನ್ನುವವರು ಒಂದು Education Trust ಗೋಸ್ಕರ ಹಲಿಮ್ ಅಹಮದ್ ಎನ್ನುವವರ ಹತ್ತಿರ ಜಮೀನನ್ನು ಖರೀದಿ

ಮಾಡಿದರು. ಆ ಜಮೀನನ್ನು ಖರಿದಿ ಮಾಡಿದಂಥ ಸಂದರ್ಭದಲ್ಲಿ ಮತ್ತೆ ಅದಕ್ಕೆ ಮೈಸುರು ಮಹಾನಗರ ಪಾಲಿಕೆಯವರು ಅಲ್ಲಿ ಅವರು ಯಾವ ಉದ್ದೇಶಕ್ಕಾಗಿ ಖರೀದಿ ಮಾಡಿದ್ದರೋ ಆ ಕಾಮಗಾರಿಯನ್ನು ಪ್ರಾರಂಭ ಮಾಡಲಿಕ್ಕೆ ಅನುಮೋದನೆ ಕೊಡುವ ಸಂದರ್ಭದಲ್ಲಿ ಮತ್ತು ಅವರು ಖರೀದಿ ಮಾಡಿರತಕ್ಕಂಥದ್ದು ದಿ:21.11.2008ರಂದು ದಿ:21.11.2008ರಂದು ಖರೀದಿ ಮಾಡಿದಂಥ ಆ ಜಾಗಕ್ಕೆ, ಅವರು ಕೆಲಸ ಪ್ರಾರಂಭ ಮಾಡಲಿಕ್ಕೆ ಹೋಗುವವರೆಗೂ ಇವರಿಗೆ ಅದರ ಅರಿವು ಇರಲಿಲ್ಲವೇ? ಹಾಗಾದರೆ, ಅದು ಯಾವಾಗ registration ಆಯಿತು?

ಶ್ರೀ ತನ್ವೀರ್ ಸೇಠ್: ದಿನಾಂಕ 22-11-2008ರಂದು ಮೈಸೂರು ಮಹಾನಗರ ಪಾಲಿಕೆಯಿಂದ ಹೊಸ ಕಟ್ಟಡಕ್ಕೆ ಅನುಮತಿ ಪಡೆದರು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಹೊಸ ಕಟ್ಟಡಕ್ಕೆ ಅನುಮತಿ ಪಡೆದರು. ಆದರೆ, ಆಗಲೇ ಅಲ್ಲಿ school ನಡೆಯುತ್ತಿತ್ತು. ಮದರಸಾ ನಡೆಯುತ್ತಿತ್ತು, school ನಡೆಯುತ್ತಿತ್ತು. ಆವಾಗ ಇವರಿಗೆ ಇದರ ಬಗ್ಗೆ ವಿವೇಚನೆ ಇರಲಿಲ್ಲವೇ? ಇವರು ಹೊಸ ಕಟ್ಟಡವನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡಿದಾಗ ಅದರ ನ್ಯೂನತೆಗಳ ಬಗ್ಗೆ ಪ್ರಸ್ತಾಪ ಮಾಡಿ ಸನ್ಮಾನ್ಯ D.C. ಯವರು ಅದಕ್ಕೆ ತಡೆಯಾಜ್ಞೆಯನ್ನು ನೀಡುವುದಾದರೆ ಕಾನೂನಿನ ಚೌಕಟ್ಟಿನ ಪರಿಮಿತಿಯನ್ನು ಅದರಲ್ಲಿರತಕ್ಕಂಥ ಅವ್ಯವಸ್ಥೆಯ ಬಗ್ಗೆ ನಾವು ಇವತ್ತು ಚಿಂತನೆಯನ್ನು ಮಾಡಬೇಕಾಗಿದೆ. ಜಿಲ್ಲಾಡಳಿತ ವ್ಯವಸ್ಥೆ ಸರಿಯಾದ, ಸಮರ್ಪಕವಾದ ರೀತಿಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿದ್ದರೆ ಬಹುಶ: ಇಂಥ ಸೂಕ್ಷ್ಮವಾದ ವಿಚಾರಗಳು ಇಂಥ ಒಂದು ಮಟ್ಟಕ್ಕೆ ಹೋಗುತ್ತಿರಲಿಲ್ಲವೆಂದು ನಾವೆಲ್ಲ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ, ಅವರು ಕೊಟ್ಟಂಥ ಸಂದರ್ಭದಲ್ಲಿ ಅವರು ಹೊಸ ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಿದರು. ಹೊಸ ಕಟ್ಟಡ ಕಟ್ಟುವುದಕ್ಕೆ ಪ್ರಾರಂಭ ಮಾಡಿದ ತಕ್ಷಣ ಆವತ್ತು ಹಿಂದೂ ಸಂಘಟನೆಗೆ ಒಂದು ರೀತಿಯಲ್ಲಿ ಮುಸ್ಲಿಂ ಕಟ್ಟಡ ಪ್ರಾರಂಭವಾಗುತ್ತದೆ ಎನ್ನುವ ಭಾವನೆ ಬಂತು ಹಿಂದೆ ಗೊತ್ತಿರಲಿಲ್ಲವೇ? ಅಲ್ಲಿ ನಡೆಯುತ್ತಿರುವುದು ಮುಸ್ಲಿಂ ಸಮಾಜದ school, ಮದರಸಾ ಎನ್ನುವ ಭಾವನೆ ಆವತ್ತು ಇರಲಿಲ್ಲವೇ? ಆವತ್ತೇ ಮತ್ತೆ ಏಕೆ ಅಲ್ಲಿಗೆ ಹೋಗಿ ಹುಲಿಗೆಮ್ಮ ಸಂಘದವರು ಅಲ್ಲಿ ಕಟ್ಟಲಿಕ್ಕೆ objection ಮಾಡುತ್ತೇವೆ ಎಂದು ಹೇಳುವ ಭಾವನೆ ಏಕೆ ಬಂತು? ಹುಲಿಗೆಮ್ಮ ದೇವಸ್ಥಾನದ ಟ್ರಸ್ಟ್‌ನವರು ಹೋಗಿ ಅದನ್ನು ನಿಲ್ಲಿಸುವ ವ್ಯವಸ್ಥೆಗೆ ಏಕೆ ಹೋದರು? ಇವೆಲ್ಲಾ ಅನುಮಾನಗಳ ಹುತ್ತ ಬೆಳೆಯುತ್ತದೆ. ಯಾವ್ಯಾವ backing ಇರುತ್ತವೆ, ಯಾವ ಉದ್ದೇಶಕ್ಕೋಸ್ಕರ ಮಾಡುತ್ತಾರೆ? ರಾಜ್ಯದ, ದೇಶದ ನೆಮ್ಮದಿಯನ್ನು ಹಾಳುಮಾಡಬೇಕೆನ್ನುವ ಭಾವನೆಯಿಂದಲೇ ಇರುವ ಕೆಲವೊಂದು ಸಂಘಟನೆಗಳು ಈ ಪ್ರವೃತ್ತಿಗೆ ಕೈ ಹಾಕುತ್ತವೆ. ಆ ರೀತಿ ಕೈಹಾಕಿದ ಸಂದರ್ಭದಲ್ಲಿ ಆಗತಕ್ಕಂಥ ಅನಾಹುತಗಳಿಂದ ಮೂರು ಜನ ಅಮಾಯಕರು ಬಲಿಯಾಗುತ್ತಾರೆ.

4ನೇ ತಾರೀಕಿನ ಘಟನೆ ನಡೆದ ಮೇಲೆ ಮುತಾಲಿಕ್‌ರವರು ಶ್ರೀರಾಮಸೇನೆ, ಈ ರಾಜ್ಯದಲ್ಲಿ ಅದು ಬಿಜೆಪಿಯವರ ಸಂಘಟನೆಗೆ ಒಳಪಡುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ, ಅವರ ಭಾಷಣದ ವೈಖರಿ ಇದೆಯಲ್ಲಾ, ಅದು ಯಾವ ಮಹಾತ್ಮಗಾಂಧೀಜಿ ಈ ರಾಷ್ಟ್ರ ಹಿಂದೂ, ಮುಸಲ್ಮಾನ್, ಕ್ರೈಸ್ತರು ಒಂದೇ ಎನ್ನುವ ಗೀತೆಯನ್ನು ಹಾಡಿದ್ದರು, ಅದರ ವಿರುದ್ಧವಾದಂಥ, ಪ್ರಚೋದನಕಾರಿಯಾದ, ನಿಜವಾಗಿಯೂ ಈ ದೇಶದ ನೆಮ್ಮದಿಯನ್ನು ಹಾಳು ಮಾಡುವ ಭಾವನೆಯಿಮದ ಬಹಳ ವ್ಯಕ್ತಿಗತವಾದ ಮೂಲವಾದವನ್ನು ಸೃಷ್ಟಿಮಾಡುವ ಭಾವನೆಯನ್ನು ಆಧಾರವನ್ನಿಟ್ಟುಕೊಂಡಿರುವ ಭಾಷಣವನ್ನು ಅವರು ಮಾಡುತ್ತಾರೆ. ನಾನು ಅನೇಕ ಸಲ ಕೇಳಿದ್ದೇನೆ. ಆ ಭಾವನೆಯಿಂದ ಅವರು ಅಲ್ಲಿಗೆ ಹೋದರು. ಅವರನ್ನು ಏಕೆ ಅಲ್ಲಿಗೆ ಹೋಗಲು ಬಿಟ್ಟರು? ಇಂಥ ಒಂದು ಸಂದಿಗ್ಧ ವಾತಾವರಣವಿರುವ ಸನ್ನಿವೇಶದಲ್ಲಿ ಇಂತ ವಿಚಿತ್ರಕಾರವಾದ ಭಾವನೆಗಳಿರುವ ವ್ಯಕ್ತಿಗಳನ್ನು ಅಲ್ಲಿಗೆ ಬಿಡಬಾರದೆನ್ನುವ ಭಾವನೆ ಗೃಹ ಇಲಾಖೆಯವರಿಗೆ, ಪೊಲೀಸ್ ಇಲಾಖೆಯವರಿಗೆ ಗೊತ್ತಾಗಬಾರದೇ? ಅಲ್ಪಸಂಖ್ಯಾತರ ಭಾವನೆಗಳನ್ನು ಕೆರಳಿಸಬೇಕಾದರೆ ಸರ್ಕಾರವನ್ನು ನಡೆಸುವವರು ಅದರ ರೀತಿನೀತಿಗಳನ್ನು, ಆ ನಡೆದಂಥ ಘಟನೆಯ ವಿಚಾರಣೆ, ಅಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಸಮರ್ಪಕವಾಗಿಲ್ಲದಿದ್ದ ಸಂದರ್ಭದಲ್ಲಿ ಕೆಲವೊಮ್ಮೆ ನಾವೇನು ಈ ರಾಜ್ಯದಲ್ಲಿ ವಾಸ ಮಾಡುತ್ತಿರುವುದು ತಪ್ಪೇ? ಎನಿಸುತ್ತದೆ. ನಮ್ಮ ಭಾವನೆಗಳು ಏನಾದವು ಎನ್ನುವ ರೀತಿಗಳನ್ನು ಆಲೋಚನೆ ಮಾಡಿದಾಗ ಕೆಲವೊಂದು ಸಂದರ್ಭದಲ್ಲಿ ಅಹಿತಕರ ಘಟನೆಗಳಿಗೆ ನಾಂದಿಯಾಗುತ್ತದೆ. ಅದಕ್ಕೋಸ್ಕರವಾಗಿ ಆವತ್ತಿನ ದಿವಸ ಏನು ಘಟನೆ ನಡೆಯಿತು ಆ ಘಟನೆ ನಡೆದ ಸಂದರ್ಭದಲ್ಲಿ 144 section ಇದ್ದರೂ ಕೂಡ ಶ್ರೀರಾಮಸೇನೆಯವರು ಅಲ್ಲೆಲ್ಲ ಹೇಳುತ್ತಾರೆ. ಅಲ್ಲಿ ನಡೆಸಿದಂಥವರು ಇಲ್ಲಿ ನಮ್ಮ ಬಿಜೆಪಿ ನಾಯಕರು, ಅಲ್ಲ, ರಾಮಸೇನೆಯವರು ನಡೆಸಿಕೊಂಡರು, ಯಾರೋ ನಡೆಸಿಕೊಂಡರು ಎಂದು ಹೇಳುತ್ತಾರೆ. ಅಲ್ಲ, ಅಲ್ಲಿ ನಡೆಸಿದಂಥವರು ಆ 144 ನೇ ವಿಧಿಯನ್ನು ವಿರೋಧ ಮಾಡಿ, ಪ್ರತಿಭಟನೆ ಮಾಡಿ ಮೈಸೂರನ್ನು ಬಂದ್ ಮಾಡಿಸಿದಂಥವರು ಬಿಜೆಪಿಯ ಮುಖಂಡರು. ಇದನ್ನು ನಮ್ಮ ವಿರೊಧ ಪಕ್ಷದ ನಾಯಕರು ಹೇಳಲಿಲ್ಲ. ಆವತ್ತು ಸಭೆ ನಡೆಸಿ ಬಂದ್‌ಗೆ ಕರೆ ಕೊಟ್ಟು ಕಾನೂನಿಗೆ ವಿರುದ್ಧವಾದ ಕೆಲಸವನ್ನು ಮಾಡಿದರು. ಅದೇ ರೀತಿ press conference ನಡೆಸಿ ಹೊರಬರಬೇಕಾದರೆ popular front ನ ಮುಖಂಡರನ್ನು ನೀವು arrest ಮಾಡಿದಾಗ ಅವರನ್ನು ಬಿಡುಗಡೆ ಮಾಡಬೇಕೆಂದು ಜೈಲುಭರೋ ಕಾರ್ಯಕ್ರಮವನ್ನು ಅವರು 144ನೇ ವಿಧಿಯನ್ನು ಧಿಕ್ಕರಿಸಿ ಮಾಡಿದ ಸಂದರ್ಭದಲ್ಲಿ ಆ 200 ಜನರ ಮೇಲೆ ಕೇಸ್ ಹಾಕಿದ್ದೀರಿ. ಈ ರೀತಿ ತಾರತಮ್ಯ ಮಾಡಿದ ಸಂದರ್ಭದಲ್ಲಿ ಯಾವುದಾದರೂ ಸಮುದಾಯಗಳಿಗೆ ಸರ್ಕಾರದಲ್ಲಿರುವ ಭದ್ರತೆ ಬಗ್ಗೆ ಅನುಮಾನ ಬಂದಾಗ ಆ ರೀತಿ ನಡೆಯುತ್ತದೆ. ಆವತ್ತಿನ ದಿವಸ ಆ ಒಂದು ಭಾವನೆ

ಮೂಡಿ ಇಂಥ ಅಹಿತಕರ ಘಟನೆ ನಡೆಯಲಿಕ್ಕೆ ಕಾರಣವಾಗುತ್ತದೆ. ಇಂಥ ಅನೇಕ ನಿದರ್ಶನಗಳನ್ನು ನಾವು ನೋಡಿದ್ದೇವೆ. ಈ ರೀತಿ ಆಗುವುದು ಬೇಡ. ಈ ರಾಜ್ಯದಲ್ಲಿ ನೆಮ್ಮದಿ ವಾತಾವರಣ ಸೃಷ್ಟಿಯಾಗಬೇಕಾದರೆ, ಮೊದಲು ಪೋಲೀಸ್ ಇಲಾಖೆಯಲ್ಲಿ 3 ತಿಂಗಳಿಗೊಮ್ಮೆ 6 ತಿಂಗಳಿಗೊಮ್ಮೆ transfer ಮಾಡುವ ಪ್ರವೃತ್ತಿಯನ್ನು ನಿಮ್ಮ ಸರ್ಕಾರ ಇಟ್ಟುಕೊಂಡಿದೆ. ಅದನು ಬಿಡಬೇಕು. ನಾನು ನನ್ನ ಕ್ಷೇತ್ರದ ಬಾಣಾವರ ಪೋಲೀಸ್ ಠಾಣೆಯಲ್ಲಿಯ ಒಂದು ಉದಾಹರಣೆ ಕೊಡುತ್ತೇನೆ. ಒಬ್ಬರು PSI ಇರುತ್ತಾರೆ.

ಉಪಾಧ್ಯಕ್ಷರು: ಮೈಸೂರು ಘಟನೆ ಬಗ್ಗೆ ಮಾತ್ರ ಮಾಡನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: Bogus case ಹಾಕಿದ್ದಾರೆಂದು ಅವರ ಮೇಲೆ enquiry fix ಆಗಿದೆ. ಇನ್ನೂ ಅವರ ಮೇಲೆ enquiry ಬಾಕಿ ಇದೆ. ನೀವು ಗೃಹ ಮಂತ್ರಿಗಳಿಗೆ ಗೊತ್ತಿಲ್ಲದ ಹಾಗೆ ಅಲ್ಲಿಗೆ transfer ಮಾಡುತ್ತೀರಿ. ಇದು ಆಡಳಿತ ನಡೆಸುವ ರೀತಿಯೇ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ಅಲ್ಲಿ ಏನಾದರೂ ಅರಾಜಕತೆ ಆದರೆ, ಕೆಟ್ಟ ಪ್ರವೃತ್ತಿ ಬೆಳೆದರೆ ಅದಕ್ಕೆ ಕಾರಣಕರ್ತರು ಯಾರು? ಅಲ್ಲಿಯ ಶಾಸಕರನ್ನು ಗುರಿ ಮಾಡುವುದೇ? ಈ ರಾಜ್ಯದಲ್ಲಿ ಆಡಳಿತದ ದಕ್ಷತೆ ಹೆಚ್ಚಿದೆ ಎನ್ನುವುದಾದರೆ ಪೋಲೀಸ್ ಇಲಾಖೆಯ ಆಡಳಿತ ವ್ಯವಸ್ಥೆ ಸರಿ ಇರಬೇಕು. ಅವರಿಗೆ ಭದ್ರತೆ ಇಲ್ಲ. ಉತ್ತಮವಾಗಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಕೇವಲ 3 ತಿಂಗಳಿಗೆ 6 ತಿಂಗಳಿಗೆ ವರ್ಗಾವಣೆ ಮಾಡುವುದಾದರೆ ಈ ದೇಶದಲ್ಲಿ ಸುಭದ್ರವಾದ ಆಡಳಿತ ಕೊಡಲಿಕ್ಕೆ ಸಾಧ್ಯತೆ ಇದೆಯೇ? ಯಾವ ರೀತಿ ಮಾಡಲಿಕ್ಕೆ ಸಾಧ್ಯ ಇದೆ? ಇಂಥ ವ್ಯವಸ್ಥೆಗೆ ಮಾನ್ಯ ಮುಖ್ಯಮಂತ್ರಿಯವರು ಕಡಿವಾಣ ಹಾಕಬೇಕು. ರಾಜ್ಯದಲ್ಲಿ ಸುವ್ಯವಸ್ಥಿತ ಆಡಳಿತವನ್ನು ಕೊಡಬೇಕೆನ್ನುವ ಭಾವನೆ ತಮಗಿದ್ದರೆ ಬೇರೆ ಯಾವ ಇಲಾಖೆಯವರನ್ನಾದರೂ transfer ಮಾಡಿಕೊಳ್ಳಿ, ಆದರೆ, ಪೋಲೀಸ್ ಇಲಾಖೆಯಲ್ಲಿ ಒಂದು ವರ್ಷ, ಎರಡು ವರ್ಷಗಳಿಗೆ transfer ಮಾಡುವುದಕ್ಕೆ ಕಡಿವಾಣ ಹಾಕಬೇಕು. ಆ ಘಟನೆ ನಡೆದ ವ್ಯಾಪ್ತಿಯ ಪೋಲೀಸ್ ಠಾಣೆಯ ಪೋಲೀಸ್ ಅಧಿಕಾರಿಗಳನ್ನು ಅಲ್ಲಿಯೇ transfer ಮಾಡದೆ ಇರಿಸಿದ್ದರೆ ಅವರಿಗೆ ಆ ಕೇಸ್‌ನ ಮಹತ್ವ ಗೊತ್ತಿರುತ್ತಿತ್ತು. ಅವತ್ತು ಅಲ್ಲಿಂದ ಅವರು ಆ ಪೋಲೀಸ್ ವ್ಯಾನ್‌ಗಳನ್ನು ತೆಗೆಯುತ್ತಿರಲಿಲ್ಲ. police van ಗಳನ್ನು ತೆಗೆಯದೇ ಇದ್ದಿದ್ದರೆ ಅಲ್ಲಿ ಅಂದು ಹಂದಿ ಮಾಂಸ ಬೀಳುತ್ತಿರಲಿಲ್ಲ. ಆ ಘಟನೆ ನಡೆಯುತ್ತಿರಲಿಲ್ಲ. ಇವೆಲ್ಲವನ್ನೂ ಸೂಕ್ಷ್ಮವಾಗಿ ಅರಿಯುವ ಪೋಲೀಸ್ ಅಧಿಕಾರಿಗಳು ಅಲ್ಲಿ ಇರಬೇಕಾಗಿತ್ತು. ಒಂದೆರಡು ವರ್ಷವಾದರೂ ಆ ಸ್ಥಳದಲ್ಲಿಯೇ ಇರಿಸುವ ಒಂದು ಭಾವನೆ, ಪ್ರವೃತ್ತಿಯನ್ನು ಬೆಳೆಸಿಕೊಳ್ಳಿ. PSI, CI level ನವರನ್ನಾದರೂ MLA ಗಳು ಹೇಳಿದವರನ್ನು ಹಾಕುವುದಕ್ಕೆ ಪ್ರಯತ್ನಪಡಿ. ವಿರೋಧಪಕ್ಷದವರೆಂದು

ಅವರನ್ನು ಕಡೆಗಣಿಸಿ ನಿಮಗೆ ಬೇಕಾದವರನ್ನು ನೀವು ನೇಮಿಸಿಕೊಂಡರೆ ಆ ಶಾಸಕನಿಗೆ ಮತ್ತು ಅಲ್ಲಿಯ sub inspector ಗೆ ಸಂಬಂಧ ಚೆನ್ನಾಗಿಲ್ಲದಿದ್ದರೆ ನಿಮ್ಮ ಸರ್ಕಾರಕ್ಕ ಒಳ್ಳೆಯ ಹೆಸರು ಬರುತ್ತದೆಯೇ? ಒಳ್ಳೆಯ ಹೆಸರು ಬರಬೇಕಾದರೆ ದಯವಿಟ್ಟು ಆಯಾ ತಾಲ್ಲೂಕಿನ ಆಡಳಿತ ಯಂತ್ರದಲ್ಲಿ ಬೇಕಾಗಿರುವ ಸಾಮರಸ್ಯ ಅಧಿಕಾರಿಗಳು ಮತ್ತು ಶಾಸಕರ ಮಧ್ಯೆ ಇದ್ದಾಗ ಮಾತ್ರ ಸಾಧ್ಯ. ಅದನ್ನೇನಾದರೂ ನೀವು ಉಲ್ಟಾ ಮಾಡಿದರೆ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಖಡಾಖಂಡಿತವಾಗಿ ಬರುತ್ತದೆ. ವಿರೋಧ ಪಕ್ಷದ ನಾಯಕರು, ಇತರೆ ಎಲ್ಲಾ ನಾಯಕರು ಒತ್ತಾಯ ಮಾಡಿದ ಹಾಗೆ ನಾನು ನ್ಯಾಯಾಂಗ ತನಿಖೆಯಾಗಬೇಕೆಂದು ಪ್ರತಿಪಾದನೆ ಮಾಡುತ್ತೇನೆ. ಈ ರಾಜ್ಯದಲ್ಲಿ ಎಲ್ಲಾ ಜನಾಂಗದವರು, ಕೋಮಿನವರು ಒಟ್ಟಾಗಿ ಹೋಗಬೇಕು, ಶಾಂತಿಯ ನೆಲಯಲ್ಲಿ ಬಾಳಬೇಕೆನ್ನುವ ಭಾವನೆ ಏನಿದೆ ಅದಕ್ಕೆ ಸರ್ಕಾರ ಮತ್ತೊಮ್ಮೆ ಎಲ್ಲಾ ರೀತಿಯ ಸಹಕಾರ ಕೊಡಬೇಕು. ಆ ಘಟನೆಯನ್ನು ತಪ್ಪತಸ್ಥರು ಯಾರಿದ್ದಾರೆ ಅವರನ್ನು ಶಿಕ್ಷಿಸಬೇಕು ಮತ್ತು ನ್ಯಾಯಾಂಗ ತನಿಖೆ ಆಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಖಮರುಲ್ ಇಸ್ಲಾಂ(ಗುಲಬರ್ಗಾ ಉತ್ತರ): ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿ ನಡೆದ ಕೊಮು ಗಲಭೆ ಬಗ್ಗೆ ಈ ಸದನದಲ್ಲಿ ಸಾಕಷ್ಟು discussion ಆಯಿತು. ನಮ್ಮ ವಿರೋಧ ಪಕ್ಷದ ನಾಯಕರು, ಉಪ ನಾಯಕರು, ಸದಸ್ಯರು ಸಾಕಷ್ಟು ಮಾತನಾಡಿದ್ದಾರೆ. ನಾನು ಹೆಚ್ಚು ಮಾತನಾಡುವುದಿಲ್ಲ. ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಯಾರು ಈ ತರಹದ pig meat ಹಾಕಿದ್ದಾರೆ ಅವರು guilty. ನಮ್ಮ ಪ್ರಕಾರ ಯಾರು conspirator ಇದ್ದಾರೆ, who is a conspirator and instigator he is more guilty. Suppose, if we catch the person whodid the guilt and punish him, then the crime will not be over. We have to goto the deep root as to who is the conspirator, ಅವರು ಏಕೆ ಹಾಕಿದ್ದಾರೆ? Who has made his mind to do that criminal act? ಅದು ಬಹಳ ಮಹತ್ವದ್ದು. ನಮ್ಮ ರೋಷನ್ ಬೇಗ್ ರವರು ಹೇಳಿದರು, ಈ ದೇಶದಲ್ಲಿ, ಕರ್ನಾಟಕದಲ್ಲಿ ಇದು ಮೊದಲನೆಯ ಕೋಮು ಗಲಭೆ ಅಲ್ಲ ಸಾವಿರಾರು ಗಲಭೆ ಆಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ ಈ BJP ಸರ್ಕಾರ ಬಂದ ಮೇಲೆ ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದ ಮೇಲೆ ಈ worship place ನಲ್ಲಿ pig meat ಹಾಕಿದ್ದು ಇದು ಮೊದಲನೇ incident ಅಲ್ಲ, ಇದು 4ನೇ incident. ಮಡಿಕೇರಿಯಲ್ಲಿ ಅದೇ ತರಹ ಆಗಿದೆ, ಹೆಬ್ಬಾಳದಲ್ಲಿ ಅದೇ ತರಹ ಆಗಿದೆ, ಮುನಿರೆಡ್ಡಿಪಾಳ್ಯದಲ್ಲಿ ಅದೇ ತರಹ ಆಗಿದೆ, ಇಲ್ಲಿಯೂ ಅದೇ ತರಹ

ಆಗಿದೆ. ರೋಷನ್ ಬೇಗ್‌ರವರು ಒಂದು part ಹೇಳಿದ್ದಾರೆ. ಆ timeನಲ್ಲಿ ಹೆಬ್ಬಾಳದಲ್ಲಿ ಒಳ್ಳೆಯ officer ಬಂದು clean ಮಾಡಿದರು, ಗಲಭೆ ಆಗಲಿಲ್ಲ. ಇಲ್ಲಿ ಮೂರು ಜನ have been killed and many have been injured. Innocent people have been injured. There one officer has already brought peace by his act, but still when he went into the deep not and held 3 persons belonging to Rama Sena, as per the version what Mr.Roshan Baig has said, immediately they have been protected. The main gult has not come out. Why we are all demanding? Why ವಿರೋಧ ಪಕ್ಷದವರು said that there should be judicial enquiry? judicial enquiry ಎಂದರೆ truth should come out, whether it is a Progressive Democratic Forum, Popular Front of India, Rama Sena or Muthalik, Desai, who ever it may be. Because in all the papers, national paperನಲ್ಲಿ ಈ ಸಮಸ್ಯೆ ಬಗ್ಗೆ, ಈ ಹೆಸರು, ಈ ಮಾಹಿತಿ ಎಲ್ಲಾ ಇದೆ. That is why to bring the, truth out judicial enquiry must be there. In my opinion, if the Government has not agreed to conduct the judicial enquiry ನಮಗೆ feeling ಎನೆಂದರೆ truth will never come out. Place of worship is important. Whether it is Muslim or Hindu. Now, I tell you the reason. Why pig meat has been put/thrown in the mosque, it is not spontaneous. If it is spontaneous one can understand. This is a continuous process. ಮಾನ್ಯ ತನ್ವೀರ್ ರವರು, ಗೌಡರವರು ಹೇಳಿದ್ದಾರೆ construction permission is already there, whole building was there, Alima Sadia, new construction should not come out, that is the intention behind it. To divert the situation, to communalise the situation and see that the actual things should not come out, this has happened. Now Sir, I tell you Roshan Baigರವರು ವಕ್ಫ್ ಮತ್ತು ಹಜ್ ಸಚಿವರಾಗಿದ್ದಾಗ I was there. Since last 10 years we are trying to bring Haj House in Karnataka. We wanted this Government to take the credit. We appreciate if the BJP Government construct the house. Because the issue was that we were not getting the land. We were trying, but during the Governor period, the Hon'ble Governor has registered it is in the

name of the Haj Committee. 2 ½ crores of Rupess of Government has been given and the land was registered in the name of the Haj Committee, which is a Government Committee. Hon'ble Wakf minister has announced that we can construct it within one year. Thank you very much. ಅಲ್ಲಿ same situation ಬಂದಿತು. There was no case, a case was filed there also. Same type of incident. We can expect to do a good work. Sir, I am coming from Gulbarga. I can understand. In 1978ರಿಂದ ನಾನು ಈ ಸದನಕ್ಕೆ ಬಂದಿದ್ದೇನೆ. Muslim League, National League, Janatha Dal, and for the last 10 years I am a congress man. ಈ Houseನಲ್ಲಿ ಸಾಕಷ್ಟು ಭಾಷಣ ಮಾಡಿದ್ದೇನೆ. I have seen so many things. Gulbarga was a place of communal tension With proud I can say in this House that after 1978 when I became MLA, until todayexcept 6th December 1992, not a single ಕೋಮು ಗಲಭೆ ನಮ್ಮ cityನಲ್ಲಿ ಆಗಿಲ್ಲ ಏಕೆ. We are having a procession of Lords, Basavanna procession ನಡೆಯುತ್ತದೆ, Mahaveer procession ನಡೆಯುತ್ತದೆ, ಗಣೇಶ ಹಬ್ಬ – ಈದ್ ಮಿಲಾದ್ ಒಂದೇ ದಿವಸ ಬಂದಿದೆ, last year and previous year Holi and ಮತ್ತು Id-Milad ಒಂದೇ ದಿವಸ ಬಂದಿತ್ತು. Police recordನಲ್ಲಿ ಇದೆ. We sat there, ourbrothers supported and we did it in such a way that procession was going on, Holi was celebrated People who were on colour they garlanded me. I was ready. This we can understand, because there is a definite link and there was a peace committee. We sit together and if there is a spontaneous act we can understand. This violence is not spontaneous. There is a conspiracy behind this and instigation against this. so, as demanded by Hon'ble Leader of the Opposition and all the members judicial enquiry is very much essential. ತಮ್ಮ ಮುಖಾಂತರ ನಾನು ಈ ಸದನದಲ್ಲಿ demand ಮಾಡುತ್ತಿದ್ದೇನೆ. Judicial enquiry ಮಾಡಲೇ ಬೇಕು ಮತ್ತು those who are innocent should be released immediately and those who have been affected have been given relief so that peace is to be maintained. We are all peace loving people. Our state is a peace loving state. Let the Government

have a good name. If the government comes forward with the judicial enquiry a good message will go. If a judicial enquiry is not there then again a feeling that there is a conspiracy will be there. To hide the truth there may be same conspiracy whether Musllim or Hindu a place of worship should not be utilized for these purposes. With these few words I will conclude.

ಡಾ: ಹೆಚ್.ಸಿ.ಮಹದೇವಪ್ಪ: ಸನ್ಮಾನ್ಯ ಸಭಾಧ್ಯಕ್ಷರೇ ಮೈಸೂರಿನಲ್ಲಿ ನಡೆದಂಥ ಕೋಮು ಗಲಭೆ ಹಿನ್ನಲೆಯಲ್ಲಿ ರೂಲ್ 69ರ ಕೆಳಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಹಿರಿಯ ನಾಯಕರು ವ್ಯಾಪಕವಾಗಿ ಚರ್ಚೆ ಮಾಡಿ ಸರ್ಕಾರದ ಗಮನವನ್ನು ಸೆಳೆಯತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಮೈಸೂರು ಭಾರತದ ಭೂಪಟದಲ್ಲಿ ತನ್ನದೇ ಆದ ಸ್ಥಾನವನ್ನು ಅಲಂಕರಿಸಿದೆ. ಮೈಸೂರನ್ನು ವಿಶ್ವದ ಎಲ್ಲಾ ರಾಷ್ಟ್ರಗಳು ನೋಡತಕ್ಕ ರೀತಿಗೆ, ನಡೆದುಕೊಳ್ಳತಕ್ಕ ರೀತಿಗೆ ಮೂಲ ಕಾರಣ ನಾಲ್ವಡಿ ಕೃಷ್ಣರಾಜರ ಆಡಳಿತ. ಅಂದಿನ ಸಂದರ್ಭದಲ್ಲಿ ಅವರ ಗೆಳಯರಾಗಿದ್ದಂತಹ ಸರ್ ಮಿರ್ಜಾ ಇಸ್ಮಾಯಿಲ್ ರವರು ಮತ್ತು ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ರವರನ್ನು ಹಾಗೂ ಅವರ ಆಡಳಿತವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಅಂದಿನ ಸಂದರ್ಭದಲ್ಲಿ ಅವರ ಗೆಳೆಯರಾಗಿದ್ದಂಥ ಸರ್ ಮಿರ್ಜಾ ಇಸ್ಮಾಯಿಲ್‌ರವರು ಸನ್ಮಾನ್ಯ ವಿಶ್ವೇಶ್ವರಯ್ಯನವರು ದಿವಾನರಾಗಿ ಕೆಲಸ ಮಾಡುತ್ತಿದ್ದಂಥ ಸಂದರ್ಭದಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರವರ ಆಡಳಿತವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಅವರಿಗೆ ಇದ್ದಂಥ ಜನ ಸಂಪರ್ಕ, ಮಾನವೀಯ ಮೌಲ್ಯಗಳು ಮತ್ತು ಸಮಸ್ಯೆಗೆ ಸ್ಪಂದಿಸತಕ್ಕಂಥ ಗುಣ ಮತ್ತು ಆಡಳಿತದ ಕೌಶಲ್ಯಗಳು ಇಡೀ ರಾಜ್ಯದ ಅಭಿವೃದ್ಧಿಗೆ ಮತ್ತು ವಿಶ್ವದ ನಾಯಕರ ಗಮನವನ್ನು ಸೆಳೆಯುವುದಕ್ಕೆ ಪ್ರೇರೇಪಣೆ ಆಗಿತ್ತು. ಈ ಹಿನ್ನಲೆಯಲ್ಲಿ 1945ನೇ ಇಸವಿಯಲ್ಲಿ ಅಮೇರಿಕಾದ ಪ್ರತಿನಿಧಿ ಅಂದಿನ ಮೈಸೂರು ಸರ್ಕಾರದ ಸೆಕ್ರೆಟರಿಯವರಿಗೆ ಪತ್ರ ಬರೆದು ನಾನು ಯೂರೋಪ್ ಮತ್ತು ಆಸ್ಟ್ರೇಲಿಯಾ ದೇಶದಲ್ಲಿ ಅನೇಕ ಜನರನ್ನು ನೋಡಿದ್ದೇನೆ. ಆದರೆ, ವಿಶ್ವೇಶ್ವರಯ್ಯನಂಥ ದೊಡ್ಡ ಆಡಳಿತಗಾರರನ್ನು ಮತ್ತು ಬುದ್ದಿಶಾಲಿ ವ್ಯಕ್ತಿಯನ್ನು ನೋಡಿರಲಿಲ್ಲವೆಂದು ಪತ್ರದಲ್ಲಿ ತಿಳಿಸಿದ್ದರು. ಮಾನ್ಯ ಸಿ.ವಿ.ರಾಮನ್‌ರವರು ಒಂದು ಕಡೆ ಏನು ಹೇಳಿದ್ದಾರೆಂದರೆ, ಇಸ್ಮಾಯಿಲ್‌ರವರು ಗಾಂಧೀಜಿಯವರಿಗೆ ಆಡಳಿತದ ಮುಖಾಂತರ ಪ್ರೇರೇಪಣೆ ಮಾಡಿ ರಾಮರಾಜ್ಯದ ಕನಸನ್ನು ಗಾಂಧೀಜಿಯವರಿಗೆ ಅವರೇ ಕೊಟ್ಟರೆಂದು ಮತ್ತು ಗಾಂಧೀಜಿಯವರು ರಾಮರಾಜ್ಯವೆಂದು ಘೋಷಣೆ ಮಾಡುವುದಕ್ಕೆ ಇಸ್ಮಾಯಿಲ್‌ರವರೇ ಕಾರಣರೆಂದು ಹೇಳಿದ್ದಾರೆ. ಹೀಗೆ ಅನೇಕ ಸುಧಾರಣೆಗಳನ್ನು ಮಾಡುತ್ತಾ ರಾಜ್ಯದ ಅಭಿವೃದ್ಧಿಯನ್ನು ನಿಷ್ಪಕ್ಷಪಾತವಾದಂಥ ಆಡಳಿತದ ಕೌಶಲ್ಯದ ಮುಖಾಂತರ ಇಡೀ ಭಾರತ ದೇಶಕ್ಕೆ

ಅವರು ಉದಾಹರಣೆಯಾಗಿ ನಿಂತಿದ್ದಾರೆ. ಅಂಥ ಒಂದು ಪ್ರದೇಶದಲ್ಲಿ ಪದೇಪದೆ ನಡೆಯತಕ್ಕಂಥ ಕೋಮುಗಲಭೆಗಳು ನಮ್ಮ ಎಲ್ಲಾ ಆಡಳಿತವನ್ನು ನಮ್ಮ ನಡೆವಳಿಕೆಗಳನ್ನು ಹಾಗೂ ಸೌಹಾರ್ದತೆ ಮತ್ತು ಸಾಮರಸ್ಯವನ್ನು ಕದಡತಕ್ಕಂಥ ಶಕ್ತಿಗಳು ಇವತ್ತು ಬಲಾಢ್ಯರಾಗುವುದಕ್ಕೆ ನಮ್ಮ ಆಡಳಿತ ಮತ್ತು ರಾಜಕೀಯ ವ್ಯವಸ್ಥೆ ಅವಕಾಶವನ್ನು ಕೊಡುತ್ತದೆಂದು ನನ್ನ ಮನವಿಯಾಗಿದೆ. 1928ನೇ ಇಸವಿಯಲ್ಲಿ ಸುಲ್ತಾನ್‌ಪೇಟೆಯಲ್ಲಿ ಗಣಪತಿ ಹಬ್ಬದ ಸಂದರ್ಭದಲ್ಲಿ ಆದಂಥ ಕೋಮುಗಲಭೆ ಅಂಥ ಮಹಾನ್ ಮೇಧಾವಿ ಆಡಳಿತಗಾರ ಇದ್ದಂಥ ಸನ್ಮಾನ್ಯ ಇಸ್ಮಾಯಿಲ್‌ರವರ ಹೆಸರಿಗೆ ಮತ್ತು ಅವರ ಆಡಳಿತಕ್ಕೆ ಕಳಂಕವನ್ನು ಉಂಟು ಮಾಡಿತು. ಅ ಘಟನೆಯ ಹಿನ್ನಲೆಯಲ್ಲಿ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ತನಿಖೆ ಮಾಡಿ ಆಡಳಿತ ವೈಫಲ್ಯಗಳನ್ನು ಹೇಳಿದಂಥ ಸಂದರ್ಭದಲ್ಲಿ ಅಂಥ ಒಬ್ಬ ಮೇಧಾವಿ ಆಡಳಿತಗಾರನಾಗಿದ್ದ ಇಸ್ಮಾಯಿಲ್‌ರವರು ಅಂದು ತಲೆತಗ್ಗಿಸತಕ್ಕಂಥ ಅಥವಾ ಆಡಳಿತದಲ್ಲಿ ಮಂಕುಬಡಿಯತಕ್ಕಂಥ ಸಂದರ್ಭ ಒದಗಿ ಬಂತು. ಅಂದು ಈ ಘಟನೆಯ ಹಿನ್ನಲೆಯಲ್ಲಿ ಅವರು ಮಹಾತ್ಮ ಗಾಂಧಿ ಮತ್ತು ನೆಹರುರವರ ಸಂಪರ್ಕದಲ್ಲಿದ್ದರು. ಆ ಘಟನೆಯಾದ ಮೇಲೆ ಅಲ್ಲಿ ನಿಷ್ಪಕ್ಷಪಾತವಾದ ಆಡಳಿತ ಮತ್ತು ಭಯದ ವಾತಾವರಣ ಏನು ಸೃಷ್ಟಿಯಾಯಿತೊ ಆ ಒಂದು ಘಟನೆಯ ಹಿನ್ನಲೆಯಲ್ಲಿ ಕಾಂಗ್ರೆಸ್ ಮೈಸೂರಿನಲ್ಲಿ ಬರುವುದಕ್ಕೆ ಕಾರಣೀಭೂತವಾಯಿತು. ಯಾವುದೇ ಒಂದು ರಾಜಕೀಯವನ್ನು ಕುರಿತು ಅಥವಾ ಬೆರೆಸಿ ಮಾತನಾಡತಕ್ಕಂಥ ಇಚ್ಛೆಯನ್ನು ನಾನು ಹೊಂದಿಲ್ಲ. ಇವತ್ತು ಭಾರತ ದೇಶದಲ್ಲಿ ಸ್ವಾತಂತ್ರ್ಯದ ನಂತರ ಸುಮಾರು 5 ಸಾವಿರ ಕೋಮುಗಲಭೆಗಳು ದೇಶದಲ್ಲಿ ನಡೆದಿವೆ. ಮಹಾತ್ಮ ಗಾಂಧೀಜಿಯವರ ಹೋರಾಟ non-violence ರೀತಿಯಲ್ಲಿತ್ತು. ಅಂದರೆ ಅಸಹಕಾರ ಚಳುವಳಿ ಮುಖಾಂತರ ಇವತ್ತು ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. Non-violence, bloodless movement ಮುಖಾಂತರ ಇಡೀ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. ಆದರೆ, ಇವತ್ತು ಅಸ್ಪೃಶ್ಯತೆ ಮತ್ತು ಕೋಮುವಾದವನ್ನು ಹತ್ತಿಕ್ಕದೆ ಹೋದರೆ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತದೆ. ಭಗತ್‌ಸಿಂಗ್‌ರವರು 14ನೇ ವಯಸ್ಸಿನಲ್ಲಿ ಎರಡು ವಿಷಯಗಳನ್ನು ಹೇಳಿದ್ದಾರೆ. ಅದೇನೆಂದರೆ, ಅಸ್ಪೃಶ್ಯತೆ ಮತ್ತು ಕೋಮುವಾದದ ಬಗ್ಗೆ ಹೇಳಿದ್ದಾರೆ. ಕೋಮುವಾದ ಒಂದು ವರ್ಗದ, ಧರ್ಮದ ಜನರು ತಮ್ಮ ಧರ್ಮದ ಬಗ್ಗೆ ತಮ್ಮ ಬದುಕಿನಬಗ್ಗೆ ಮತ್ತು ತಮ್ಮ ಅಭಿವ್ರದ್ಧಿಯ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಇನ್ನೊಂದು ಧರ್ಮವನ್ನು ಅವಹೇಳನ ಮಾಡತಕ್ಕಂಥ ಪ್ರವೃತ್ತಿಗಳು ಇವತ್ತಿನದಿವಸ ಕೋಮುವಾದಕ್ಕೆ ಎಡೆ ಮಾಡಿಕೊಡುತ್ತಿವೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಆಡಳಿತ ಬದಲಾವಣೆಯಾಗಿದೆ. ಮೈಸೂರಿನಲ್ಲಿ ಮೊನ್ನೆದಿವಸ ನಡೆದ ಘಟನೆ ಮೊದಲಿನೆಯದು ಅಲ್ಲ. 1985 ಮತ್ತು 1987ನೇ ಇಸವಿಯಲ್ಲಿ ದಿವಂಗತ ಬಿ.ರಾಚಯ್ಯನವರು ಗೃಹ ಸಚಿವರಾಗಿದ್ದರು. ಅವರ ಅವಧಿಯಲ್ಲಿ ಒಂದು ಕೋಮುಗಲಭೆ ಆಯಿತು. ಆ ಸಂದರ್ಭದಲ್ಲಿ ಸ್ವತ:

ಬಿ.ರಾಚಯ್ಯನವರು ಲಸ್ಕರ್ ಪೊಲೀಸ್‌ನಲ್ಲಿ ಗೃಹಸಚಿವರಾಗಿ ಕುಳಿತು ಯಾವುದೇ ಜನರು ಮಾತನಡಿದರೆ ತೆಗೆದುಕೊಂಡು ಹೋಗಿ, ಗೃಹಸಚಿವರಾಗಿರುವ ಬಿ.ರಾಚಯ್ಯ ಮಾತನಾಡುತ್ತಿದ್ದೇನೆಂದು ಧೈರ್ಯವನ್ನು ತುಂಬತಕ್ಕಂಥ ಕೆಲಸವನ್ನು ಮಾಡಿದ್ದರು. ಯಾರ್ಯಾರು ದುಷ್ಕರ್ಮಿಗಳಿದ್ದರು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಅಲ್ಲಿ ಕೋಮು ಗಲಭೆಯನ್ನು ಹತ್ತಿಕ್ಕುವಲ್ಲಿ ಪ್ರಮುಖವಾದಂಥ ಕೆಲಸವನ್ನು ಮಾಡಿದ್ದರು. ಇವತ್ತು ಮೈಸೂನಲ್ಲಿ ಪದೇಪದೇ ನಡೆಯುತ್ತಿರುವಂಥ ಕೋಮುಗಲಭೆ ನಮ್ಮ ಎಲ್ಲಾ ಇತಿಹಾಸಕ್ಕೆ ಕಳಂಕವನ್ನು ತರತಕ್ಕಂಥ ಕಾರ್ಯದಲ್ಲಿ ಇವತ್ತಿನದಿವಸ ಕೆಲವು ಶಕ್ತಿಗಳು ಪ್ರಯತ್ನ ಮಾಡುತ್ತಿದ್ದಾವೆ. ಇವುಗಳಲ್ಲಿ K.F.D., peoples Front for India, National Democratic Front ಇರಬಹುದು. ಈ ಎಲ್ಲಾ organizationಗಳು ಮುಸಲ್ಮಾನರ ಹೆಸರಿನಲ್ಲಿವೆ. ಆ ಕಡೆ ಇವರೆಲ್ಲಾ ಇದ್ದಾರೆ. ಈ ಕಡೆ ಎಲ್ಲಾ ರಾಜಕೀಯ ಪಕ್ಷಗಳು ವೈಫಲ್ಯವಾದ ಮೇಲೆ ರಾಜಕೀಯವನ್ನು ತಾನು ಪಡೆಯಬೇಕೆಂಬ ಉದ್ದೇಶವಾಗಿದೆ. ಮತ್ತೆ ಈ ಕಡೆ ಹಿಂದು ಸಂಘಟನೆಗಳು ಮತ್ತು ಭಾರತೀಯ ಜನತಾಪಾರ್ಟಿಯ ಜೊತೆಗೆ ಗುರುತಿಸಿಕೊಂಡಿರುವ ಅನೇಕ ಸಂಘಟನೆಗಳು ರಾಜಕೀಯ ಪಕ್ಷವನ್ನು ಮತ್ತು ಆಡಳಿತವನ್ನು ನಿಯಂತ್ರಣ ಮಾಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಯಾವ ಮೂಲಭೂತ ಶಕ್ತಿಗಳು ಧರ್ಮವನ್ನು ಮುಂದೆ ಮಾಡಿ ಜನಸಾಮಾನ್ಯರ ಬದುಕಿನಲ್ಲಿ ಚೆಲ್ಲಾಟವಾಡತಕ್ಕಂಥ ಮತ್ತು ಶಾಂತಿಯನ್ನು ಕದಡಿ ಸೌಹಾರ್ದತೆಯನ್ನು ಹಾಳು ಮಾಡತಕ್ಕಂಥ ಪ್ರಯತ್ನವೇ ಇವತ್ತು ಮೈಸೂರಿನಲ್ಲಿ ಆಗಿರತಕ್ಕಂಥ ಗಲಭೆಗೆ ಮೂಲ ಕಾರಣವಾಗಿದೆ. ಆದ್ದರಿಂದ, ಯಾರ ಮುಲಾಜಿಗೂ ಒಳಗಾಗದೇ ಸರ್ಕಾರ ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಐಬಿ ಮುಖಾಂಥರ ಅನೇಕ ಇನ್‌ಪುಟ್‌ಗಳನ್ನು ಗೃಹ ಇಲಾಖೆಗೆ ಕೊಟ್ಟಿದೆ. ಉಗ್ರರನ್ನು ಬಂಧಿಸುವುದಕ್ಕೂ ಅವರು ಸಹಾಯ ಮಾಡಿದ್ದಾರೆ. ಅನೇಕ ಇನ್‌ಪುಟ್‌ಗಳು ನಿಮ್ಮ ಇಂಟೆಲಿಜೆನ್ಸಿಗೆ ಕೊಟ್ಟಿದ್ದಾರೆ. ಆದರೆ, ನಿಮ್ಮ ಇಂಟೆಲಿಜೆನ್ಸಿ ಮಾಹಿತಿಯನ್ನು ಕಲೆಕ್ಟ್ ಮಾಡುವುದರಲ್ಲಿ ಮತ್ತು ಫೀಲ್ಡ್ ಲೆವೆಲ್ ವರ್ಕ್ ಮಾಡುವುದರಲ್ಲಿ ಸರ್ಕಾರದ ಗೃಹ ಇಲಾಖೆ ಫೇಲ್ ಆಗಿದೆ. ಯಾವುದೇ ಒಂದು ಘಟನೆ ನಡೆದು ವೈಫಲ್ಯವಾದಾಗ ನಾವು ಪೊಲೀಸ್‌ನವರನ್ನು ಗುರಿ ಮಾಡುತ್ತಿದ್ದೇವೆ. ಆದರೆ, ಪೊಲೀಸ್ ಇಲಾಖೆಯನ್ನು ಸಕ್ಸಸ್ ಮಾಡುವುದು ಹೇಗೆ? ನಿಮ್ಮ ಮುಂದೆ ಧರ್ಮವೀರ ಸಮಿತಿ ವರದಿ ಇದೆ. ಸದರಿ ವರದಿಯನ್ನು ತಾವು ತೆಗೆದುಕೊಂಡು ಓದಬೇಕು. ಇಲ್ಲದಿದ್ದರೆ ಪೊಲೀಸ್ ಇಲಾಖೆಯನ್ನು ಶಕ್ತಿಯುತವಾಗಿ ಮಾಡುವುದಾದರು ಹೇಗೆ? ಇಡೀ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅತ್ಯಂತ ಪ್ರಮುಖವಾದಂಥ ಸಂಗತಿ. ಕೋಮುಸೌಹಾರ್ದತೆ ನಮ್ಮ ಸ್ವಾತಂತ್ರ್ಯ .ಉದ್ದೇಶದ ಮಹತ್ತರವಾದಂಥ ವಿಷಯ. ಆದ್ದರಿಂದ, ಇದನ್ನು ಕಾಪಾಡುವುದರಲ್ಲಿ ರಾಜಕೀಯ ಪಕ್ಷಗಳ ನಡೆ ಮತ್ತು ನಿಲುವುಗಳು ಅತ್ಯಂತ ಸ್ಪಷ್ಟವಾಗಿರಬೇಕಾಗುತ್ತದೆ. ಸರ್ಕಾರ ಬಹಳ ನಿಷ್ಪಕ್ಷಪಾತವಾಗಿ ನಾವು ಜನಸಾಮಾನ್ಯರ

ಪರವಾಗಿದ್ದೇವೆಂಬ ಸಂದೇಶವನ್ನು ಕಳುಹಿಸಬೇಕಾಗುತ್ತದೆ. ತಾವು ತನಿಖೆ ಮಾಡಿದರೆ ಏನಾಗುತ್ತದೆಂಬುದು ಬೇಡ. ಯಾರು ಇಂಥ ಒಂದು ಶಾಂತಿಯನ್ನು ಕದಡತಕ್ಕಂಥ ಪ್ರಯತ್ನವನ್ನು ಮಾಡುತ್ತಿರುವವರ ಬಣ್ಣ ಬಯಲಾಗಬೇಕು. ಅವರ ಬಣ್ಣ ಬಯಲಾಗಬೇಕಾದರೆ ನೀವು ನ್ಯಾಯಾಂಗ ತನಿಖೆಯನ್ನು ಮಾಡಲೇಬೇಕು. ಡಾ: ವಿ.ಎಸ್.ಆಚಾರ್ಯರವರ ಬಗ್ಗೆ ನನಗೆ ವಿಪರೀತ ಗೌರವ ಮತ್ತು ಪ್ರೀತಿ ಇದೆ. ಆದರೆ, ಅವರನ್ನು ಹುಲಿಯ ಮೇಲೆ ಸವಾರಿ ಮಾಡುವುದಕ್ಕೆ ಬಿಟ್ಟಿದ್ದಾರೆ. ಗೃಹ ಇಲಾಖೆ ಎನ್ನುವುದು ಹುಲಿಯ ಮೇಲೆ ಸವಾರಿ ಮಾಡುವಂತಹದ್ದಾಗಿದೆ. ಸವಾರಿಯನ್ನು ಸರಿಯಾಗಿ ಮಾಡಿದರೆ ಸಕ್ಷಸ್ ಆಗುತ್ತೀರಿ. ಸ್ವಲ್ಪ ಎಡವಿದರೆ ನೀವೇ ಹುಲಿ ಬಾಯಿಗೆ ಬಲಿಯಾಗುತ್ತೀರಿ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಗೆ ನೀವು ಸಿಕ್ಕಿಕೊಂಡಿದ್ದೀರಿ. ನಿಮ್ಮ ಬಗ್ಗೆ ನಾವೇನು ಅನುಮಾನವನ್ನು ವ್ಯಕ್ತಮಾಡುವುದಿಲ್ಲ. National Integration Council, National Foundation for Communal harmony. ಇದು Minister of Home ನಲ್ಲಿದೆ. ಇಲ್ಲಿ ಹತೋಟಿಗಳು ಕೈಮೀರಿದಾಗ ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನು ಮತ್ತು ಮುಖಂಡರುಗಳನ್ನು ಜವಾಬ್ದಾರಿಗಳನ್ನಾಗಿ ಮಾಡಬೇಕೆಂದು National Integration Council ಹೇಳಿದೆ. ನಿಮಗೆ ರೆಕಮಂಡೆಷನ್ ಕೂಡ ಮಾಡಿದ್ದಾರೆ. Suggestions have come from various quarters to the Integration Council. ನಿರ್ದಾಕ್ಷಿಣ್ಯವಾಗಿ ಈ ರೀತಿಯ ಕ್ರಮಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಈ ಗುಂಪಿಗೆ, ಆ ಗುಂಪಿಗೆ ಸೇರಿರಬಹುದು ಅಥವಾ ಈ ಪಾರ್ಟಿ, ಆ ಪಾರ್ಟಿಯ ಬೆಂಬಲಿಗರು ಇರಬಹುದು. ಅದರೆ, ನೀವು ಕ್ರಮ ತೆಗೆದುಕೊಳ್ಳದೇ ಹೋದರೆ, ಒಂದು ದಿನ ನಾವು ಈ ದೇಶವನ್ನು ಕೋಮು ಶಕ್ತಿಗಳ ಕೈಗೆ ಕೊಡಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿ ರಾಜ್ಯಾಂಗವನ್ನು ಮತ್ತು ಕಾನೂನನ್ನು ಮೀರಿ ನಡೆಯತಕ್ಕಂಥ ವ್ಯಕ್ತಿ, ಶಕ್ತಿಗಳಿಗೆ ಅವಕಾಶ ಕೊಡದೇ ರಾಜ್ಯಾಧಿಕಾರದ ಮುಖಾಂತರ ನಿಷ್ಪಕ್ಷಪತವಾದಂಥ ಆಡಳಿತದ ಮುಖಾಂತರ ಇವತ್ತು ಕೋಮು ಶಕ್ತಿಗಳನ್ನು ಹತ್ತಿಕ್ಕಲೇಬೇಕು. ಅಲ್ಲಿರತಕ್ಕಂಥ ಸಾಮಾನ್ಯ ಜನರು ಮುಸಲ್ಮಾನರು, ಹಿಂದುಗಳಿರಲಿ ಅಥವಾ ಯಾರೇ ಇರಲಿ, ಒಟ್ಟಿನಲ್ಲಿ ಸೌಹಾರ್ದತತೆಯಿಂದ ಬದುಕತಕ್ಕಂಥ ವಾತಾವರಣವನ್ನು ಮಾಡಬೇಕು. ಇಂಥ ಒಂದು fundamental forces, they are trying to create colonies of their own. ಇಂಥ ಒಂದು ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಗೃಹ ಮಂತ್ರಿಗಳು ನಿಷ್ಪಕ್ಷಪತವಾದಂಥ ನಿಲುವುಗಳ ಮುಖಾಂಥರ ನಿಮ್ಮ ಪ್ರಾಮಾಣಿಕ ಮತ್ತು ಪಾರದರ್ಶಕ ಆಡಳಿತವನ್ನು ನ್ಯಾಯಾಂಗ ತನಿಖೆಯ ಮೂಲಕ ಸತ್ಯಾಂಶವನ್ನು ಹೊರಗೆ ಎಳೆದು ನೀವು ತೋರಿಸಲೇ ಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಯಾಚೇನಹಳ್ಳಿ ಎಂಬ ಒಂದು ಗ್ರಾಮ ಇದೆ. ಅಲ್ಲಿ ಪಟೇಲ್ ಭೋಜರಾಜ್

ಎಂಬುವವರು ಇದ್ದಾರೆ. ಇವರು ಮೈಸೂರಿಗೆ ಬಂದಾಗ ಅವರಿಗೂ ಸಹ ಚೆನ್ನಾಗಿ ಹೊಡೆದಿದ್ದಾರೆ. ಇವರು ಖಾಸಗಿ ಆಸ್ಪತ್ರೆಯಲಿ ಅಡ್ಮಿಟ್ ಆಗಿದ್ದಾರೆ. ಇಂಥ ಶಕ್ತಿಗಳು ಇದ್ದರೆ ಸಾಮಾನ್ಯ ಜನರ ಬದುಕು ಏನಾಗಬೇಕು? ಇಸ್ಮಾಯಿಲ್ ಮತ್ತು ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರು ಆಡಳಿತ ಮಾಡಿದಂಥ ವಿಶ್ವ ವಿಖ್ಯಾತ ಮೈಸೂರಿನಲ್ಲಿ ರಾಮರಾಜ್ಯ ಘೋಷಣೆಯ ಪ್ರೇರಣೆಯನ್ನು ಗಾಂಧೀಜಿಯವರು ಪಡೆದಿದ್ದರು. ಇಂಥ ಒಂದು ಜಾಗದಲ್ಲಿ ಈ ರೀತಿಯಾದ ಘಟನೆಗಳು ನಡೆಯುತ್ತಿವೆ? ಕೆಲವು ರಾಜಕೀಯ ಪಕ್ಷಗಳು ಅಲ್ಲಿ ನಡೆಯತಕ್ಕಂಥ ನರ್ಮ್ ಯೋಜನೆಯ ಫಲ ಪಡೆಯುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳನ್ನು ತೆಗೆದು ಹಾಕುವುವಂಥ ಪ್ರಯತ್ನಗಳು ನಡೆಯುತ್ತಿವೆ. ಅನೇಕ ವಿಷಯಗಳು ನಿಮ್ಮ ಬತ್ತಳಿಕೆಯಲ್ಲಿದ್ದಾವೆ. ಈ ಎಲ್ಲಾ ವಿಷಯಗಳು ಹೊರಗೆ ಬರಬೇಕಾದರೆ ನೀವು ದಯವಿಟ್ಟು ನ್ಯಾಯಾಂಗ ತನಿಖೆಗೆ ಆದೇಶ ಮಾಡಿ ಅಲ್ಲಿರತಕ್ಕಂಥ ಜನರು ನೆಮ್ಮದಿಯಿಂದ ಸೌಹಾರ್ದತೆಯಿಂದ ಬದುಕತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ತಮ್ಮ ಮೂಲಕ ತಾನು ಸರ್ಕಾರವನ್ನು ಅಗ್ರಹಪೂರ್ವಕ ವಾದಂಥ ಒತ್ತಾಯವನ್ನು ಮಾಡುತ್ತೇನೆ.

ಡಾ:ವಿ.ಎಸ್.ಆಚಾರ್ಯ(ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಮೊನ್ನೆ ಜುಲೈ 2ನೇ ತಾರೀಖಿನಂದು ಪ್ರಾರಂಭವಾಗಿ 3 ಜನರ ನಿಧನಕ್ಕೆ ಕಾರಣವಾದಂಥ ಒಂದು ಕೋಮು ಗಲಭೆ ಏನು ಇದೆ, ಇದರ ಬಗ್ಗೆ ಮಾನ್ಯ ಪ್ರತಿಪಕ್ಷದ ನಾಯಕರಾದಂಥ ಸಿದ್ಧರಾಮಯ್ಯನವರು, ಅದೇ ರೀತಿ ಉಪ ನಾಯಕರಾದಂಥ ಜಯಚಂದ್ರರವರು, ಶ್ರೀ ಮಾಗಡಿ ಬಾಲಕೃಷ್ಣರವರು, ಶ್ರೀನಿವಾಸ ಪ್ರಸಾದರವರು, ಶ್ರೀ ರೋಷನ್ ಬೇಗ್‌ರವರು ಮತ್ತು ತನ್ವೀರ್‌ಸೇಠ್, ಶ್ರೀ ಶಿವಲಿಂಗೇಗೌಡ, ಶ್ರೀ ಖಮರುಲ್ ಇಸ್ಲಾಂ ಮತ್ತು ಡಾ:ಹೆಚ್.ಸಿ. ಮಹಾದೇವಪ್ಪನವರು ಸೇರಿ ಸುಮಾರು 9 ಜನ ಮಾನ್ಯ ಸದಸ್ಯರುಗಳು ಈ ವಿಷಯವಾಗಿ ಬಹಳ ಬೆಳಕನ್ನು ಚೆಲ್ಲಿದ್ದಾರೆ. ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಕೆಲವೊಂದು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಅದೇ ರೀತಿ ಸರ್ಕಾರ ಎಡವಿರಬಹುದಾದ ಕೆಲವೊಂದು ವಿಷಯಗಳ ಬಗ್ಗೆ ಅವರವರ ಅಭಿಪ್ರಾಯಗಳನ್ನು ಅವರು ಹೇಳಿದ್ದಾರೆ. ನಾನು ಅವರ ಈ ಒಂದು ವಿಚಾರಕ್ಕಾಗಿ ಅಭಿನಂದಿಸುತ್ತೇನೆ. ಏಕೆಂದರೆ, ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳು ಉಪಯುಕ್ತ ಅಂಥ ನಾನು ಭಾವಿಸುತ್ತೇನೆ. ಇಲ್ಲಿ ಪ್ರಶ್ನೆ ಇರುವಂಥದ್ದು ಕೋಮುಗಲಭೆ ನಮ್ಮ ಸಮಾಜಕ್ಕೆ ಹಿಡಿದಂಥ ಶಾಪ ಎನ್ನುವುದು ನಮಗೆಲ್ಲಾ ಗೊತ್ತಿದೆ. ಸ್ವಾತಂತ್ರ್ಯ ಪೂರ್ವದಿಂದಲೇ ಪ್ರಾರಂಭವಾದ ಈ ಒಂದು ಪಿಡುಗು ಸ್ವಾತಂತ್ರ್ಯ ನಂತರ ಸಹ ನಮ್ಮೆಲ್ಲರ ಒಂದು ಪ್ರಯತ್ನದಿಂದ ಇದನ್ನು ಎಲ್ಲರೂ ಒಟ್ಟಾಗಿ ಕಡಿಮೆ ಮಾಡಬೇಕು. ಒಂದೇ ತಾಯಿಯ ಮಕ್ಕಳಾಗಿ ಬದುಕಬೇಕು

ಎಂದು ಹೇಳುವಂತ ಪ್ರಯತ್ನ ಮಾಡಿದರು. ಅದರೂ ಇದು ಮುಂದುವರೆಯುತ್ತಿರುವಂಥದ್ದು ಬಹಳ ದುರದೃಷ್ಟಕರ. ಮೈಸೂರಿನಲ್ಲಿ ಈಗ ಇರುವಂಥದು ಮತ್ತು ಇನ್ನು ಸ್ವಲ್ಪ ಇರುವುದರಿಂದ ಅದರ ಬಗ್ಗೆ ಮೂಲ ಕಾರಣಕ್ಕೆ ಹೋಗಿ ಈಗಗಾಲೆ ಮತ್ತೆ ಏನಾದರೊಂದು ಮಾಡಿಕೊಳ್ಳತಕ್ಕಂಥದ್ದಕ್ಕೆ ಹೋಗುವುದಿಲ್ಲ, ತಾವುಗಳು ಸಹಕಾರ ನೀಡಿದ್ದೀರಿ. ಈ ಒಂದು ಚರ್ಚೆಯ ರೀತಿಯಲ್ಲಿ, ನಾನು ಸಹ ಆ ವಿಷಯಕ್ಕೆ ಹೋಗುವುದಿಲ್ಲ. ಕೆಲವು ರಾಜಕೀಯ ಸಂಘಟನೆಗಳು, ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳು ಕೆಲವೊಂದು ಸಂದರ್ಭದಲ್ಲಿ ಕೋಮು ಗಲಭೆಗೆ ಉತ್ತೇಜನ ನೀಡುವಂಥದ್ದನ್ನು ನಾವು ನೋಡುತ್ತಿದ್ದೇವೆ ಮತ್ತು ಅದರ ಬಗ್ಗೆ ವಿಶೇಷವಾಗಿ ಚರ್ಚೆಗೆ ಹೋಗದೇ ನಮ್ಮ ರಾಜ್ಯ ಶಾಂತಿ ಸುವ್ಯವಸ್ಥೆಗೆ ಹೆಸರಾದಂಥ ರಾಜ್ಯವಾಗಿದೆ. ಆದರೂ ಸಹ ಪ್ರತಿ ವರ್ಷ ಅಲ್ಲಿ ಇಲ್ಲಿ ಸ್ವಲ್ಪ ಕೋಮು ದಳ್ಳುರಿ ಎನ್ನುವಂಥದ್ದು ನಡೆಯುತ್ತಿರುವಂತದ್ದನ್ನು ನಾವು ನೊಡುತ್ತಿದ್ದೇವೆ. ಮೈಸೂರಿನಲ್ಲಿ ಆದ ಘಟನೆ ಅಲ್ಲಿ ಆಗಬಾರದಾಗಿತ್ತು, ಬಹಳ ದುರದೃಷ್ಟಕರ. ಆದರೆ ಒಂದು ವಿಷಯವನ್ನು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ನೀವೇ ಅದನ್ನು ನಿಮ್ಮ ಭಾಷಣಗಳಲ್ಲಿ ಹೇಳಿದ್ದೀರಿ. ಇದು ಏನು 2009ನೇ ಇಸ್ವಿಯಲ್ಲಿ ನಮ್ಮ ರಾಜ್ಯದಲ್ಲಿ ಆಗಿದೆ ಎನ್ನುವಂಥದ್ದು ಏನೂ ಅಲ್ಲ. ಬಹಳ ಹಿಂದಿನಿಂದಲೂ ಆಗಾಗ ಪ್ರತಿವರ್ಷ ಕೋಮು ಗಲಭೆಗಳು ಅಲ್ಲಿ ಇಲ್ಲಿ ಆಗುತ್ತಿರುವಂಥದ್ದು. ನಾನು ಬಹಳ ಹಿಂದೆ ಹೋಗುವುದಿಲ್ಲ, ತಮಗೆ ಗೊತ್ತಿದೆ. ಹುಬ್ಬಳ್ಳಿಯಿಂದ ಉತ್ತರ ಕನ್ನಡದವರೆಗೆ, ಹುಬ್ಬಳ್ಳಿಗೆ ಅದು ಹೊಂದಿಕೊಂಡೆ ಇದೆ. 1993, 1996, 1998 ರವರೆಗೆ ಭಟ್ಕಳ ಪ್ರದೇಶದಲ್ಲಿ ಯಾವ ರೀತಿ ತಿಂಗಳಾನುಗಟ್ಟಲೆ ನಡೆಯುತ್ತಿತ್ತು. ಅದು ಒಂದು ಸಣ್ಣ ಅವಧಿಯಲ್ಲಿ 20 ಕೊಲೆಗಳು ಆಯಿತು. ಆಗಿನ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಮೀಟಿಂಗ್ ಮಾಡುತ್ತಿರುವಾಗ ಅವರ ಎದುರಿನಲ್ಲಿಯೆ 3 ಜನ ಸತ್ತು ಹೋದಂಥ ಒಂದು ಗಲಭೆ ಅಲ್ಲಿ ನಡೆದಿರುವಂಥದ್ದು ಗೊತ್ತಿದೆ. ಅತೀ ಹೆಚ್ಚು ಎಂದರೆ, 1996ರಲ್ಲಿ ಇದೇ ಸದನದ ಸದಸ್ಯರಾಗಿದ್ದಂತ ಸನ್ಮಾನ್ಯ ಡಾ:ಚಿತ್ತರಂಜನ್‌ರವರ ಹತ್ಯೆ ಆಗಿರುವಂಥದ್ದು ನಮಗೆ ಗೊತ್ತಿದೆ. ಹಾಗಾಗಿ ಇದು ನಮ್ಮೆಲ್ಲರ ನಿಯಂತ್ರಣಕ್ಕೆ ಮೀರಿ ನಡೆಯುತ್ತಿರುವಂಥದ್ದು ಅದು ನಮಗೆಲ್ಲರಿಗೂ ಗೊತ್ತಿದೆ. 2001 ರಲ್ಲಿ ಇದಕ್ಕಿಂತ ಹಿಂದೆ ಇರುವಂಥ ಅಂಕಿ ಸಂಖ್ಯೆಗಳು ಬೇಡ. 2001ರಲ್ಲಿ ನಮ್ಮ ರಾಜ್ಯದಲ್ಲಿ 19 ಕೋಮು ಗಲಭೆಗಳ ಘಟನೆಗಳು ಆಗಿವೆ 6 ಜನ ಸತ್ತು ಹೋಗಿ 160 ಜನರು ಗಾಯಗೊಂಡಿದ್ದಾರೆ. 2002 ರಲ್ಲಿ 26 ಘಟನೆಗಳು 5 ಜನರು ಮರಣ ಹೊಂದಿ 145 ಜನರು ಗಾಯಗೊಂಡಿದ್ದರು. ನಾನು ಕೆಲವು ವರ್ಷಗಳದ್ದು ಮಾತ್ರ ಹೇಳುತ್ತಿದ್ದೇನೆ ಅದರ ಮಧ್ಯದ ವರ್ಷದಲ್ಲಿ ಕೋಮು ಗಲಭೆಗಳು ಆಗಿವೆ, ಆಗಿಲ್ಲವೆಂದು ಏನು ಅಲ್ಲ. 2006ರಲ್ಲಿ 14 ಕೋಮು ಗಲಭೆಗಳು ಆಗಿ 6 ಜನ ಸತ್ತಿದ್ದು 202 ಜನರು ಗಾಯಗೊಂಡಿದ್ದಾರೆ. 2008ರಲ್ಲಿ 16 ಘಟನೆಗಳು ನಡೆದು ಒಬ್ಬರು ಸತ್ತು 102 ಜನರು ಗಾಯಗೊಂಡಿದ್ದರು. ಈಗ 2009ರಲ್ಲಿ 8 ಘಟನೆಗಳು ಇಲ್ಲಿಯವರೆಗೆ 4

ಜನ ಸತ್ತು 38 ಜನರು ಗಾಯಗೊಂಡಿದ್ದಾರೆ ಎಂದು ಹೇಳುವಂಥ ವಿಷಯ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈಗ ಮೈಸುರಿನಲ್ಲಿ ನಡೆದ ವಿಷಯವಾಗಿ pointed reference ಮಾಡಬೇಕೆಂದರೆ, ಏಪ್ರಿಲ್‌ನಲ್ಲಿ ಒಂದು ಗಲಭೆ ಆದಂಥದ್ದು ತಮಗೆಲ್ಲರಿಗೂ ಗೊತ್ತಿದೆ. ಸ್ವಲ್ಪ ದಿವಸದಲ್ಲಿಯೇ ಅದನ್ನು control ಮಾಡುವುದಕ್ಕೆ ಸಾಧ್ಯವಾಯಿತು. ಆದರೆ ಅದರ ನಂತರ ಎಷ್ಟು ಜಾಗ್ರತೆ ಬೇಕು ಅಷ್ಟು ಮಾಡಿಕೊಂಡು ಇಟ್ಟಿದ್ದರು. ಕೋಮು ಗಲಭೆ ಸ್ವಲ್ಪ ನಾರ್ಮಲ್‌ಗೆ ಬರುತ್ತದೆಂದು ಅಂದ ಮೇಲೆ ಆ scale ಅನ್ನು ಕಡಿಮೆ ಮಾಡುತ್ತಾ ಬಂದರು. ಅಲ್ಲಿರುವ ವಾಹನಗಳನ್ನು ಒಮ್ಮೆಲೆ ತೆಗೆದಿರುವಂಥ ಪ್ರಸಂಗವಿಲ್ಲ. ವಾಹನಗಳು ಒಂದೆ ಕಡೆಗೆ ಇರುವಂಥದ್ದು ಅಲ್ಲ, ಎಲ್ಲಾ ಕಡೆಗೆ ತಿರುಗುತ್ತಿದ್ದವು. ನನಗೆ ಬಂದಿರುವ ಮಾಹಿತಿ ಅದನ್ನು ನಾನು ಚೆಕ್ ಮಾಡಿದ್ದೇನೆ. ಹಾಗಾಗಿ ಯಾವಾಗ ಆ ಸ್ಕೇಲ್ ಕಡಿಮೆ ಆಯಿತು. ಅಲ್ಲಿ ಒಂದು ಬೇರೆ ಸಂದರ್ಭ ಬಂತು. ತಾವು ಹೇಳಿದ ಹಾಗೆ ವಸತಿ ಇದ್ದಂಥ ಮನೆ ಕ್ಯಾತಮಾರನಹಳ್ಳಿಯಲ್ಲಿ, ಅಲ್ಲಿ ಒಂದು ಮದರಸಾ ಎನ್ನುವಂಥ ಉರ್ದುಶಾಲೆ ಮಾಡುವುದಕ್ಕೋಸ್ಕರವಾಗಿ ಅರ್ಜಿಯನ್ನು ಹಾಕಿದ್ದರು. ಅರ್ಜಿ ಹಾಕಿದಾಗ ಕೊಟ್ಟದ್ದು ಆಯಿತು, ಆಮೇಲೆ ಅದು ಲಿಂಟೆಲ್‌ವರೆಗೆ ಬಂದಾಗ ಅಲ್ಲಿ ಮಸೀದಿ ಬರುತ್ತದೆಂದು ಹೇಳುವಾಗ ಆತಂಕ ಒಂದು ಗುಂಪಿಗೆ ಇನ್ನೊಂದು ಗುಂಪಿನವರು ಆದನ್ನು ಅಡ್ಡಿ ಪಡಿಸುತ್ತಾರೆಂದು ಹೇಳುವಂಥದು ದ್ವೇಷಮಯವಾದಂಥ ಈ ಒಂದು ಘಟನೆಗೆ ಕಾರಣವಾಯಿತು ಎಂದು ಹೇಳುವಂಥದು. ಒಂದು ಸಂಘದಿಂದ ದಿನಾಂಕ:2.7.2009 ರಂದು ಬೆಳಗ್ಗೆ ಸುಮಾರು 6.30 ಕ್ಕೆ ಉದಯಗಿರಿ ಪೊಲೀಸ ಸ್ಟೇಶನ್ ಸರಹದ್ದಿನಲ್ಲಿರುವ ಅಲಿಮಾ ಸಾದಿಯಾ ಕಂಪೌಂಡ್‌ನಲ್ಲಿ ಶಾಂತಿ ಸುವ್ಯವಸ್ಥೆಯನ್ನು ಭಂಗಪಡಿಸುವಂಥ ಒಂದು ಉದ್ದೇಶದಿಂದ ಇದೊಂದು ನೆಪ ಕಿಡಿಗೇಡಿಗಳು ಒಂದು ಹಂದಿ ರುಂಡ ಮತ್ತು ಮುಂಡವನ್ನು ಹಾಕಿರುವುದು ಕಂಡು ಬಂತು. ಇದೆ ಒಂದು ಕಂಪೌಂಡನಲ್ಲಿ ಒಂದು ಶಾಲೆ, ಮದರಸಾ ನಿರ್ಮಾಣ ಹಂತದಲ್ಲಿದೆ. ಇದೇ ಸ್ಥಳದಲ್ಲಿ ಹಿಂದೆ ವಾಸವಿದ್ದ ಮನೆಯನ್ನು ಮಸೀದಿಯನ್ನಾಗಿ ಕಟ್ಟುವ ಬಗ್ಗೆ ಹತ್ತಿರದಲ್ಲಿರುವ ಶ್ರೀ ಹುಲಿಯಮ್ಮ ದೇವಸ್ಥಾನದವರು ದಿನಾಂಕ: 31.3.2009 ರಂದು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾ ದೂರನ್ನು ಸಲ್ಲಿಸಿದ್ದಾರೆ ಅದರ ಬಗ್ಗೆ ರೆಕಾರ್ಡ್ ಇದೆ. ಹೀಗೆ ಇರುವಾಗ ದಿನಾಂಕ: 2.5.2009 ಬೆಳಗ್ಗೆ ವಿಷಯವು ಗೊತ್ತಾದ ತಕ್ಷಣ ಅಕ್ಕಪಕ್ಕದ ಪ್ರದೇಶದ ನೂರಾರು ಜನ ಮುಸ್ಲಿಂಬಾಂಧವರು ಸೇರಿದರು. ಈ ವಿಷಯವು ಗೊತ್ತಾದ ತಕ್ಷಣ ಸ್ಥಳೀಯ ಪೊಲೀಸ ಅಧಿಕಾರಿಗಳು ಅಲ್ಲಿಗೆ ಧಾವಿಸಿದರು. ಆದರೆ ಸ್ಥಳದಲ್ಲಿ ಉಪಸ್ಥಿತರಿದ್ದ ಜನರ ಗುಂಪು ಪೊಲೀಸರಿಗೆ ಮುಂದಿನ ಕ್ರಮ ಕೈಗೊಳ್ಳಲು ಅವಕಾಶ ಕೊಡಲಿಲ್ಲ. ಸುಮಾರು 8 ಗಂಟಗೆ ಮೈಸೂರು ಪೊಲೀಸ ಆಯುಕ್ತರು ಹಾಗೂ 8.30 ಗಂಟೆಗೆ ಮೈಸೂರು ಜಿಲ್ಲಾಧಿಕಾರಿಗಳ ಸಹ ಸ್ಥಳಕ್ಕೆ ಬಂದು ಅವರ ಜೊತೆಗೆ ಮಾತನಾಡಿ ಅಲ್ಲಿರುವ ಜನರನ್ನು ಸಮಾಧಾನ ಪಡಿಸಲಿಕ್ಕೆ ಅವರು ಪ್ರಯತ್ನ ಪಟ್ಟರು. ಆದರೆ

ಹಿಂದು ಮತ್ತು ಮುಸ್ಲಿಂ ಜನಾಂಗದವರು ಸಾವಿರಾರು ಸಂಖ್ಯೆಯಲ್ಲಿ ಉದ್ರಿಕ್ತ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು. ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ, ರಾಜೀವನಗರ, ಗೌಸಿಯಾನಗರ ಮುಂತಾದ ಪ್ರದೇಶಗಳಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿ ಅಲ್ಲಲ್ಲಿ ಘರ್ಷನೆ ಉಂಟಾಯಿತು. ಅಶ್ರುವಾಯು ಹಾಗೂ ಲಾಠಿಪ್ರಹಾರದಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ಪಟ್ಟರು. ಕೆಲವು ಕಡೆ ಎಲ್ಲಾ ಪ್ರಯತ್ನಗಳು ವಿಫಲವಾದಾಗ ಗಾಳಿಯಲ್ಲಿ 8 ಸುತ್ತು ಗುಂಡುಹಾರಿಸಬೇಕಾಯಿತು. ಆದರೆ ಯಾರಿಗೂ ಗುಂಡೇಟು ತಗುಲಲಿಲ್ಲ. ಆದರೆ ಕೆಲವರಿಗೆ ಲಾಠಿ ಪ್ರಹಾರದಿಂದ ಗಾಯಗಳಾಯಿತು. ಕೆಲವು ಪೊಲೀಸರಿಗೆ ಸಹ ಗಾಯಗಳು ಉಂಟಾಯಿತು. 2ನೇ ತಾರೀಖು ಸುಮಾರು 10.30 ಗಂಟೆಗೆ ಪೊಲೀಸರು ಈ ಹಂದಿಯ ಬಾಡಿಯನ್ನು ತೆಗೆದುಕೊಂಡು ಹೋಗಿ post mortem ಪರೀಕ್ಷೆಗೆ ತೆಗೆದುಕೊಂಡು ಹೋಗುವಂಥದ್ದನ್ನು ಮಾಡಿದರು. ಸುಮಾರು 10.00 ಗಂಟೆಗೆ ಪೊಲೀಸ್ ಆಯುಕ್ತರು ಸಿ.ಆರ್.ಪಿ.ಸಿ. ಕಲಂ 144 ರ ಪ್ರಕಾರ ನಿಷೇದಾಜ್ಞೆಯನ್ನು ಜಾರಿಗೆ ತಂದರು. ಸುಮಾರು 10.30 ಗಂಟೆಯ ಹೊತ್ತಿಗೆ ಜನಗಳ ಗುಂಪುಗಳು ಚದುರಿದವು. ಆದರೂ ಅಲ್ಲಲ್ಲಿ ಘರ್ಷಣೆಗಳು ಮುಂದುವರೆದಿತ್ತು. ಪೊಲೀಸರು ಗಾಯಗೊಂಡವರನ್ನು ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆಗೆ ಏರ್ಪಾಡು ಮಾಡಿದರು ಮತ್ತು ಕೆಲವು ಗಾಯಾಳುಗಳು ಖುದ್ದಾಗಿ ಆಸ್ಪತ್ರೆಗೆ ಸೇರಿದರು. 5 ಜನ ಪೊಲೀಸ್ ಅಧಿಕಾರಿಗಳು ಸೇರಿದಂತೆ ಸುಮಾರು 19 ಜನರಿಗೆ ಈ ಘರ್ಷಣೆಯಲ್ಲಿ ಗಾಯಗಳಾಗಿತ್ತು. ಇದರ ಜೊತೆಗೆ ಗುಂಪು ಘರ್ಷಣೆಯಲ್ಲಿ ಈ ಕೆಳಕಂಡ ಮೂವರು ತಮ್ಮ ಪ್ರಾಣವನ್ನು ಕಳೆದುಕೊಂಡರು.

1. ತಿರುಪತಿ ಬಿನ್ ವೆಂಕಟಪ್ಪ, 46 ವರ್ಷ, ಕ್ಯಾತಮಾರನಹಳ್ಳಿ, ಮೈಸೂರು.
2. ಮುಬಾರಕ್ ಅಕ್ತರ್, ಬಿನ್ ಅಬ್ದುಲ್ ಸುಭಾಸ್, 22 ವರ್ಷ, ಶಾಂತಿ ನಗರ, ಮೈಸೂರು
3. ಸೈಯದ್ ಜನೇದ್ ಬಿನ್ ಸೈಯದ್ ಮೆಹಬೂಬ್, 14 ವರ್ಷ, ಶಾಂತಿ ನಗರ, ಮೈಸೂರು.

ಬೆಂಗಳೂರು, ಮೈಸೂರು ಜಿಲ್ಲೆ, ಮಂಡ್ಯ, ಚಾಮರಾಜನಗರ, ಹಾಸನ ಮುಂತಾದ ಜಿಲ್ಲೆಗಳಿಂದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಸ್ಥಳದಲ್ಲಿ ನಿಯೋಜಿಸಿ ದೊಡ್ಡ ಪ್ರಮಾಣದಲ್ಲಿ ಬಂದೋಬಸ್ತ್ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಬಂದೋಬಸ್ತ್ ವ್ಯವಸ್ಥೆಗಾಗಿ 08 ಜನ ಎಸ್.ಪಿ. 14 ಜನ ಡಿ.ವೈ.ಎಸ್.ಪಿ., 28 ಇನ್ಸ್‌ಪೆಕ್ಟರ್‌ಗಳು ಹಾಗೂ 40 ಜನ ಸಬ್ ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲಾಗಿದೆ. ಇದಲ್ಲದೇ 10 ಕೆ.ಎಸ್.ಆರ್.ಪಿ. ತುಕಡಿಗಳನ್ನು 2 ಆರ್.ಎ.ಎಫ್. ಕಂಪನಿಗಳನ್ನು (ಕೊಯಮತ್ತೂರ್) ನಿಂದ ನಿಯೋಜಿಸಲಾಯಿತು. 2ನೇ ತಾರೀಖು ಮಧ್ಯಾಹ್ನ ಸುಮಾರು 12.00 ಗಂಟೆಯ ಹೊತ್ತಿಗೆ ಪರಿಸ್ಥಿತಿ ಶಾಂತಿಯುತವಾಯಿತು.

ಹಿರಿಯ ಅಧಿಕಾರಿಗಳು ಅಂದರೆ ಎ.ಡಿ.ಜಿ., ಕಾನೂನು ಮತ್ತು ಸುವ್ಯವಸ್ಥೆ ಕೂಡ ಮೈಸೂರಿಗೆ ಭೇಟಿ ನೀಡ ಮೊಕ್ಕಾಂ ಮಾಡಿರುತ್ತಾರೆ.

ಪರಿಸ್ಥಿತಿ ಶಾಂತಿಯುತವಾಗಿದ್ದು 3ನೇ ತಾರೀಖು ಸಂಜೆ ಸುಮಾರು 4.00 ಗಂಟೆಗೆ ಎಸ್.ಆರ್.ಮೊಹಲ್ಲಾದಲ್ಲಿ ಒಬ್ಬರು ಗಿರಿಧರ್ ಎಂಬ ಬಿ.ಜೆ.ಪಿ.ಯ ಯುವ ಮೋರ್ಚ ಅಧ್ಯಕ್ಷರುಮತ್ತು ಅವರ ಮಿತ್ರರಾದ ವಾಜಿದ್‌ರವರ ಮೇಲೆ ಕೆಲವು ದುಷ್ಕರ್ಮಿಗಳು ಹಲ್ಲೆ ನಡೆಸಿದ್ದರಿಂದ ಮಾರಣಾಂತಿಕ ಹಲ್ಲೆಗೆ ಒಳಗಾದ ಗಿರಿಧರ್ ಅವರಿಗೆ ತೀವ್ರ ಗಾಯಗಳಾಗಿರುತ್ತವೆ ಮತ್ತು ಇವರನ್ನು ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿ ಇವರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸಲು ದಿನಾಂಕ 13.07.2009 ರ ತನಕ ಕಲಂ 144 ರ ಸಿ.ಆರ್.ಪಿ.ಸಿ. ಅಡಿಯಲ್ಲಿ ನಿಷೇದಾಜ್ಞೆಯನ್ನು ನಾಲ್ಕು ಪೊಲೀಸ್ ಠಾಣೆ ಸರಹದ್ದುಗಳಲ್ಲಿ ವಿಧಿಸಲಾಗಿದೆ. ದಿನಾಂಕ 05.07.09 ರಿಂದ 08.07.09 ರವರೆಗೆ ರಾತ್ರಿ 9.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಕರ್ಫ್ಯೂವನ್ನು ವಿಧಿಸಲಾಗಿತ್ತು. ದಿನಾಂಕ 02.07.2009 ರ ಸಂಜೆ ಎರಡು ಕೋಮಿನ ಮುಖಂಡರು ಸ್ಥಳೀಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು, ಮೈಸೂರು ನಗರ ಮಹಾ ಪೌರರನ್ನು ಸೇರಿಸಿ ಕೋಮು ಸೌಹಾರ್ಧತೆಯನ್ನು ಕಾಪಾಡಲು ಶಾಂತಿ ಸಭೆಯನ್ನು ನಡೆಸಲಾಗಿತ್ತು. ಎಲ್ಲಾ ಹಿರಿಯ ಅಧಿಕಾರಿಗಳನ್ನೊಳಗೊಂಡ 50 ಸಶಸ್ತ್ರ ಪೊಲೀಸ್ ಪಿಕೆಟ್ಸ್‌ಗಳನ್ನು ಏರ್ಪಡಿಸಲಾಯಿತು. 32 ಚೀತಾ, 09 ಗರುಡ ಮತ್ತು 20 ಅಶ್ವದಳ ಪೊಲೀಸರೊಂದಿಗೆ ತೀವ್ರ ಗಸ್ತಿನ ವ್ಯವಸ್ಥೆಯನ್ನು (Intensive patrolling) ಮಾಡಲಾಯಿತು.

45 ಗೂಂಡಾಗಳನ್ನು ವಶಕ್ಕೆ ತೆಗೆದುಕೊಂಡು ಬಳ್ಳಾರಿ ಮತ್ತು ಗುಲ್ಬರ್ಗಾ ಜೈಲುಗಳಿಗೆ ಕಳುಹಿಸಿಕೊಡಲಾಗಿದೆ. ಮುಸ್ಲಿಂ ಜನಾಂಗದ ಕೆಲವರು ಒಂದು ಪತ್ರಿಕಾ ಸಂದರ್ಶನವನ್ನು ಏರ್ಪಡಿಸಿದ್ದು ಇವರ ಹತ್ತಿರ ಆಕ್ಷೇಪಣಾರ್ಹ ವಸ್ತುಗಳು (Button Knife, Catapult with Marbles) ಸಿಕ್ಕಿರುತ್ತವೆ.

ಗಲಭೆಯಲ್ಲಿ 128 ಮನೆಗಳು ಜಖಂಗೊಂಡಿರುತ್ತವೆ. ಒಂದು ಪೊಲೀಸ್ ಜೀಪ್ ಹಾಗೂ ಒಂದು ಆಟೋ ರಿಕ್ಷಾ ಬೆಂಕಿಗೆ ಆಹುತಿಯಾಗಿರುತ್ತವೆ. ದಿನಾಂಕ 03.07.2009ರಂದು ಕರ್ನಾಟಕ ರಾಜ್ಯದ ಡಿ.ಜಿ. ಮತ್ತು ಐ.ಜಿ.ಪಿಯವರು ಮೈಸೂರು ನಗರಕ್ಕೆ ಭೇಟಿ ನೀಡಿ ಘಟನೆ ನಡೆದ ಸ್ಥಳವನ್ನು ಹಾಗೂ ಗಲಭೆ ಪೀಡಿತ ಪ್ರದೇಶಗಳನ್ನು ಪರಿಶೀಲಿಸಿ ಗಾಯಗೊಂಡ ಜನರನ್ನು ವಿವಿಧ ಆಸ್ಪತ್ರೆಗಳಲ್ಲಿ ಭೇಟಿ ಮಾಡಿ ಪರಾಮರ್ಶಿಸಿರುತ್ತಾರೆ.

ದಿನಾಂಕ 04.07.2009 ರಂದು ಬೆಳಿಗ್ಗೆ ನಾನು ಮೈಸೂರು ನಗರಕ್ಕೆ ಭೇಟಿ ನೀಡಿ ಗಲಭೆಯಲ್ಲಿ ಗಾಯಗೊಂಡ ಜನರನ್ನು ವಿವಿಧ ಆಸ್ಪತ್ರೆಗಳಲ್ಲಿ ಭೇಟಿ ಮಾಡಿರುತ್ತೇನೆ ಹಾಗೂ ದುಷ್ಕರ್ಮಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು

ಜರುಗಿಸುವಂತೆ ಸೂಚನೆಗಳನ್ನು ನೀಡಿರುತ್ತೇನೆ ಮತ್ತು ಈ ವಿಷಯವನ್ನು ಅಲ್ಲಿ ಪತ್ರಿಕಾ ಸಂದರ್ಶನದಲ್ಲಿ ಹೇಳಿದ್ದೇನೆ. ಯಾರೇ ಅಪರಾಧದಲ್ಲಿ ತೊಡಗಿರಲಿ, ಕಾನೂನನ್ನು ಕೈಗೆ ತೆಗೆದುಕೊಂಡಿರಲಿ ಅವರನ್ನು ಕಾನೂನಿಗೆ ಒಳಪಟ್ಟು ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಪಷ್ಟವಾಗಿ ಸೂಚನೆಯನ್ನು ಕೊಟ್ಟು ಬಂದಿದ್ದೇನೆ.

ಈ ಸಂದರ್ಭದಲ್ಲಿ ಮೊನ್ನೆವರೆಗೆ ಪೊಲೀಸರು ಕೆಳಕಂಡ ಕ್ರಮಗಳನ್ನು ಜರುಗಿಸಿರುತ್ತಾರೆ.

1. ದಾಖಲಾದ ಪ್ರಕರಣಗಳ ಸಂಖ್ಯೆ 25
2. ಬಂಧಿತರ ಸಂಖ್ಯೆ –127
3. ಗಾಯಗೊಂಡವರ ಸಂಖ್ಯೆ–28 (5 ಪೊಲೀಸರು ಸೇರಿದಂತೆ)
4. ಪೊಲೀಸರು ಗಾಳಿಯಲ್ಲಿ ಹಾರಿಸಿದ ಗುಂಡುಗಳ ಸಂಖ್ಯೆ – 8
5. ಮೃತಪಟ್ಟವರ ಸಂಬಂಧಿಗಳಿಗೆ ವಿತರಿಸಿದ ಪರಿಹಾರ ಧನ –3 ಲಕ್ಷರೂಪಾಯಿಗಳು (ಮೂರು ಕುಟುಂಬಗಳಿಗೆ)
6. ಆರು (6) ಪ್ರತ್ಯೇಕ ತನಿಖಾ ತಂಡಗಳನ್ನು ರಚಿಸಲಾಗಿದೆ.

ಈಗ Investigation ಬಗ್ಗೆ ತಾವು ಸಾಕಷ್ಟು ವಿಷಯಗಳನ್ನು ಹೇಳಿದ್ದೀರಿ, ಇವತ್ತು ಅಲ್ಲಿ ಯಾರು ಆ ಹಂದಿಯನ್ನು ಹಾಕಿದ್ದಾರೆ, ಆಮೇಲೆ ಅಲ್ಲಿ ಗಲಭೆಯಾದಾಗ ನಂತರದ ಪರಿಸ್ಥಿತಿ ಇವೆಲ್ಲದರ ಬಗ್ಗೆ Investigation is going on. ಅಂದರೆ first duty ಇಂತಹ ಸಂದರ್ಭದಲ್ಲಿ ಆ Law and Order situation ಅನ್ನು ಹತೋಟಿಗೆ ತರುವಂತದ್ದು ಇರುತ್ತದೆ. ಹಾಗಾಗಿ ನಮ್ಮ ಪೊಲೀಸರು ಆ ಕೆಲಸವನ್ನು ಸಹ ಮಾಡುತ್ತಿದ್ದಾರೆ. ಇವತ್ತು 13.07.2009ರ ದಿನಾಂಕದಲ್ಲಿ ನಾವಿದ್ದೇವೆ. ದಿನಾಂಕ 2 ರಿಂದ 13ರವರೆಗೆ ಈ ಹನ್ನೊಂದು ದಿವಸ ಅವಧಿಯಲ್ಲಿ, 2ನೇ ತಾರೀಖು ಅದು ಮುಂಜಾನೆ ಸಮಯದಲ್ಲಿ ಆಮೇಲೆ 3ನೇ ತಾರೀಖು ಆ ಗಿರಿಧರನ ಮೇಲೆ ಆದಂಥ ಹಲ್ಲೆ ಮತ್ತು ಮೊನ್ನೆ 9ನೇ ತಾರೀಖು ಮೂರು ದಿವಸಗಳದ್ದು ಬಿಟ್ಟರೆ ಉಳಿದ 8 ದಿವಸ ಶಾಂತಿಯುತವಾದ ಪರಿಸ್ಥಿತಿ ಬರುತ್ತಿದೆ ಮತ್ತು ಎಲ್ಲಾ ಜನರು ಸಹಕಾರ ಮಾಡುತ್ತಿದ್ದಾರೆ. ಮೈಸೂರಿನ ಒಂದು ಟೂರಿಸಂನ potential ಬಗ್ಗೆ ಸಾಕಷ್ಟು ಉಲ್ಲೇಖವಾಗಿದೆ. ಇವತ್ತು ಮೈಸೂರು ನಮ್ಮ ರಾಜ್ಯದ ಕೇವಲ ಸಾಂಸ್ಕೃತಿಕ ನಗರಿ ಮಾತ್ರವಲ್ಲ ನಮ್ಮ ದೇಶದ್ದೇ ಒಂದು ದೊಡ್ಡ ಪ್ರವಾಸೋದ್ಯಮದ ಕೇಂದ್ರವಾಗಿದೆ. ಈ ಎಲ್ಲಾ ನಿರ್ಬಂಧಗಳು ಇದ್ದಂತಹ ಸಂದರ್ಭದಲ್ಲಿಯೂ ಸಹ ಜನ ಬರುವಂಥವರು ಬರುತ್ತಿದ್ದಾರೆ.

ವಿಡಿಯೋ ಕ್ಲಿಪಿಂಗ್ ಹಾಗೂ ಇತರೆ ಸಾಕ್ಷಾಧಾರಗಳ ಮೇಲೆ ಅಪರಾಧಿಗಳನ್ನು ಬಂದಿಸಲಾಗಿದೆ. ಯಾವುದೇ ಅಮಾಯಕರಿಗೆ ತೊಂದರೆ ನೀಡಿರುವುದಿಲ್ಲ. ಮೈಸೂರಿನಲ್ಲಿ ಪರಿಸ್ಥಿತಿ ಶಾಂತವಾಗಿದ್ದು, ಪ್ರವಾಸಿಗರು ಎಂದಿನಂತೆ

ಮೈಸೂರು ನಗರಕ್ಕೆ ಭೇಟಿ ನೀಡುತ್ತಿದ್ದು, ಇದು ಪತ್ರಿಕೆಗಳಲ್ಲಿ ಸಹ ವರದಿಯಾಗಿರುತ್ತದೆ ಮತ್ತು ನಾನು ದಿನಾಂಕ 4.07.2009 ರಂದು ಮೈಸೂರಿಗೆ ಹೋದಾಗ ಸ್ವತ: ಪತ್ರಕರ್ತರೇ ಹೇಳಿದರು ಈ ಬಾರಿ ಒಳ್ಳೆಯ ರೀತಿಯಿಂದ ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಣಕ್ಕೆ ತಂದಿದ್ದಾರೆಂದು ಮತ್ತು ಪೋಲೀಸರ ಕೆಲಸ ಒಳ್ಳೆಯ ರೀತಿಯಲ್ಲಿ ಈ ಬಾರಿ ನಡೆದಿದೆ ಎಂದು ಇದರಿಂದ ಜನರಿಗೆ ಸಮಾಧಾನವಾಗಿದೆಯೆಂಬ ಮಾತನ್ನು ಸಹ ಹೇಳಿದ್ದಾರೆ ಮತ್ತು ಗಲಭೆಯನ್ನು ಮೂರು ಗಂಟೆಗಳ ಒಳಗಾಗಿ ಹತೋಟಿಗೆ ತರುವುದರಲ್ಲಿ ಯಶಸ್ವಿಯಾದ ಪೋಲೀಸರ ಕ್ಷಿಪ್ರ ಕಾರ್ಯ ನಿರ್ವಹಣೆಯನ್ನು ಪತ್ರಿಕೆಗಳು ಮತ್ತು ಸಾರ್ವಜನಿಕರು ಶ್ಲಾಘಿಸಿರುತ್ತಾರೆ. ಸರ್ಕಾರ ಇಡೀ ಪ್ರಕರಣವನ್ನು ನಿಕಟವಾಗಿ ಗಮನಿಸುತ್ತಿದೆ ಮತ್ತು ಪರಿಸ್ಥಿತಿ ದಿನಾಂಕ 2.7.2009 ರಿಂದ ಶಾಂತಿಯುತವಾಗಿರುವಾಗ ದಿನಾಂಕ 09.07.2009 ರಂದು ಸುಮಾರು 3.00 ಗಂಟೆಗೆ ಕೆ.ಎಫ್.ಡಿ (ಕರ್ನಾಟಕ ಫೋರಂ ಫಾರ್ ಡೆಮಾಕ್ರಸಿ) ಮತ್ತು ಪಿ.ಎಫ್.ಐ (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಬೆಂಬಲಿಗರಾದ ಸುಮಾರು 1,500 ಕ್ಕಿಂತ ಹೆಚ್ಚಿನ ಮುಸ್ಲಿಂ ಜನಾಂಗದವರು ಬಸ್‌ಗಳು, ಕಾರುಗಳು, ಮತ್ತು ದ್ವಿಚಕ್ರ ವಾಹನಗಳಲ್ಲಿ ಬಂದು ಮೈಸೂರಿನ ಫೌಂಟೇನ್ ವೃತ್ತದ ಬಳಿ ಸೇರಿರುತ್ತಾರೆ. ವಿಚಾರಣೆ ಮಾಡಲಾಗಿ ಇವರು ಕೇರಳ, ಹಾಸನ, ಕೊಡಗು, ಕೆ.ಜಿ.ಎಫ್., ಕೋಲಾರ ಮತ್ತು ಮಂಗಳೂರು ಮುಂತಾದ ಪ್ರದೇಶಗಳಿಂದ ಅಂದರೆ ಸುಮಾರು 10 ಜಿಲ್ಲೆಗಳು ಮತ್ತು ಕೇರಳದಿಂದ ಶ್ರೀ ಖಲೀಮುಲ್ಲಾ, ಜಿಲ್ಲಾ ಅಧ್ಯಕ್ಷರು, ಪಾಪುಲರ್ ಫ್ರಮಟ್ ಆಫ್ ಇಂಡಿಯಾರವರನ್ನು ದಸ್ತಗಿರಿ ಮಾಡಿದ್ದನ್ನು ಪ್ರತಿಭಟನೆ ಮಾಡಲು ಬಂದಿರುತ್ತಾರೆ ಸ್ಥಳದಲ್ಲಿ ನಿಷೇದಾಜ್ಞೆ ಇರುವಿಕೆ ಬಗ್ಗೆ ಅವರಿಗೆ ತಿಳುವಳಿಕೆ ನೀಡಿ ಚದುರಿ ಹೋಗಲು ಸೂಚನೆ ನೀಡಿದ್ದರೂ, ಅವರು ಹೋಗದೇ ಇರುವುದರಿಂದ ಸುಮಾರು ಎರಡು (2) ನೂರು ಜನರನ್ನು ದಸ್ತಗಿರಿ ಮಾಡಲಾಯಿತು. ಉಳಿದ ಜನರು ಸುಮಾರು 4.00 ಗಂಟೆಯ ಸಮಯದಲ್ಲಿ ಏಕಾಏಕೀ ಪೋಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಎ.ಸಿ.ಪಿ. ಶ್ರೀ ಸುರೇಶ್‌ರವರಿಗೆ ರಕ್ತ ಗಾಯಗಳಾಗಿರುತ್ತವೆ. ಪೋಲೀಸ್ ಪೇದೆ ಶ್ರೀ ಮಹೇಶ್ ಎಂಬುವವರನ್ನು ಚೂರಿಯಿಂದ ಇರಿದಿದ್ದಾರೆ. ಇದಲ್ಲದೇ 5 ಜನ ಪೋಲೀಸರಿಗೂ ಸಹ ಗಾಯಗಳಾಗಿರುತ್ತವೆ. ಇವರುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ಗುಂಪನ್ನು ಚದುರಿಸಲು ಪೋಲೀಸರು ಸುಮಾರು 30 ಅಶ್ರುವಾಯು ಶೆಲ್‌ಗಳನ್ನು, 8 ರಬ್ಬರ್ ಗುಂಡುಗಳನ್ನು ಸಿಡಿಸಿರುತ್ತಾರೆ ಹಾಗೂ ಲಾಠಿ ಪ್ರಹಾರ ಮಾಡಿರುತ್ತಾರೆ. ಲಾಠಿ ಪ್ರಹಾರದಲ್ಲಿ ಅಂದಾಜು 35 ಜನರು ಗಾಯಗೊಂಡಿದ್ದು, ಇದರಲ್ಲಿ ಕೆಲವರು ಸ್ವತ: ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಕೆಲವರಿಗೆ ಪೋಲೀಸರು ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ಈ ಗುಂಪಿನ ಜನರು ಸರ್ಕಾರ್ರದ ವಿರುದ್ಧ ಘೋಷಣೆಗಳನ್ನು ಕೂಗಿರುತ್ತಾರೆ. ದಸ್ತಗಿರಿ ಮಾಡಿದವರನ್ನು ವಿಚಾರಣೆ ಮಾಡುವಾಗ ಬಂಧಿತರಲ್ಲಿ ಕೆ.ಎಫ್.ಡಿ ಮುಖಂಡರು

ಸಹ ಇದ್ದರೆಂದು ತಿಳಿದುಬಂದಿದೆ. ಕಲಂ 144 ಸಿ.ಆರ್.ಪಿ.ಸಿ ಅನ್ವಯ ನಿಷೇದಾಜ್ಞೆಯನ್ನು ಎನ್.ಆರ್.ಮೊಹಲ್ಲಾ, ಉದಯಗಿರಿ, ಮಂಡಿಮೊಹಲ್ಲಾ ಹಾಗೂ ಕೆ.ಆರ್.ಪುರ್ ವ್ಯಾಪ್ತಿಯಲ್ಲಿ ದಿನಾಂಕ 13.07.2009 ರವರೆಗೆ ವಿಸ್ತರಿಸಲಾಗಿದೆ. ಮೈಸೂರಿನಲ್ಲಿರುವ ಆರ್.ಎ.ಎಫ್. ತುಕಡಿಗಳನ್ನು ಗುಂಪನ್ನು ಚದುರಿಸಲು ಉಪಯೋಗಿಸಲಾಗಿದೆ. ಈಗ ಪರಿಸ್ಥಿತಿ ಸಧ್ಯ ನಿಯಂತ್ರಣದಲ್ಲಿದ್ದು, ಶಾಂತವಾಗಿರುತ್ತದೆ. ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಬೆಂಗಳೂರಿನಿಂದ ಹಿರಿಯ ಅಧಿಕಾರಿಗಳನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ.

ಮಾನ್ಯ ಅಧ್ಯಕ್ಷರೇ ಕೆಲವೊಂದು ವಿಚಾರವನ್ನು ಈಗ ನಮ್ಮ ಪ್ರತಿಪಕ್ಷದ ಸದಸ್ಯರು ಪ್ರಮುಖವಾಗಿ ಹೇಳಿದ್ದಾರೆ. ಎಲ್ಲರೂ ಹೇಳಿರುವಂಥದ್ದು ಒಂದು ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು. ನ್ಯಾಯಾಂಗ ತನಿಖೆಯಾಗುವಂಥದ್ದಕ್ಕೆ as it is ಸರ್ಕಾರದ್ದೇನು ಅದರ ಬಗ್ಗೆ allergy ಎಂದೇನೂ ಇಲ್ಲ ಆದರೆ ನಾವು ನೋಡಿದ್ದೇವೆ, ತಾವೂ ನೋಡಿದ್ದೀರಿ, ಹಿಂದೆ ಈ ರಾಜ್ಯದಲ್ಲಿ ನ್ಯಾಯಾಂಗ ತನಿಖೆಗಳು ಇಂಥ ಘಟನೆಗಳು ಆದಾಗ ಮಾಡದಂಥವು, ತಮಗೂ ಗೊತ್ತಿದೆ, ತಾವು ಗೃಹಸಚಿವರಾಗಿದ್ದವರು, ಈ ಭಟ್ಕಳದಲ್ಲಿ ಗಲಭೆ ಬಗ್ಗೆಯೇ ಎರಡು ನ್ಯಾಯಾಂಗ ತನಿಖೆ ಒಂದು ಜಸ್ಟಿಸ್ ಜಗನ್ನಾಥ್ ಶೆಟ್ಟರದ್ದು ಮತ್ತೊಂದು ರಾಮಚಂದ್ರಯ್ಯನವರದ್ದು ಆಗಿತ್ತು. ವರದಿ ಕೊಟ್ಟು ಹೆಚ್ಚು ಕಡಿಮೆ ಹತ್ತು ವರ್ಷಗಳಾಯಿತು ಅದರ ಮೇಲೆ ತನಿಖೆಯು protracted ಬಹಳ ನಿಧಾನವಾಗಿಯಾಗುವಂಥದ್ದು ಮತ್ತು 10 ವರ್ಷಗಳ ನಂತರವೂ ಇವತ್ತು ಅದರ ಬಗ್ಗೆ ಏನು ಫಲಶೃತಿ ಬಂದ ಹಾಗಿಲ್ಲ. ಹಾಗಿರುವಾಗ ಒಂದೆರಡು ಘಟನೆಗಳ ಬಗ್ಗೆ ಏಳೆಂಟು ವರ್ಷಗಳಾದರೂ ಅದನ್ನು ವಿಧಾನಮಂಡಲದಲ್ಲಿಡಲಿಲ್ಲ. ಈಗಲೂ ಅದು ಕ್ಯಾಬಿನೆಟ್‌ನಲ್ಲಿ 2006, 2007ರಲ್ಲಿಯೂ ಬಂದಿತು.

ಅಧ್ಯಕ್ಷರು: ಅವೆರಡೂ ಅಸೆಂಬ್ಲಿಯಲ್ಲಿಯೂ ಮಂಡನೆಯಾಗಲಿಲ್ಲ.

ಶ್ರೀ ವಿ.ಎಸ್.ಆಚಾರ್ಯ: 2006–07 ರಲ್ಲಿ ನಾವು ಭಾಗಿಯಾಗಿದ್ದಂಥ ಸಮ್ಮಿಶ್ರ ಸರ್ಕಾರವಿದ್ದಾಗ.. ನಾನು ಹೇಳುತ್ತಿರುವಂಥದ್ದು ನಮ್ಮ ಶಾಸಕರು ಚಿತ್ತರಂಜನ್‌ರವರ ಹತ್ಯೆಯಾದ ಬಗ್ಗೆ ಪತ್ತೆಯಾಗಲಿಲ್ಲ, ಸಿ.ಬಿ.ಐ.ಗೂ ಕೊಟ್ಟರು. ಹೀಗೆಲ್ಲಾ ಇರುವಾಗ ನಮ್ಮ ನ್ಯಾಯಾಂಗ ತನಿಖೆಯಿಂದ ನಮಗೆ ಬೇಕಾಗುವಂಥ ಪರಿಹಾರ ಸಿಗುವುದಿಲ್ಲ. ಪೊಲೀಸರು ಯಾವಾಗ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಅವರನ್ನು booksಗೆ ತರುತ್ತಾರೆ ಅದರಿಂದ ನಮಗೆ ಒಳ್ಳೆಯ ಫಲಿತಾಂಶ ಸಿಗಬಹುದು ಎಂದು ಹೇಳುವಂಥ ವಿಶ್ವಾಸ ನಮ್ಮಲ್ಲಿದೆ ಇದು ಒಂದು ಭಾಗ ಮತ್ತು ನಮ್ಮ ಪ್ರತಿಪಕ್ಷದ ನಾಯಕರು ವಾಸಿಮ್ ಹತ್ಯೆಯ ಬಗ್ಗೆ ಹೇಳಿದರು, ಇವರನ್ನು ಕೊಲೆ ಮಾಡಿದವರು ಯಾರು ಎಂದು ಹೇಳಲಿಕ್ಕೆ ಗುಮಾನಿ ಹತ್ತಿರ ಬಂದಿದೆ. They are zeroing him ಆದರೆ ಆತ

absconding, ಸಿಗುತ್ತಿಲ್ಲ. ನಮಗೆ ಕೆಲವು ಮಾಹಿತಿಗಳು ಎಲ್ಲಾ ಸಿಗುತ್ತಿವೆ. ಆದರೆ investigation ನಡೆಯುತ್ತಿದೆ. ಅದೇರೀತಿ ಅಲ್ಲಿ ಯಾರು ಹಂದಿ ಮಾಂಸವನ್ನು ತಂದು ಹಾಕಿದರು ಅದರ ಬಗ್ಗೆ ಕೂಡ ತನಿಖೆ ನಡೆಯುತ್ತಿದೆ. ಆರು ಟೀಮ್ ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಅದರ ಬಗ್ಗೆ ಸದನಕ್ಕೆ ನಾನು ಭರವಸೆಯನ್ನು ಕೊಡುತ್ತೇನೆ, ಯಾರೇ ಮಾಡಿರಲಿ, ತಪ್ಪಿತಸ್ಥರೇ ಯಾರೇ ಇರಲಿ, provoke ಮಾಡಿದವರು, ಈ ಗುಂಪುಗಲಭೆ ನೆಪದಲ್ಲಿ ಅಮಾಯಕರ ಪ್ರಾಣ ಹೋಗಿರುವುದು ಇವೆಲ್ಲವನ್ನು books ಗೆ ತರುವಂಥ ಪ್ರಯತ್ನ ನಾವು ಖಂಡಿತವಾಗಿ ಮಾಡಿ ಅವರಿಗೆ ಶಿಕ್ಷೆಯನ್ನು ಕೊಡಿಸುವಂಥ ಕೆಲಸವನ್ನು ಮಾಡುತ್ತೇವೆ. ಇನ್ನು ಅಮಾಯಕರ ಮೇಲೆ ಕೇಸು ಇರುವುದರ ಬಗ್ಗೆ ಹೇಳುವುದಾದರೆ ಆದಷ್ಟು ಮಟ್ಟಿಗೆ ಯಾರು ಇದರಲ್ಲಿ involve ಆಗದೇ ಇದ್ದವರನ್ನು ಒಬ್ಬರನ್ನು ಹಿಡಿಯಲಿಕ್ಕೆ ಹೋಗಲಿಲ್ಲ. ವಿಡಯೋ ಕ್ಲಿಪಿಂಗ್‌ನಲ್ಲಿ ಕಲ್ಲು ಹೊಡೆಯುವುದು, ದೊಡ್ಡ ರೀತಿಯಲ್ಲಿ ಅಮಾನುಷ ಕೃತ್ಯದಲ್ಲಿ ತೊಡಗಿರುವಂಥವರ ಚಿತ್ರ ಕಂಡು ಬಂದಲ್ಲಿ ಅವರನ್ನು ಮುಖ್ಯವಾಗಿ ಹಿಡಿದಿದ್ದೇವೆ. ಒಂದು ವೇಳೆ ತನಿಖೆ ನಂತರ ಅವರ ಪಾತ್ರ ಏನು ಇಲ್ಲವೆಂದರೆ ಅವರನ್ನು ಬಿಡುಗಡೆಮಾಡಿ ಅವರ ಮೇಲೆ ಇರುವ ಕೇಸು ಬಿಡುವಂಥ ಕೆಲಸವೂ ಕೂಡ ಆಗುತ್ತದೆ ಮತ್ತು ತನ್ವೀರ್ ಸೇಠ್‌ರವರು ಆ ವ್ಯಾಪ್ತಿಯಲ್ಲಿರುವಂಥ ರೌಡಿ ಶೀಟ್‌ನಲ್ಲಿರುವಂಥವರು ಯಾರು ಇನ್ನೊಂದು ಯಾರ ಮೇಲೆ bad elements ಇದೆ ಅವರನ್ನು ಪತ್ತೆ ಹಚ್ಚುವ ಬಗ್ಗೆ ಒಂದು ಟೀಮ್ ಕೆಲಸ ಮಾಡುತ್ತಿದೆ. ತನ್ವೀರ್ ಸೇಠ್‌ರವರು 2ನೇ ತಾರೀಖಿನ ಬೆಳಗಿನಿಂದಲೇ ಫೋನಿನಲ್ಲಿ ಹಾಗೂ ಪತ್ರ ಫ್ಯಾಕ್ಸ್ ಮಾಡುವ ಮುಖೇನ ಸಂಪರ್ಕವನ್ನು ನನ್ನೊಂದಿಗೆ ಇಟ್ಟುಕೊಂಡಿದ್ದರು. ಹಿಂದಿನ ಬಾರಿಯೂ ತಾವು ಆ ರೀತಿ ಮಾಡಿದ್ದರು. ಏಪ್ರಿಲ್ ನಂತರ ಅಲ್ಲಿನ ಜಿಲ್ಲಾ ಸಚಿವರು ಏಕೆ ಶಾಂತಿಸಭೆಯನ್ನು ಮಾಡಲಿಲ್ಲವೆಂದರೆ ತಮಗೆಲ್ಲರಿಗೂ ಗೊತ್ತಿರುವಂಥೆ ಏಪ್ರಿಲ್‌ನಲ್ಲಿ ಯಾವ ಕಾಲದಲ್ಲಿ ಆ ಘಟನೆ ನಡೆಯಿತು. ನಾವೆಲ್ಲಾ ಲೋಕಸಭೆ ಚುನಾವಣೆ ಮಧ್ಯದಲ್ಲಿದ್ದೆವು. ನಮ್ಮ ಜಿಲ್ಲಾ ಸಚಿವರಾದ ನಮ್ಮ ಗ್ರಾಮೀಣ ಅಭಿವೃದ್ಧಿ ಸಚಿವರು ಅಲ್ಲಿ ಹೋದಾಗ ಅವರಿಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬೇರ್‍ಯಾವುದೆ ವಿಚಾರದ ಬಗ್ಗೆ ಮಾತನಾಡಬಾರದು, ಸಭೆ ನಡೆಸಬಾರದು ಎಂದು ತಿಳಿಸಲಾಯಿತು.

8. ಮುಖ್ಯಮಂತ್ರಿಗಳ ಹೇಳಿಕೆ:

ವಿಷಯ: ಸರ್ವಜ್ಞನ ಪ್ರತಿಮೆಯನ್ನು ಚನ್ನೈನಲ್ಲಿ ಸ್ಥಾಪಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ನಾನು ಈಗ ಒಂದು statement ಮಾಡುತ್ತಿದ್ದೇನೆ.